ಶ್ರೀ ಬಸವಣ್ಣನವರ

ವಚನ ಸಂಗ್ರಹ

ಸಾಹಿತ್ಯ ಅಕಾದೆಮಿ, ಹೊಸ ದೆಹಲಿ

ಶ್ರೀ ಬಸವಣ್ಣನವರ ವಚನ ಸಂಗ್ರಹ

ಶ್ರೀ ಬಸವಣ್ಣನವರ

ವಚನ ಸಂಗ್ರಹ

ಸಂಪಾದಕರು :

ಸ. ಸ. ಮಾಳವಾಡ

ಸಾಹಿತ್ಯ ಅಕಾದೆಮಿಯ ಪರವಾಗಿ

ಪ್ರತಿಭಾ ಗ್ರಂಥಮಾಲೆ

ಧಾರವಾಡ

Sri Basavannanavara Vachana Sangraha (**Selected Vachanas of Sri Basavanna**) **compiled by S. S. Malwad and published by Pratibha GranthaMala, Dharwar 1. on behalf of Sahitya Akademi, New Delhi, 1963. Price Rs. 3·00.**

ಪ್ರಥಮ ಆವೃತ್ತಿ : ೧೯೬೩

ಪ್ರಕಾಶಕರು :

ಪ್ರತಿಭಾ ಗ್ರಂಥಮಾಲೆ

ಸಮಾಜ ಪುಸ್ತಕಾಲಯ, ಧಾರವಾಡ ೧

Also available at:

Sahitya Akademi, New Delhi

ಬೆಲೆ : ರೂ. ೩·೦೦

ಮುದ್ರಕರು :

ಪ್ರತಿಭಾ ಮುದ್ರಣ, ಧಾರವಾಡ

ಶ್ರೀ ಬಸವಣ್ಣನವರ ವಚನ ಸಂಗ್ರಹ

ಪೀಠಿಕೆ

(೧)

ಮಾನವನ ಸಾಂಸ್ಕೃತಿಕ ಇತಿಹಾಸದಲ್ಲಿ ಶ್ರೀ ಬಸವಣ್ಣನವರು ಉನ್ನತವಾದ ಸ್ಥಾನವನ್ನು ಪಡೆದಿದ್ದಾರೆ. ಅವರ ಜೀವನವಾಹಿನಿಯಲ್ಲಿ ಧಾರ್ಮಿಕ, ಸಾಮಾಜಿಕ, ವೈಚಾರಿಕ, ಸಾಹಿತ್ಯಿಕ ಕ್ರಾಂತಿಗಳು ಮೇಳವಿಸಿವೆ. ಎಂಟುನೂರು ವರುಷಗಳ ಹಿಂದಿನ ಬಸವ ಸಂದೇಶವು ಇಂದಿನ ಜೀವನಕ್ಕೂ ಸಮುಚಿತವಾದ ಮಾರ್ಗದರ್ಶನವನ್ನು ನೀಡುವಂತಿದೆ.

ಹನ್ನೆರಡನೆಯ ಶತಮಾನದ ಮಧ್ಯಭಾಗದಲ್ಲಿ ಬಾಳಿದ ಬಸವಣ್ಣನಿಂದ ಭಾರತದ ಆಧ್ಯಾತ್ಮಿಕ ಭಾಂಡಾರವು ಬೆಳವಣಿಗೆ ಪಡೆಯಿತು. ಕರ್ನಾಟಕದಲ್ಲಿ ನವೋದಯವು ಮೂಡಿಬಂದಿತು. ನವೀನವಾದ ಸಾಮಾಜಿಕ ಸಂಸ್ಕರಣ ನಡೆಯಿತು. ಕನ್ನಡ ಸಾಹಿತ್ಯಚರಿತ್ರೆಯಲ್ಲಿ ಬಸವಣ್ಣ ಒಬ್ಬ ಯುಗಪುರುಷನಾಗಿದ್ದಾನೆ. ಗೂಢವಾದ ಆತ್ಮ-ಪರಮಾತ್ಮ ತತ್ತ್ವಗಳನ್ನು ಶೋಧಿಸಿ ತೋರುವ ದಿವ್ಯ ಸಾಧಕ ಮಾತ್ರ ಅವನಾಗಿರದೆ, ತನ್ನರಿವು ಮತ್ತು ದೇವನರಿವು ಸಕಲರಿಗೂ ಸುಲಭವಾಗುವಂತೆ ಬೋಧಿಸುವ ವಿಚಾರಪೂರ್ಣ ರಸಮಯ ವಚನಗಳಿಂದ ಜನಜೀವನಪ್ರವಾಹದ ದಿಕ್ಕನ್ನೇ ಬದಲಿಸಿದ ಶಕ್ತಿಶಾಲಿ ಮಹಾನುಭಾವನಾಗಿದ್ದಾನೆ. ಕೆಲವೊಂದು ವರ್ಗದ ಗುತ್ತಿಗೆಯಾಗಿದ್ದ ಜ್ಞಾನಭಾಂಡಾರವನ್ನು ಮೇಲು ಕೀಳೆನ್ನದೆ, ಗಂಡು ಹೆಣ್ಣೆನ್ನದೆ, ಎಲ್ಲರಿಗೂ ಹಂಚುವ ಕಾರ್ಯವನ್ನು ವಹಿಸಿಕೊಂಡು ಜನಸಾಮಾನ್ಯರನ್ನು ಆತ್ಮೋದ್ಧಾರದ ಹಾದಿಯಲ್ಲಿ ನಡೆಸಿದ ಪುಣ್ಯಜೀವಿ ಬಸವಣ್ಣ. ಶಿವನ ವಾಹನವಾದ ವೃಷಭನು ಶಿವನ ಆಜ್ಞೆಯಂತೆ ಭೂಲೋಕದಲ್ಲಿ ಧರ್ಮೋದ್ಧಾರಕ್ಕೆಂದು ಬಂದ ಅವತಾರ-

ಪುರುಷ ಬಸವಣ್ಣನೆಂದು ಭಾವಿಸುವ ಧಾರ್ಮಿಕ ಶ್ರದ್ಧೆಯೂ ಇದೆ. ಬಸವಣ್ಣ ಕೈಕೊಂಡ ಕಾರ್ಯಗಳ ಘನತೆ, ವ್ಯಾಪಕತೆಗಳು, ಆತನ ಸಾಧನೆಯ ಹಿರಿಮೆ, ಸಿದ್ಧಿಯ ಎತ್ತರ, ಆತನ ವಚನಗಳಿಂದ ವ್ಯಕ್ತವಾಗುವ ಆತನ ಅಲೌಕಿಕ ಮೂರ್ತಿಸ್ವರೂಪ ಇವುಗಳಿಂದ ಆ ಧಾರ್ಮಿಕಶ್ರದ್ಧೆ ಅರ್ಥಪೂರ್ಣವೆಂದು ತೋರುತ್ತಿದೆ. ಭಾರತದ ಧಾರ್ಮಿಕ ರಂಗದಲ್ಲಿ ಕರ್ಮಕಾಂಡವು ಅತಿರೇಕಕ್ಕೆ ಇಳಿದ ಬೇರೆ ಬೇರೆ ಕಾಲದಲ್ಲಿ ಪ್ರತಿಭಟನೆಗಳು ಹೊರಹೊಮ್ಮಿವೆ. ಶುದ್ಧ ಆತ್ಮಜ್ಞಾನವನ್ನು ಬೋಧಿಸಿದ ಉಪನಿಷತ್ತುಗಳಲ್ಲಿಯೇ ಈ ಪ್ರತಿಭಟನೆಯು ಮೂಡಿಬಂದಿದೆ. ಕರ್ಮಕಾಂಡಕ್ಕೆ ಪ್ರತಿಯಾಗಿ ಶುದ್ಧ ಆತ್ಮಜ್ಞಾನವನ್ನು ಎತ್ತಿ ಹಿಡಿದ ಸಂದೇಶವು ಉಪನಿಷತ್ತುಗಳಲ್ಲಿದೆ. ನಿಸರ್ಗದ ಬಗೆಬಗೆಯ ಶಕ್ತಿ-ಗಳ ಉಪಾಸನೆಯು ಹಿಂದಾಗಿ ಸರ್ವಶಕ್ತ ಒಬ್ಬ ಭಗವಂತನ ಬಗೆಗೆ ಜ್ಞಾನ-ವನ್ನು ಹರಡುವ ಕಾರ್ಯ ಉಪನಿಷತ್ತುಗಳಿಂದ ನಡೆಯಿತು. ಆದರೆ ಕಾಲ-ಕಳೆದಂತೆ ಈ ಸಂದೇಶದಲ್ಲಿ ತರ್ಕಪ್ರಕಾಂಡತೆಯು ಬೆಳೆಯಿತೆಂದು ತೋರು-ತ್ತದೆ. ಬುದ್ಧಿಶಕ್ತಿಯೇ ಮಾನವನ ಪರಮ ಸಾಧನವಲ್ಲವೆಂಬುದನ್ನು ಮನ-ವರಿಕೆ ಮಾಡಿಕೊಡಬೇಕಾದ ಪರಿಸ್ಥಿತಿಯು ತಲೆದೋರಿತು. ಹಿಂದೊಮ್ಮೆ ಕರ್ಮಕಾಂಡದ ಬಗೆಗೆ ಕಂಡುಬಂದ ನಿರಾಶೆಯು ಈಗ ಜ್ಞಾನಕಾಂಡಕ್ಕೂ ಹರಿದುಬಂದಿತು. ಆಗ ಹೃದಯದ ಶಕ್ತಿಯನ್ನು ಗಮನಿಸಿದ ಭಕ್ತಿಮಾರ್ಗವು ಹೊರಹೊಮ್ಮಿತು. ಕರ್ಮ, ಜ್ಞಾನ, ಭಕ್ತಿಗಳ ಸಮನ್ವಯವನ್ನು ಸಾರಿದ ಭಗವದ್ಗೀತೆಯ ಸಂದೇಶವೂ ಧಾರ್ಮಿಕ ರಂಗದಲ್ಲಿ ಒಂದು ಮಹತ್ತ್ವದ ಪ್ರತಿ-ಭಟನೆಯಾಗಿ ಪರಿಣಮಿಸಿತು. ಮಾನವನ ದುಃಖಪರಂಪರೆಗೆ ಪರಿಹಾರವನ್ನು ಕಂಡುಕೊಳ್ಳಲು ಗೂಢ ಚಿಂತನೆಯಲ್ಲಿ ತೊಡಗಿದ ಬುದ್ಧ, ಅಹಿಂಸೆಯ ತಳ-ಹದಿಯ ಮೇಲೆ ಮಾನವರ ಸುಖವನ್ನು ಹೆಚ್ಚಿಸುವ ದೃಷ್ಟಿಯುಳ್ಳ ಮಹಾ-ವೀರ–ಇವರಿಂದಲೂ ಭಾರತದ ಧಾರ್ಮಿಕ ಪರಂಪರೆಗೆ ಪ್ರತಿಭಟನೆಗಳು ಒದಗಿ-ಬಂದವು. ಬೌದ್ಧ, ಜೈನ ಧರ್ಮಗಳಲ್ಲಿ ವಿರಕ್ತಿಗೆ ದೊರೆತ ಅತಿಪ್ರಾಶಸ್ತ್ಯ, ಪರಮಾತ್ಮನ ಅಸ್ತಿತ್ವದ ಬಗೆಗೆ ಕಂಡುಬಂದ ಮೌನಗಳಿಂದಾಗಿ ಜನಸಾಮಾ-ನ್ಯರು ತಮ್ಮ ಚಿರಂತನ ಪ್ರಶ್ನೆಗೆ ಸಮಾಧಾನವನ್ನು ಕಂಡುಕೊಳ್ಳಲು ಸಮರ್ಥ-ರಾಗಲಿಲ್ಲ. ಮುಂದೆ ಅದ್ಭುತ ಶಕ್ತಿಶಾಲಿ ಶಂಕರಾಚಾರ್ಯರು ಪರಮಾತ್ಮನ ಅಸ್ತಿತ್ವದತ್ತ ಜನತೆಯ ಗಮನವನ್ನು ಸೆಳೆಯಬೇಕಾಯಿತು. ಅದು ಪರಿ-

ಣಾನುಕಾರಿಯೂ ಆಯಿತು. ಆದರೆ ಕಾಲಾನುಕ್ರಮದಲ್ಲಿ ಮಾಯಾವಾದವು ಅತಿಯಾದ ಪ್ರಾಶಸ್ತ್ಯವನ್ನು ಪಡೆದಾಗ ಅದು ಜನಸಾಮಾನ್ಯರನ್ನು ಆಕರ್ಷಿಸದೆ ಹೋಯಿತು. ಆಗ ಹೊಸದೊಂದು ಮಾರ್ಗದರ್ಶನದ ಆವಶ್ಯಕತೆಯು ಕಂಡುಬಂದಿತು. ಧಾರ್ಮಿಕ ರಂಗದಲ್ಲಿ ಬಗೆಬಗೆಯ ವಾದಗಳು ತಲೆದೋರಿದಾಗ, ಅವುಗಳ ಜಟಿಲತೆಯನ್ನು ಜನತೆ ಅರ್ಥಮಾಡಿಕೊಳ್ಳಲು ಅಸಮರ್ಥವಾದಾಗ ಹೊಸ ಬೆಳಕಿನ ಅವತರಣವಾಗಬೇಕಾಗುತ್ತದೆ. ಅಂತಹ ಬೆಳಕಿಗಾಗಿ ಜನತೆ ಹಾತೊರೆಯುತ್ತಿರುವಾಗ ಬಸವಣ್ಣ ಹುಟ್ಟಿಬಂದ.

ಬುದ್ಧನ ಕಾಲ ಸಂದು ಹದಿನೆಂಟು ಶತಮಾನಗಳು ಉರುಳಿದ್ದವು. ಶಂಕರಾಚಾರ್ಯನ ಕಾಲವಾಗಿ ಕೆಲವು ಶತಮಾನಗಳು ಕಳೆದಿದ್ದವು. ಧರ್ಮದ ಜಟಿಲತೆ, ವ್ರತಾಚಾರಗಳ ಸಂಕೀರ್ಣತೆಗಳ ಮಧ್ಯದಲ್ಲಿ ಈಗ ಜನತೆಗೆ ನಿಜದ ನೆಲೆ ಕಾಣದಂತಾಗಿತ್ತು. ಧರ್ಮದ ಕುರುಹುಗಳೆನಿಸಿದ ಬಾಹ್ಯ ಆಚಾರಗಳು, ಸಂಕೇತಗಳು ಪ್ರಬಲವಾಗಿ ಅಂತರಂಗದ ಪರಿಶುದ್ಧತೆ ದುರ್ಲಕ್ಷಿತವಾಗಿತ್ತು. ಅಲ್ಲದೆ ಆತ್ಮೋದ್ಧಾರಕ್ಕೆ ಅಗತ್ಯವಾದ ಜ್ಞಾನರಾಶಿಯು ಸಂಸ್ಕೃತ ವಾಣಿಯಲ್ಲಿ ಸಂಚಿತವಾಗಿತ್ತು. ಆದುದರಿಂದ ಆತ್ಮೋನ್ನತಿಯ ಹಂಬಲವಿದ್ದ ಸಾಮಾನ್ಯ ಜನತೆ ಆ ಜ್ಞಾನದ ಬೆಳಕಿನಿಂದ ವಂಚಿತವಾಗಿತ್ತು. ಆತ್ಮೋನ್ನತಿಯ ಹಾದಿಯನ್ನು ಸುಲಭಗೊಳಿಸಿ ಜನತೆಗೆ ಸರಿಯಾದ ಮಾರ್ಗದರ್ಶನ ಮಾಡಬೇಕಾದ ಆವಶ್ಯಕತೆಯು ಕಂಡುಬಂದ ಕಾಲದಲ್ಲಿಯೇ ಬಸವಣ್ಣ ಕರ್ನಾಟಕದ ಧಾರ್ಮಿಕ ರಂಗದಲ್ಲಿ ಪ್ರವೇಶಿಸಿದ. ಜನತೆ ಹಾರೈಸಿದ ಸಂದೇಶವನ್ನು ಬೀರಿದ. ಅಂದಿನ ಜೀವನದಲ್ಲಿ ಹೊಸ ಚೇತನವನ್ನು, ಬೆಳಕನ್ನು ತುಂಬಿದ. ತನ್ನ ಉಜ್ವಲವಾದ ಆತ್ಮಶಕ್ತಿಯಿಂದ, ವಾಕ್ಶಕ್ತಿಯಿಂದ ಜನಪದದ ಅಜ್ಞಾನ ತಮೋರಾಶಿಯನ್ನು ಹೋಗಲಾಡಿಸಿದ ಬಸವಣ್ಣ ಜಗಜ್ಯೋತಿಯೆನಿಸಿದ. ಅವನ ಮಾತು, ಕೃತಿ, ಉಪದೇಶಗಳಲ್ಲಿ ಕಂಡುಬಂದ ಹೊಸತನವು ಜನತೆಯನ್ನು ಆಕರ್ಷಿಸಿತು. ಆತನ ಸಂಘಟನೆಯಿಂದಾಗಿ ಅಂದಿನ ಧಾರ್ಮಿಕ, ಸಾಮಾಜಿಕ, ಸಾಹಿತ್ಯಿಕ ರಂಗಗಳಲ್ಲಿ ಮಹಾಪೂರವು ಹರಿದು ಬಂದಂತಾಯಿತು. ಅಂತರಂಗಶುದ್ಧಿಯ ಮಾನವ ನೀತಿಯ ತಿರುಳನ್ನು, ದೇಶಕಾಲಾತೀತವಾದ ಜನತೆಯ ಧರ್ಮವನ್ನು, ಆತ್ಮೋದ್ಧಾರದ ಹಾದಿಯನ್ನು ಬಸವಣ್ಣ ಸುಲಭವಾದ ರೀತಿಯಲ್ಲಿ ಬೋಧಿಸಿದ. ತನ್ನ ಸ್ವಂತ ಆಚರಣೆಯಲ್ಲಿ ಅದನ್ನು ಸಾಧಿಸಿ ಹೊಸ ಸಮಾಜವನ್ನು

ಸಂಘಟಿಸಿದ. ಹೊಸ ಬಗೆಯ ಸಾಹಿತ್ಯ ರಚನೆಗೂ ಆತನು ಸ್ಫೂರ್ತಿಯನ್ನು ಒದಗಿಸಿದ. ಜನಸಾಮಾನ್ಯರನ್ನು ಉದ್ಧರಿಸಲೆಂದು ಹೊರಟ ಮಹಾಬೋಧಕರು ದೇಶಭಾಷೆಗಳಲ್ಲಿ ತಮ್ಮ ಸಂದೇಶವನ್ನು ಬೀರುವುದರ ಮೂಲಕ ಸಫಲತೆಯನ್ನು ಪಡೆದಿದ್ದಾರೆ. ಬಸವಣ್ಣನಿಗೂ ಈ ಮಾತು ಅನ್ವಯಿಸುತ್ತಿದೆ. ಬುದ್ಧನು ಅವತರಿಸಿದ ಕಾಲದ ಹಿನ್ನೆಲೆಯೇ ಬಸವಣ್ಣ ಜನಿಸಿದಾಗಲೂ ಇತ್ತು. ಬುದ್ಧನಂತೆಯೆ ಬಸವಣ್ಣನೂ ಲೋಕಕಲ್ಯಾಣ ಕಾರ್ಯದಲ್ಲಿ ತೊಡಗಿದ. ಆಧುನಿಕ ಯುಗದಲ್ಲಿ ಮಹಾತ್ಮಾ ಗಾಂಧಿಯವರು ಜನಸಾಮಾನ್ಯಕೋಟಿಯನ್ನೇ ತಮ್ಮ ಕಾರ್ಯಕ್ಷೇತ್ರಕ್ಕಾಗಿ ಆರಿಸಿಕೊಂಡರು. ಅವರು ಜನತೆಯಲ್ಲಿ ಬಾಂಧವ್ಯ, ಸಮಾನತೆ, ಐಕ್ಯಭಾವ, ಸತ್ಯ, ಅಹಿಂಸೆ, ಸದಾಚಾರಗಳು ಬೆಳೆಯಬೇಕೆಂಬ ಸಂದೇಶವನ್ನು ನೀಡಿದರು. ಬಸಣ್ಣವನ ಸಂದೇಶದಲ್ಲಿಯೂ ಇವು ಪ್ರಮುಖವಾದ ಅಂಶಗಳಾಗಿವೆ. ಆತ್ಮನಿರೀಕ್ಷಣೆ, ಅಂತಃಶುದ್ಧಿ, ಸರಳತೆ, ವಿನಯ, ಸದ್ಭಕ್ತಿ, ಸದಾಚಾರಗಳಿಗೆ ಬಸವಣ್ಣ ಮಹತ್ತ್ವದ ಸ್ಥಾನ ಕೊಟ್ಟದ್ದನ್ನು ನಾವು ವಚನಗಳಿಂದ ಕಂಡುಕೊಳ್ಳುತ್ತೇವೆ. ಪರಿಶುದ್ಧ ವಿಚಾರ ಆಚಾರಗಳಿಂದ ಕೂಡಿ 'ನ್ಯಾಯನಿಷ್ಠುರಿ'ಯಾಗಿ ಬಾಳುವಾಗ ಬಸವಣ್ಣ ಯಾವ ದಾಕ್ಷಿಣ್ಯಕ್ಕೂ ಒಳಗಾಗದೆ ಲೋಕವಿರೋಧವನ್ನು ನಿರ್ಭಯವಾಗಿ ಎದುರಿಸಿದ. ಅವನ ಬಾಳಿನಲ್ಲಿ ನಿಸ್ಪೃಹಭಾವ, ಆತ್ಮವಿಶ್ವಾಸ, ಕೆಚ್ಚುಗಳನ್ನು ನಾವು ಕಾಣುತ್ತೇವೆ. ಆದರೆ ದಯೆ, ಕರುಣೆ, ಅನುಕಂಪೆಗಳೂ ಆತನ ಜೀವನದಲ್ಲಿ, ವಚನಗಳಲ್ಲಿ ಸ್ಫುಟವಾಗಿ ಕಂಡುಬರುತ್ತಿವೆ. ಬಸವಣ್ಣನ ವ್ಯಕ್ತಿತ್ವದಲ್ಲಿ ಬುದ್ಧನ ದಯೆ, ಮಹಾವೀರನ ಸರಳತೆ, ಕ್ರೈಸ್ತನ ಅನುಕಂಪೆ, ಮಹಮ್ಮದನ ಕೆಚ್ಚು, ಗಾಂಧೀಜಿಯ ಸತ್ಯ ಅಹಿಂಸೆಗಳ ನಿಷ್ಠೆ—ಇವೆಲ್ಲ ಮೇಳವಿಸಿದಂತಿವೆ. ಜಾಗತಿಕ ಮಹಾವಿಭೂತಿಗಳ ಸಾಮಾನ್ಯ ವೈಶಿಷ್ಟ್ಯಗಳನ್ನು ನಾವು ಬಸವಣ್ಣನಲ್ಲಿಯೂ ಕಾಣುತ್ತೇವೆ.

ಜಗತ್ತಿನ ಮಹಾವಿಭೂತಿಗಳ ಜೀವನ–ಸಂದೇಶ–ಸಾಧನೆಗಳನ್ನು ತುಲನಾತ್ಮಕವಾಗಿ ಪರಿಶೀಲಿಸಿದಾಗ ಅವುಗಳಲ್ಲಿ ಅನೇಕ ಹೋಲಿಕೆಗಳು ಕಂಡುಬರುತ್ತಿವೆ. ಧರ್ಮಬೋಧಕರನ್ನು ಕುರಿತ ಸ್ವಾಮಿ ವಿವೇಕಾನಂದರ ಒಂದು ಉಕ್ತಿ ಹೀಗಿದೆ :

They (prophets) are all manifestations of the infinite God. They are all pure and unselfish. They struggled and gave up their lives for us poor human beings.

ಈ ಬಗೆಯ ಉಕ್ತಿಗಳು ಬಸವಣ್ಣನವರ ವಿಷಯದಲ್ಲಿ ಯಥಾರ್ಥವೆನಿಸುತ್ತಿವೆ. ಇಂತಹ ಇನ್ನೂ ಕೆಲವು ಉಕ್ತಿಗಳನ್ನು ಇಲ್ಲಿ ಸಂಗ್ರಹಿಸಬಹುದು:

The great prophets were giants........They bore a gigantic world on their shoulders........

ಬುದ್ಧನ ಬಗ್ಗೆ ಹೇಳಲಾದ ಒಂದು ಮಾತು ಹೀಗಿದೆ:

Goutam was disgusted of the eternal metaphysical of his day and the cumbrous rituals and more especially the caste system.

ಈ ಮಾತು ಬಸವಣ್ಣನಿಗೂ ಅನ್ವಯಿಸುತ್ತಿದೆ. ಬುದ್ಧ–ಬಸವರ ಕಾಲದ ಹಿನ್ನೆಲೆಯೂ ಒಂದೇ ಬಗೆಯದಾಗಿದೆ. ಕರ್ಮಕಾಂಡದ ಜಂಜಡದಿಂದ ಜನತೆಯನ್ನು ಉದ್ಧರಿಸಿ ಸಚೇತನ ಸಮಾಜದ ಸಂಘಟನೆಯನ್ನು ಅವರು ಕೈಕೊಂಡರು. ಬಸವಣ್ಣನವರ ಸಂಘಟನೆಯಲ್ಲಿಯ ಕಾಯಕ ತತ್ತ್ವದಿಂದಾಗಿ ಅಲ್ಲಿ ಭಿಕ್ಷಾವೃತ್ತಿಗೆ ಅವಕಾಶ ದೊರೆಯಲಿಲ್ಲ.

ಕ್ರೈಸ್ತನನ್ನು ಕುರಿತ ಸ್ವಾಮಿ ವಿವೇಕಾನಂದರ ಹೇಳಿಕೆಯು ಬಸವಣ್ಣನವರಿಗೂ ಅನ್ವಯಿಸುವಂತಿದೆ:

But mark this giant. Centuries and ages pass. Yet the energy that he left upon the world is not yet stretched out; not expended to its full. It goes on gaining new vigour as the ages roll on.

ಯುಗಯುಗಗಳು ಕಳೆದಂತೆ ಮಹಾತ್ಮರ ಶಕ್ತಿಯು ಹೊಸ ಚೇತನವನ್ನು ಪಡೆಯುತ್ತಿದೆ. ಕ್ರೈಸ್ತನ ಸಂದೇಶವು ಪಡೆದ ವಿಶ್ವಪ್ರಚಾರವನ್ನು

ಬಸವಸಂದೇಶವು ಪಡೆದಿಲ್ಲವೆಂಬುದು ನಿಜವಾದರೂ ಆ ಬಗೆಯ ಸತ್ತ್ವವನ್ನು ಅದು ಒಳಗೊಂಡಿದೆಯೆಂಬುದನ್ನು ಬಸವಣ್ಣನವರ ವಚನಗಳ ಅಭ್ಯಾಸದಿಂದ ನಾವು ಕಂಡುಕೊಳ್ಳುತ್ತೇವೆ.

(೨)

ವಿಜಾಪುರ ಜಿಲ್ಲೆಯ ಬಾಗೇವಾಡಿ ಗ್ರಾಮದಲ್ಲಿ ಬಸವಣ್ಣ ಜನ್ಮ ತಾಳಿದ. ಸಮೀಪದಲ್ಲಿರುವ ಇಂಗಳೇಶ್ವರವು ಆ ಕಾಲದಲ್ಲಿ ಒಂದು ಧಾರ್ಮಿಕ ನೆಲೆಯಾಗಿತ್ತು. ಸಂಪ್ರದಾಯಶರಣ ಮನೆತನದ ಬಾಹ್ಯವ್ರತಾಚಾರಗಳು ಬಸವಣ್ಣನಿಗೆ ಒಪ್ಪಿಗೆಯಾಗಲಿಲ್ಲ. ತೀರ ಚಿಕ್ಕ ವಯಸ್ಸಿನಲ್ಲಿ ಅತ್ಯಂತ ಪ್ರಗತಿಪರದೃಷ್ಟಿಯುಳ್ಳ ಬಸವಣ್ಣ ತನ್ನ ಮನೆಯನ್ನು ತೊರೆದು ವಿಜಾಪುರ ಜಿಲ್ಲೆಯಲ್ಲಿಯೇ ಇರುವ ಕೂಡಲಸಂಗಮ ಕ್ಷೇತ್ರಕ್ಕೆ ಬಂದ. ಆತನ ದೈವೀಭಕ್ತಿ, ನಿಷ್ಠೆ, ಅಲೌಕಿಕ ಬುದ್ಧಿ, ಶೀಲಗಳನ್ನು ಗುರುತಿಸಿದ ಆ ಕ್ಷೇತ್ರದ ಸ್ಥಾನಪತಿಗಳು ಸಂಗಮೇಶ್ವರ ದೇವಾಲಯದಲ್ಲಿ ಆತನಿಗೆ ಆಶ್ರಯವನ್ನು ಒದಗಿಸಿದರು. ಬಸವಣ್ಣನ ವಿದ್ಯಾಭ್ಯಾಸವು ಅಲ್ಲಿಯೇ ನಡೆಯಿತು. ಆ ದೈವೀಸಾನ್ನಿಧ್ಯದಲ್ಲಿ ಬಸವಣ್ಣನ ವ್ಯಕ್ತಿತ್ವದ ವಿಕಾಸವೂ ಆಯಿತು. ಪ್ರತಿಭಾಶಾಲಿಯಾದ ಬಸವಣ್ಣ ಆತ್ಮೋದ್ಧಾರ ಲೋಕೋದ್ಧಾರಗಳ ಬಗೆಗೆ ಅಲ್ಲಿ ಚಿಂತನೆಯನ್ನು ನಡೆಯಿಸಿದ. ಪೂಜೆಯಲ್ಲಿ ತಲ್ಲೀನನಾದ. ದೈವೀಸಮರ್ಪಣೆಯನ್ನು ಬಲಿಸಿಕೊಂಡ. ಕರ್ಮಕಾಂಡವು ಪ್ರಚುರವಾಗಿ ಧಾರ್ಮಿಕ ಸಂಕೀರ್ಣತೆಯು ಹೆಚ್ಚಿ, ಜನತೆಗೆ ಸರಿಯಾದ ಹಾದಿ ತಿಳಿಯದಂತಹ ಪರಿಸ್ಥಿತಿ ಆಗ ನಿರ್ಮಾಣವಾಗಿತ್ತು. ಬಸವಣ್ಣ ಲೋಕೋದ್ಧಾರಕ್ಕಾಗಿ ಚಿಂತನೆ ನಡೆಯಿಸಿದಾಗ ಆತನಿಗೆ ಹೊಸ ಬೆಳಕು ಕಂಡುಬಂದಿತು. ಉತ್ಕಟವಾದ ಭಾವತಲ್ಲೀನತೆಯಲ್ಲಿ ತೊಡಗಿದಾಗ ಆತನಿಗೆ ದೈವೀವಾಣಿ ಕೇಳಬಂದಿತು. ಸಂಗಮೇಶ್ವರನು ಪ್ರತ್ಯಕ್ಷನಾಗಿ ಬಿಜ್ಜಳರಾಯನಿದ್ದ ಕಲ್ಯಾಣ ನಗರಕ್ಕೆ ಹೋಗಬೇಕೆಂದು ಬಸವಣ್ಣನಿಗೆ ಆದೇಶವಿತ್ತ. ಪೂಜೆಯ ತಲ್ಲೀನತೆಯಲ್ಲಿ ಮೈಮರೆಯುತ್ತಿದ್ದ ಬಸವಣ್ಣನಿಗೆ ಸಂಗಮನಾಥನನ್ನು ಬಿಟ್ಟು ಹೊರಡಲು ಮನಸ್ಸಿರಲಿಲ್ಲ. ಆಗ ಸಂಗಮನಾಥನು ಬಸವಣ್ಣ ಎಲ್ಲಿದ್ದರೂ ಆತನಿಗೆ ದೈವೀಸಾನ್ನಿಧ್ಯ ದೊರೆಯು-

ವುದೆಂಬ ಆಶ್ವಾಸನ ಕೊಟ್ಟ. ಅಲ್ಲದೆ ಬಸವಣ್ಣನಿಂದ ಮುಂದೆ ಮಾನವ ಕಲ್ಯಾಣದ ಕಾರ್ಯ ನಡೆಯಬೇಕಾಗಿರುವುದರಿಂದ ಆತನು ಕಲ್ಯಾಣಕ್ಕೆ ಹೋಗಬೇಕೆಂದು ತಿಳಿಸಿದ. ಆಗ ಬಸವಣ್ಣ ಕಲ್ಯಾಣ ನಗರಕ್ಕೆ ಹೊರಟ.

ಇಲ್ಲಿ ಸೂಚಿತವಾದ ಕಲ್ಯಾಣವು ಕಲ್ಯಾಣದ ಚಾಲುಕ್ಯರ ರಾಜಧಾನಿ. ಅದು ಈಗ ಗುಲಬುರ್ಗಾ ಜಿಲ್ಲೆಯಲ್ಲಿದೆ. ಅಲ್ಲಿ ಬಸವಣ್ಣ ಮತ್ತು ಇನ್ನಿತರ ಶರಣರ ಅನೇಕ ಸ್ಮಾರಕಗಳಿವೆ. ಈಗ ಆ ಪಟ್ಟಣವನ್ನು ಬಸವಕಲ್ಯಾಣ-ವೆಂದು ಕರೆಯಲಾಗುತ್ತಿದೆ. ಬಸವಣ್ಣನ ಚರಿತ್ರೆಯಲ್ಲಿ ಉಲ್ಲೇಖ ಪಡೆಯುವ ಬಿಜ್ಜಳನು ಕಲಚೂರ್ಯ ವಂಶದವನು. ಆತನು ಕ್ರಿ.ಶ. ೧೧೫೦ ರ ಸುಮಾರಿಗೆ ಕಲ್ಯಾಣದ ಚಾಲುಕ್ಯರ ಮಂಡಲೇಶ್ವರನಾಗಿದ್ದ. ಮೊದಲು ಮಂಗಳವೇಡೆಯಲ್ಲಿ ಆತನು ನೆಲಸಿದ್ದ. ಬಸವಣ್ಣನು ಬಿಜ್ಜಳನ ಮೊದಲಿನ ನೆಲೆಯಾದ ಮಂಗಳ-ವಾಡಕ್ಕೆ ಹೋದನೆಂಬ ಉಲ್ಲೇಖವು ಕೆಲವು ಕನ್ನಡ ಗ್ರಂಥಗಳಲ್ಲಿದೆ. ಮುಂದೆ ಬಿಜ್ಜಳನು ಕಲ್ಯಾಣಕ್ಕೆ ಹೋದಾಗ ಬಸವಣ್ಣನೂ ಅಲ್ಲಿಗೆ ಹೋಗಿ ನೆಲಸಿದ. ಕ್ರಿ. ಶ. ೧೧೬೩ ರ ಸುಮಾರಿಗೆ ಬಿಜ್ಜಳನು ಚಾಲುಕ್ಯ ದೊರೆ ಮೂರನೆಯ ತೈಲಪನನ್ನು ಹಿಂದೆ ಸರಿಸಿ ಚಾಲುಕ್ಯ ರಾಜ್ಯಭಾರವನ್ನು ತಾನೇ ವಹಿಸಿಕೊಂಡ. ಆರನೆಯ ವಿಕ್ರಮಾದಿತ್ಯನ ಕಾಲಕ್ಕೆ ರಾಜಕೀಯ ವೈಭವದಿಂದ ಮೆರೆದು ಪ್ರಸಿದ್ಧಿಯನ್ನು ಪಡೆದ ಕಲ್ಯಾಣವು ಹನ್ನೆರಡನೆಯ ಶತಮಾನದ ಮಧ್ಯಭಾಗ-ದಲ್ಲಿ ಬಸವಣ್ಣನಿಂದಾಗಿ ಮಾನವಕಲ್ಯಾಣದ ಕ್ರಾಂತಿಯ ನೆಲೆಯಾಗಿ ಸುವಿ-ಖ್ಯಾತಿಯನ್ನು ಪಡೆಯಿತು. ಈ ಕ್ರಾಂತಿ ನಡೆದುದು ಕಲಚೂರ್ಯ ಬಿಜ್ಜಳನ ಕಾಲದಲ್ಲಿಯೇ.

ಆರಂಭದಲ್ಲಿ ಬಸವಣ್ಣನು ಬಿಜ್ಜಳನ ಆಸ್ಥಾನದಲ್ಲಿ ಸಣ್ಣ ಸೇವಾಸ್ಥಾನ-ವನ್ನು ಸ್ವೀಕರಿಸಿದ. ಮುಂದೆ ತನ್ನ ಅಪ್ರತಿಮ ಬುದ್ಧಿಶಕ್ತಿಯಿಂದ, ಅಲೌಕಿಕ ವ್ಯಕ್ತಿತ್ವದ ತೇಜಸ್ಸಿನಿಂದ, ಉತ್ತರೋತ್ತರ ಉನ್ನತಿಯನ್ನು ಪಡೆದ. ಆತನು ಬಿಜ್ಜಳನ ಭಾಂಡಾರಿ, ಮುಖ್ಯ ಮಂತ್ರಿ ಆಗಿದ್ದನೆಂದು ಗ್ರಂಥಗಳಲ್ಲಿ ಹೇಳ-ಲಾಗಿದೆ. ಬಸವಣ್ಣನ ಏಳಿಗೆಯನ್ನು ಸಹಿಸದ ಜನರು ಆತನನ್ನು ನಿಂದಿಸುವ, ವಿರೋಧಿಸುವ ಕಾರ್ಯದಲ್ಲಿ ತೊಡಗಿದ್ದರು. ಆದರೆ ಬಸವಣ್ಣ ತನ್ನ ವ್ಯಕ್ತಿತ್ವ ವಿಶೇಷದಿಂದ ಕೆಲವರ ನಿಂದೆಯನ್ನು, ವಿರೋಧವನ್ನು ಎದುರಿಸಿಯೂ ತನ್ನ ಕಾರ್ಯವನ್ನು ಮುಂದುವರಿಸುವಲ್ಲಿ ಸಫಲತೆಯನ್ನು ಪಡೆದನು. ಬಸವಣ್ಣ-

ನಿಂದಾಗಿ ಬಿಜ್ಜಳನ ಭಾಂಡಾರ ಪ್ರವರ್ಧಮಾನವಾಯಿತು. ಆಡಳತೆಯಲ್ಲಿ ಸುಧಾರಣೆ, ಪ್ರಗತಿಪರ ವಿಕಾಸ ನಡೆದು ಜನತೆಯ ಹಿತ ಹೆಚ್ಚಿತು. ಆಗ ವಿರೋಧಿಗಳು ಬಸವಣ್ಣನ ಬಗೆಗೆ ಹೀನ ಆರೋಪಗಳನ್ನು ಮಾಡಿ ಬಿಜ್ಜಳನ ಮನಸ್ಸು ಕೆಡಿಸಲು ಪ್ರಯತ್ನಿಸಿದರು. ಅಜ್ಞರ ಮಾತ್ಸರ್ಯ, ನಿಂದೆ, ವಿರೋಧ-ಗಳನ್ನು ಸಹಿಸುವ ನೈತಿಕ ಧೈರ್ಯ ಬಸವಣ್ಣನದಾಗಿತ್ತು.

ಇತ್ತ ಬಸವಣ್ಣನ ಧಾರ್ಮಿಕ ಕಾರ್ಯರಂಗವೂ ವ್ಯಾಪಕವಾಗಹತ್ತಿತು. ಆಧ್ಯಾತ್ಮಿಕ ಜೀವನದಲ್ಲಿ ಆಸ್ಥೆಯಿರುವ ಅನೇಕರು ಬಸಣ್ಣನ ಅನುಯಾಯಿ-ಗಳಾದರು. ಬೇರೆ ಬೇರೆ ನಾಡುಗಳಿಂದ ಬಹುಜನರು ಕಲ್ಯಾಣಕ್ಕೆ ಆಗಮಿಸಿ-ದರು. ನವೀನವೂ ಸರಳವೂ ಆದ ಬಸವಣ್ಣನ ಬೋಧೆಯು ಸಾಮಾನ್ಯ ಜನತೆಯನ್ನು ಹೆಚ್ಚಾಗಿ ಆಕರ್ಷಿಸಿತು. ಸದ್ಭಕ್ತಿ–ಸದಾಚಾರಗಳ ತಳಹದಿಯ ಮೇಲೆ ಸಂಘಟಿತವಾದ ಶಿವಶರಣರ ಸಂಘವು ಏರ್ಪಟ್ಟಿತು. ಬಸವಣ್ಣನ ಪ್ರೇರಣೆಯಂತೆ ಶರಣರೆಲ್ಲ ಪ್ರತಿನಿತ್ಯ ಸೇರಿ ಶಿವಾನುಭವ ಗೋಷ್ಠಿಯನ್ನು ನಡೆ-ಸುತ್ತಿದ್ದರು. ಧಾರ್ಮಿಕರಂಗದಲ್ಲಿ ಪ್ರಜಾಪ್ರಭುತ್ವವನ್ನು ತರುವ ಪ್ರಯೋಗವು ಅದಾಗಿತ್ತು. ವೃತ್ತಿ, ಸ್ಥಾನ, ಕುಲಗಳ ಭೇದವನ್ನೆಣಿಸದೆ ಸಮಾನತೆಯ ಆಧಾರದ ಮೇಲೆ ಆಂತರಿಕ ಅನುಭವವನ್ನು, ವಿಚಾರಗಳನ್ನು ನಿರ್ವಂಚನೆ-ಯಿಂದ ವಿನಿಮಯ ಮಾಡುವ ಅವಕಾಶ ಅಲ್ಲಿ ಇತ್ತು. ಲೌಕಿಕ ಜೀವನ-ದೊಂದಿಗೆ ಆಧ್ಯಾತ್ಮವನ್ನು ಹೊಂದಿಸಿಕೊಳ್ಳುವ ವಿಧಾನದ ಬಗೆಗೂ ಅಲ್ಲಿ ಚರ್ಚೆ ನಡೆಯುತ್ತಿತ್ತು. ಈ ಬಗೆಯ ವಿಚಾರ-ವಿನಿಮಯದಲ್ಲಿ ಅಂತರಂಗ ಪರಿಶುದ್ಧಿ, ಭಕ್ತಿ, ಪರಮಾತ್ಮನ ಸಾಕ್ಷಾತ್ಕಾರ, ಲಿಂಗಾಂಗ ಸಾಮರಸ್ಯದಂತಹ ಧಾರ್ಮಿಕ ವಿಷಯಗಳೊಂದಿಗೆ ಅಸ್ಪೃಶ್ಯೋದ್ಧಾರ, ಸಾಮಾಜಿಕ ಸಂಸ್ಕರಣ, ಜಾತಿಭೇದನಿರಾಕರಣೆ, ಮಹಿಳೆಯರ ಉನ್ನತಿ, ಕಾಯಕತತ್ತ್ವ–ಇತ್ಯಾದಿ ಸಾಮಾಜಿಕ ವಿಚಾರಗಳೂ ಸಮಾವೇಶವಾಗುತ್ತಿದ್ದವು. ಹೊಸ ಸಾಮಾಜಿಕ ವಿಚಾರಗಳಿಗನುಗುಣವಾಗಿ ಸಾಮಾಜಿಕ ಸಂಘಟನೆ ನಡೆಯಿತು. ಕುಲವ-ನ್ನಲ್ಲದೆ ಶೀಲವನ್ನು ಗಮನಿಸಿದ ಹೊಸ ಸಮಾಜರಚನೆಯಲ್ಲಿ ತೀವ್ರಗಾಮಿ-ಯಾದ ಸುಧಾರಣೆಗಳು ಮೂಡಿಬಂದವು. ಆದರೆ ಸಂಪ್ರದಾಯವಾದಿಗಳು ಈ ಸಾಮಾಜಿಕ ಕ್ರಾಂತಿಯನ್ನು ವಿರೋಧಿಸಿ ಜನತೆಯಲ್ಲಿ ತ್ವೇಷವನ್ನು ತಂದರು. ಪ್ರಗತಿಪರ ಶರಣರು ಮತ್ತು ಸಂಪ್ರದಾಯವಾದಿಗಳಲ್ಲಿ ಘರ್ಷಣೆ ತಲೆದೋರಿತು.

ಆಗ ಶಿವಶರಣರ ಹಿಂಸೆ ನಡೆಯಿತು. ಅದರ ಪ್ರತಿಕ್ರಿಯೆಯೆಂದು ಶಿವಶರಣರು ಉಗ್ರಕ್ರಮಕ್ಕೆ ಅಣಿಯಾದರು. ಅಹಿಂಸಾವಾದಿ ಬಸವಣ್ಣನ ಉಪದೇಶ-ವನ್ನು ಸ್ವೀಕರಿಸಲು ಸಿದ್ಧವಿಲ್ಲದಂತಹ ಪರಿಸ್ಥಿತಿ ತಲೆದೋರಿದಾಗ ಬಸವಣ್ಣ ಅಂದಿನ ಚಳವಳಿಯನ್ನು ನಿಲ್ಲಿಸಿ ಕಲ್ಯಾಣವನ್ನು ತೊರೆದು ಸಂಗಮೇಶ್ವರಕ್ಕೆ ಮರಳಿ ಬರಬೇಕಾಯಿತು. ಅಲ್ಲಿಯ ಸಂಗಮನಾಥನಲ್ಲಿ ಬಸವಣ್ಣ ಐಕ್ಯನಾದ-ನೆಂಬ ಐತಿಹ್ಯವಿದೆ.

ಬಸವಣ್ಣನ ಕಾರ್ಯಸಂಘಟನೆಯು ಒಂದು ಮಹಾಪೂರದಂತಿದ್ದು ಅದರ ಕಾಲಾವಧಿಯೂ ಚಿಕ್ಕದಾಗಿದೆ. ಆದರೆ ಆಗ ಹೊರಹೊಮ್ಮಿದ ಚೇತನವು, ನಡೆದ ಸಾಧನೆಯು ಅದ್ಭುತವಾಗಿವೆ.

ಬಸವಣ್ಣನ ಲೌಕಿಕ ಜೀವನಕ್ಕೆ ಸಂಬಂಧಿಸಿದ ಕೆಲವು ವಿವರಗಳಲ್ಲಿ ಏಕರೂಪತೆಯಿಲ್ಲ. ಮಹಾಪುರುಷರ ಜೀವನವನ್ನು ಕುರಿತು ಬಗೆಬಗೆಯ ಹೇಳಿಕೆಗಳಿರುವುದು ವಾಡಿಕೆಯಾಗಿದೆ. ವಸ್ತುನಿಷ್ಠವಾದ ಜೀವನಚರಿತೆ-ಯನ್ನು ಬರೆಯುವ ಸಂಪ್ರದಾಯವೂ ಆ ಕಾಲದಲ್ಲಿ ಇರಲಿಲ್ಲ. ಶಕ್ತಿಶಾಲಿ-ಯಾಗಿ ಬಾಳಿ ಜನತೆಯ ಉದ್ಧಾರಕ್ಕೆ ಶ್ರಮಿಸಿ ಪ್ರಭಾವಶಾಲಿಯಾದ ವ್ಯಕ್ತಿ-ಯನ್ನು ಕುರಿತು ಬಗೆಬಗೆಯ ಸಾಹಿತ್ಯರಚನೆಯಾಗುವುದುಂಟು. ಅಂತೆಯೆ ಬಸವಣ್ಣನ ಬಗೆಗೆ ಬಂದ ಸಾಹಿತ್ಯವು ವಿಪುಲವಾಗಿದ್ದರೂ ವಿವರಗಳಲ್ಲಿ ಏಕ-ರೂಪತೆ ಕಂಡುಬರುವುದಿಲ್ಲ. ಆದರೆ ಮಹಾಪುರುಷರ ಲೌಕಿಕಜೀವನದ ವಿವರಗಳು ನಮಗೆ ಅಷ್ಟೊಂದು ಮಹತ್ತ್ವದವುಗಳಾಗುವುದಿಲ್ಲ. ಬಸವಣ್ಣನ ಘನವಾದ ಮೂರ್ತಿಸ್ವರೂಪ ಮತ್ತು ಸಂದೇಶಗಳು ಆತನು ರಚಿಸಿದ ವಚನ-ಗಳಲ್ಲಿ ಸ್ಪಷ್ಟವಾಗಿ ಮೂಡಿಬಂದಿವೆ. ಅವುಗಳನ್ನು ಅರಿತುಕೊಳ್ಳಬೇಕಾದುದು ಮಹತ್ವದ ಸಂಗತಿಯಾಗಿದೆ.

ಬಸವಣ್ಣನ ವಚನಗಳಲ್ಲಿ ಷಟ್ಸ್ಥಲ ಸಿದ್ಧಾಂತದ ನಿರೂಪಣೆಯಿದೆ. ಅದು ವೀರಶೈವ ಧರ್ಮದ ಸಿದ್ಧಾಂತವಾಗಿದೆ. ಪರಮಾತ್ಮನಿಂದ ಬೇರ್ಪಟ್ಟು ಸಂಸಾರದಲ್ಲಿ ಜನಿಸಿದ ಮಾನವನು ಗುರುವಿನ ದೀಕ್ಷೆಯಿಂದ ತನ್ನ ನಿಜಸ್ವರೂಪ-ವನ್ನು ಅರಿತುಕೊಂಡು ಇಷ್ಟಲಿಂಗದ ಮೂಲಕವಾಗಿ ಪರಮಾತ್ಮನಲ್ಲಿ ಐಕ್ಯ-ಭಾವವನ್ನು ಪಡೆಯುವಲ್ಲಿ ಆರು ಮೆಟ್ಟಿಲುಗಳಿವೆ. ಅವುಗಳನ್ನು ಸ್ಥಲಗಳೆಂದು ಹೇಳಲಾಗುತ್ತಿದೆ. ಅವುಗಳ ವಿವೇಚನೆಯು ಷಟ್ಸ್ಥಲ ಸಿದ್ಧಾಂತಗಳಲ್ಲಿ ಬರು-

ತ್ತಿದೆ. ಆರು ಅಂಗಸ್ಥಲಗಳು, ಆರು ಲಿಂಗಸ್ಥಲಗಳು ಮತ್ತು ಅವುಗಳ ಸಮೀಕರಣದ ಸಾಧನೆ—ಈ ವಿಷಯಗಳನ್ನು ಷಟ್ಸ್ಥಲ ಸಿದ್ಧಾಂತದಲ್ಲಿ ಪ್ರತಿಪಾದಿಸಲಾಗಿದೆ.

ವೀರಶೈವರ ಪರಮಗುರಿ ಲಿಂಗಾಂಗಸಾಮರಸ್ಯ. ಮಾನವ ದೇಹಧಾರಿಯಾದ ಪರಮಾತ್ಮನ ಚೇತನವು ಅಂಗ. ಮಾನವದೇಹಕ್ಕೆ ಮಾತ್ರ ಮಿತಿಗೊಳ್ಳದೆ ಜಗದ್ವ್ಯಾಪಿಯಾಗಿ, ಅತೀತವಾಗಿರುವ ಪರಮಾತ್ಮನ ಶುದ್ಧಸ್ವರೂಪವು ಲಿಂಗ. ಅಂಗವು ಕ್ರಮಕ್ರಮವಾಗಿ ವಿಕಾಸಹೊಂದಿ ಲಿಂಗದಲ್ಲಿ ಸಾಮರಸ್ಯ ಪಡೆಯುವ ಹಾದಿಯಲ್ಲಿ ಆರು ಸ್ಥಲಗಳಿವೆ. ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ—ಇವೇ ಆ ಆರು ಸ್ಥಲಗಳು. 'ವಿಶ್ವಾಸದಿಂದ ಭಕ್ತನಾಗಿ, ಆ ವಿಶ್ವಾಸದೊಳಗಣ ನಿಷ್ಠೆಯಿಂ ಮಹೇಶ್ವರನಾಗಿ, ಆ ನಿಷ್ಠೆಯೊಳಗಣ ಸಾವಧಾನದಿಂ ಪ್ರಸಾದಿಯಾಗಿ, ಆ ಸಾವಧಾನದೊಳಗಣ ಸ್ವಾನುಭಾವದಿಂ ಪ್ರಾಣಲಿಂಗಿಯಾಗಿ, ಆ ಸ್ವಾನುಭವದೊಳಗಣ ಅರಿವಿನಿಂ ಶರಣನಾಗಿ, ಆ ಅರಿವು ನಿಜದಲ್ಲಿ ಸಮರಸಭಾವವನೈದಿದೊಡೆ ಅದೇ ಐಕ್ಯಸ್ಥಲ' ಎಂಬ ಪ್ರಭುದೇವನ ವಚನದಲ್ಲಿ ಷಟ್ಸ್ಥಲಗಳ ತಿರುಳನ್ನು ಸಂಗ್ರಹಿಸಿ ಹೇಳಲಾಗಿದೆ. ಪ್ರಪಂಚದಲ್ಲಿ ಇದ್ದುಕೊಂಡು ಪ್ರಾಪಂಚಿಕ ಕ್ರಿಯೆಗಳನ್ನು ಪರಮಾರ್ಥದೊಂದಿಗೆ ಸಮನ್ವಯಗೊಳಿಸುವುದು ಷಟ್ಸ್ಥಲಮಾರ್ಗ. ಈ ಬಗೆಯ ಸಾಧನೆಗೆ ನೆರವಾಗುವ 'ಅಷ್ಟಾವರಣ' ಎಂಬ ಉಪಕರಣಗಳನ್ನು, 'ಪಂಚಾಚಾರ' ಎಂಬ ಆಚಾರಗಳನ್ನು ಹೇಳಿದೆ. ಇವುಗಳಿಂದ ವೀರಶೈವರ ನೈತಿಕ, ಆಧ್ಯಾತ್ಮಿಕ ಸಾಧನೆಯನ್ನು ಅರಿತುಕೊಳ್ಳಬಹುದು. ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ ವಿಭೂತಿ, ರುದ್ರಾಕ್ಷಿ, ಮಂತ್ರ—ಇವು ಅಷ್ಟಾವರಣಗಳು. ಲಿಂಗಾಚಾರ, ಸದಾಚಾರ, ಶಿವಾಚಾರ, ಭೃತ್ಯಾಚಾರ, ಗಣಾಚಾರ—ಇವು ಪಂಚಾಚಾರಗಳು. ಭಕ್ತಿ, ಜ್ಞಾನ, ಕ್ರಿಯೆಗಳ ಸಂಪೂರ್ಣ ಸಮನ್ವಯವು ಷಟ್ಸ್ಥಲ ಸಾಧನೆಯ ರಹಸ್ಯ. ಆರಂಭದ ಸ್ಥಲಗಳಲ್ಲಿ ದ್ವೈತಭಾವದ ಸೂಚನೆಯಿದೆ. ಮುಂದಿನ ಸ್ಥಲಗಳಲ್ಲಿ ಅದ್ವೈತಭಾವವು ಬಲಿಯುತ್ತ ಹೋಗಿ ಕೊನೆಯಲ್ಲಿ ಎಲ್ಲವೂ ಸಮರಸವಾಗಿ ಫಲಿಸುತ್ತಿದೆ. ಹೀಗೆ ದ್ವೈತಾದ್ವೈತಗಳ ಸಮನ್ವಯವೂ ಷಟ್ಸ್ಥಲ ಸಿದ್ಧಾಂತದಲ್ಲಿದೆ. ಧಾರ್ಮಿಕ ಜೀವನದ ಸಾಧನೆ, ನೈತಿಕ ಜೀವನದ ಪಾವಿತ್ರ್ಯ, ಪರಿಶುದ್ಧವಾದ ಜ್ಞಾನ, ತ್ಯಾಗದೃಷ್ಟಿಯಿಂದ ಕೂಡಿದ

ಭೋಗ, ಸರ್ವಾರ್ಪಣಭಾವದ ಭಕ್ತಿ, ಮಾನಸಿಕ ಮಹೋನ್ನತೀಕರಣದಿಂದ ದಿವ್ಯಜೀವನದ ಪಥ— ಇವೆಲ್ಲ ಷಟ್ಸ್ಥಲಸಿದ್ಧಾಂತದಲ್ಲಿ ಸಮಾವೇಶಗೊಂಡಿವೆ.

ಷಟ್ಸ್ಥಲಸಿದ್ಧಾಂತದ ಪಾರಿಭಾಷಿಕ ನಿರೂಪಣೆಯು ಈ ವಚನ ಸಂಗ್ರಹದ ಉದ್ದೇಶವಲ್ಲ. ಆ ವಿಶಿಷ್ಟ ಸಿದ್ಧಾಂತದ ಜಿಜ್ಞಾಸೆಯುಳ್ಳವರು ಸ್ಥಲಕಟ್ಟಿನ ವಚನಗಳ ಸ್ವರೂಪವನ್ನು ವ್ಯಾಸಂಗದ ವಿಷಯವನ್ನಾಗಿ ಮಾಡಿಕೊಳ್ಳಬೇಕಾಗುತ್ತದೆ. ಬಸವಣ್ಣನ ಲೋಕೋತ್ತರ ಮೂರ್ತಿಸ್ವರೂಪ, ಮಾನವೀಯ ಕಲ್ಯಾಣದ ಸಾರ್ವತ್ರಿಕ ಸಂದೇಶಗಳ ದೃಷ್ಟಿಯಿಂದ ಈ ಸಂಗ್ರಹದಲ್ಲಿ ವಚನಗಳನ್ನು ಅಳವಡಿಸಿಕೊಳ್ಳಲಾಗಿದೆ.

ಬಸವಣ್ಣನವರು 'ಭಕ್ತಿಭಾಂಡಾರಿ' ಎಂಬ ಮಾತು ಪ್ರಸಿದ್ಧವಿದೆ. ಅವರು 'ವಿನಯಭಾಂಡಾರಿ'ಗಳೂ ಅಹುದು. ಶರಣಸಮೂಹದಲ್ಲಿ ಉಚ್ಚಸ್ಥಾನವನ್ನು ಪಡೆದುಕೊಂಡು ಅಂದಿನ ಜೀವನದಲ್ಲಿ ಹಿರಿಯ ಪ್ರಭಾವವನ್ನು ಅವರು ಬೀರುತ್ತಿದ್ದರೂ 'ಎನಗಿಂತ ಕಿರಿಯರಿಲ್ಲ' ಎಂದು ಅವರು ಹೇಳಿಕೊಂಡಿದ್ದಾರೆ. ಅವರ ಸರಳ ನಿಷ್ಕಪಟ ಮನೋಭಾವವನ್ನು ಅವರ ವಚನಗಳು ಸ್ಪಷ್ಟವಾಗಿ ಘೋಷಿಸುತ್ತಿವೆ. ದಯವೇ ಧರ್ಮದ ಮೂಲವೆಂದು ಬೋಧಿಸಿದ ಅವರು ಮಾನವಪ್ರೇಮಿಗಳಾಗಿದ್ದರು. ಸಕಲ ಜೀವಾತ್ಮರ ಲೇಸನ್ನು ಬಯಸುವ ದೃಷ್ಟಿ ಅವರದಾಗಿತ್ತು. ಮನುಷ್ಯನು ಯಾವುದೇ ಸ್ಥಾನದಲ್ಲಿದ್ದರೂ ದೈಹಿಕ ಶ್ರಮದಿಂದ ಉಪಜೀವನ ಸಾಗಿಸಬೇಕೆಂದೂ, ಸಾದಾ ಜೀವನ ನಡೆಯಿಸಿ ಉಳಿದ ಗಳಿಕೆಯನ್ನೆಲ್ಲ ದೈವೀಕಾರ್ಯಕ್ಕಾಗಿ ಅರ್ಪಿಸಬೇಕೆಂದೂ ಹೇಳುವ ಅವರ ಕಾಯಕತತ್ತ್ವವು ಹೊಸ ಸಮಾಜಸಂಘಟನೆಯ, ದೈವೀಜೀವನದ ತಳಹದಿಯಾಯಿತು. ಅಂತೆಯೆ ಕಾಯಕವೇ ಕೈಲಾಸವೆಂಬ ಮಾತು ರೂಢಿಯಲ್ಲಿ ಬಂದಿತು. ಲೌಕಿಕ ಬಾಳಿನಲ್ಲಿ ಆಸೆ–ಆಮಿಷಗಳಿಗೆ ಒಳಗಾಗಬಾರದೆಂಬುದನ್ನು ಅವರು ಬೋಧಿಸಿ ಸಾಧಿಸಿದರು. ಇಹವೆಂಬುದು ಕರ್ತಾರನ ಕಮ್ಮಟವೆಂದು ಹೇಳಿದ ಬಸವಣ್ಣನವರು ಐಹಿಕ ಮತ್ತು ಪಾರಮಾರ್ಥಿಕ ಜೀವನದ ಸಮನ್ವಯವನ್ನು ರೂಢಿಗೊಳಿಸಿದರು. ಶುಷ್ಕ ವ್ರತಾಚಾರಗಳಲ್ಲಿ ಅಂತರಂಗದ ತಿರುಳನ್ನು ಮರೆತ ಸ್ವಧರ್ಮೀಯರನ್ನೂ, ಇತರರನ್ನೂ ಅವರು ನಿರ್ಭಯವಾಗಿ ಖಂಡಿಸಿದರು. ಲೋಕನಿಂದೆಯನ್ನು, ವಿರೋಧ-

ವನ್ನು ಎದುರಿಸುವ ಸತ್ತ್ವ ಬಸವಣ್ಣನವರಿಗಿತ್ತು. ಸರ್ವವನ್ನೂ ಪರಮಾತ್ಮನಿಗೆ ಅರ್ಪಿಸಿ ಆತನ ಕೃಪೆಯೊಂದನ್ನೇ ಹಾರೈಸುವ ದೃಷ್ಟಿ ಅವರದಾಗಿತ್ತು. ಇದು ಜಗತ್ತಿನ ಎಲ್ಲ ಮಹಾತ್ಮರ ರೀತಿಯೂ ಆಗಿದೆ.

ಗೂಢವಾದ ಧಾರ್ಮಿಕ ತತ್ತ್ವಗಳನ್ನು ಬಹು ಸುಲಭವಾಗಿ ಅಡಕವಾಗಿ ಹೇಳುವ ಬಸವಣ್ಣನವರ ನುಡಿಗಳು ಅವರ ಹಿರಿಮೆಯ ಪ್ರತೀಕವಾಗಿವೆ. ಸರಳವಾದ ನಡೆ–ನುಡಿಗಳು ಮಹಾತ್ಮರ ಇನ್ನೊಂದು ಲಕ್ಷಣ. ನಡೆ–ನುಡಿ ಸರಳವಾಗಿದ್ದರೂ ಲೋಕಹಿತದ ಕಾರ್ಯಸಾಧನೆಯು ವ್ಯಾಪಕವೂ ಶಕ್ತಿಯುತವೂ ಪ್ರಗತಿಪರವೂ ಆಗಿರುವುದನ್ನೂ ನಾವು ಬಸವಣ್ಣನವರ ಜೀವನ ಸಾಧನೆಗಳಲ್ಲಿ ಕಂಡುಕೊಳ್ಳುತ್ತೇವೆ. ಸತ್ಯ, ಪ್ರೇಮ, ದಯೆ, ಅಂತರಂಗಶುದ್ಧಿಗಳಂತಹ ಹಿರಿಯ ವೌಲ್ಯ, ಮಾನವೀಯ ಸಮಾನತೆ–ಗೌರವ, ಸಮಾಜದಲ್ಲಿ ಆರ್ಥಿಕ ಸ್ವಯಂಪೂರ್ಣತೆ, ಕುಲ, ವೃತ್ತಿ, ಲಿಂಗಗಳ ಭೇದವನ್ನು ಗಮನಿಸದೆ ಸದ್ಗುಣ ಸದಾಚಾರ, ಸಮಾನತೆಗಳ ಆಧಾರದ ಮೇಲೆ ನಡೆದ ಸಾಮಾಜಿಕ ಸಂಘಟನೆ—ಇವೆಲ್ಲವನ್ನೂ ಅಲ್ಪ ಕಾಲದಲ್ಲಿ ಸಾಧಿಸಿದ ಮಹತಿ ಬಸವಣ್ಣನವರದಾಗಿದೆ. ಪಾಪ–ಪುಣ್ಯ, ಸ್ವರ್ಗ–ನರಕ ಇತ್ಯಾದಿ ಜಟಿಲ ಪ್ರಶ್ನೆಗಳನ್ನು ಜನತೆಗಾಗಿ ಸುಗಮಗೊಳಿಸಿ, ಕರ್ಮಕಾಂಡದ ಪ್ರಾಚುರ್ಯವನ್ನು ಅಲ್ಲಗಳೆದು ಅಂತರಂಗಶುದ್ಧಿಯನ್ನೇ ಪ್ರಮುಖವಾಗಿ ಗಮನಿಸಿ ಬಸವಣ್ಣನವರು ಎಂಟುನೂರು ವರುಷಗಳ ಹಿಂದೆಯೇ ಜನತಾಧರ್ಮವನ್ನು, ಸಮಾನತೆಯ ತಳಹದಿಯುಳ್ಳ ಸಮಾಜವನ್ನು ರೂಢಿಯಲ್ಲಿ ತಂದರು. ದೇವನೊಬ್ಬನೇ ಎಂದು ಹೃದಯಂಗಮವಾಗಿ ಬೋಧಿಸಿ ದೇವನ ಬಗೆಗೆ ಸದ್ಭಕ್ತಿಯಿಂದ ಕೂಡಿ ಸದಾಚಾರದಿಂದ ಬಾಳುವ ಎಲ್ಲ ಮಾನವರು ಬಂಧುಗಳೆಂಬುದನ್ನು ಬಸವಣ್ಣನವರು ಅಂದು ಸಾಧಿಸಿ ತೋರಿಸಿದರು. ವಿರಸ, ವಿಷಮತೆ, ಅತೃಪ್ತಿಗಳಿಂದ ಕೂಡಿದ ಇಂದಿನ ವಿಶ್ವಕ್ಕೆ ಬಸವ ಸಂದೇಶವು ಹಿತಕಾರಿಯಾಗಿ ಪರಿಣಮಿಸಬಲ್ಲುದು. ಅಹಂಕಾರವನ್ನು ತೊರೆದು, ಸದುವಿನಯದಿಂದ ಕೂಡಿ ಪರಮಾತ್ಮನಿಗೆ ಸರ್ವಾರ್ಪಣ ಮಾಡಿ, ಸಕಲರ ಬಗೆಗೆ ದಯೆ, ಪ್ರೇಮಗಳನ್ನಿಟ್ಟುಕೊಂಡು ಸತ್ಯ-ಸದಾಚಾರಗಳನ್ನು ಆಚರಿಸಿ ಎಲ್ಲರೂ ತಮ್ಮ ತಮ್ಮ ಪಾಲಿನ ಕರ್ತವ್ಯಗಳನ್ನು ನಿಷ್ಠೆಯಿಂದ ನಿಷ್ಕಾಮದಿಂದ ಮಾಡುವ ಹಾದಿಯು ಸಕಲ ಜನರ ಹಿತವನ್ನೂ ಸಾಧಿಸುವುದರಿಂದ ಅದು ಸಮರಸ–ಸಂತೃಪ್ತಿಗಳನ್ನು

ತರಬಲ್ಲುದು. ಬಸವಣ್ಣನವರ ಸಂದೇಶದ ತಿರುಳಿದು. ಇದು ಅವರ ಮೂರ್ತಿ-ಸ್ವರೂಪದ ಪ್ರತೀಕವೂ ಅಹುದು.

(೩)

ಬಸವಣ್ಣನವರ ವಚನಗಳ ಸಂಖ್ಯೆಯ ಮಿತಿಯನ್ನು ಖಚಿತವಾಗಿ ಹೇಳಲು ಬರುವಂತಿಲ್ಲ. ಈಗ ಪ್ರಕಟವಾಗಿರುವ ವಚನಗಳ ಸಂಖ್ಯೆ ೧೫೫೦ಕ್ಕೆ ಮಿಕ್ಕುವಂತಿದೆ. ಈ ಸಂಗ್ರಹವನ್ನು ಸಿದ್ಧಗೊಳಿಸುವಾಗ ಗ್ರಂಥದ ಗಾತ್ರ-ವನ್ನು ಗಮನಿಸಿ ಸುಮಾರು ೧೫೫೦ ವಚನಗಳಲ್ಲಿ ೫೦೦ನ್ನು ಮಾತ್ರ ಆಯ್ದು-ಕೊಳ್ಳಬೇಕಾಯಿತು. ಅಖಿಲ ಮಾನವತೆಯ ಉದ್ಧಾರವನ್ನು ಗಮನಿಸಿದ ಬಸವಣ್ಣನವರ ಮೂರ್ತಿಸ್ವರೂಪ, ಸಾರ್ವತ್ರಿಕ ಸಂದೇಶಗಳನ್ನು ಪರಿಚಯ ಮಾಡಿಕೊಡುವ ದೃಷ್ಟಿಯಿಂದ ಇಲ್ಲಿಯ ವಚನಗಳನ್ನು ಅಳವಡಿಸಲಾಗಿದೆ. ವಿಶಾಲ ಮಾನವತೆಯನ್ನು ಕುರಿತ ವಿಚಾರ–ವಿಮರ್ಶೆಗಳನ್ನು ಒಳಗೊಳ್ಳುವ, ಮಾನವನ ಪರಿಪೂರ್ಣತೆಗೆ ಮಾರ್ಗದರ್ಶನವನ್ನು ಒದಗಿಸುವ ವಚನಗಳನ್ನು ಇಲ್ಲಿ ಆಯ್ದುಕೊಳ್ಳಲಾಗಿದೆ. ಅಲ್ಲದೆ ಆತ್ಮೀಯತೆ, ಹೃದಯಂಗಮತೆ, ಭಾಷೆಯ ಸೊಬಗು–ಇತ್ಯಾದಿ ಸಾಹಿತ್ಯಿಕ ವೈಶಿಷ್ಟ್ಯಗಳನ್ನು ಹೊರಹೊಮ್ಮಿಸುವ ದೃಷ್ಟಿಯೂ ಇಲ್ಲಿದೆ. ಘನವಾದ ಸಂದೇಶ, ಆತ್ಮೀಯ ಶೈಲಿ, ಸುಂದರ ಭಾಷೆ, ಹೊಸ ಬಗೆಯ ನಿರೂಪಣೆಗಳಿಂದ ಕೂಡಿದ ಶ್ರೀ ಬಸವಣ್ಣನವರ ವಚನಗಳು ಆಧ್ಯಾತ್ಮಿಕ ರಂಗದಲ್ಲಿ ಬೆಲೆಯುಳ್ಳ ಕಾಣಿಕೆಯಾಗಿರುವುದರ ಜೊತೆಗೆ ಕನ್ನಡ ಸಾಹಿತ್ಯರಂಗದಲ್ಲಿ ನವೋದಯವನ್ನು ತಂದು ಅದ್ಭುತವಾದ ಪ್ರಭಾವವನ್ನು ಬೀರಿವೆ. ಸಕಲರಿಗೂ ಸರ್ವಮಂಗಲವಾದ ಸಾಮಾಜಿಕ ಸುಖ–ಶಾಂತಿಗೆ ತಳಹದಿಯಾಗುವ ಬೆಳಕಿನ ಹಾದಿಯನ್ನು ಕಂಡುಕೊಳ್ಳುವು-ದಕ್ಕೆ ನೆರವಾಗುವ ವಚನಗಳನ್ನು ಈ ಸಂಗ್ರಹದಲ್ಲಿ ಸೇರಿಸಿದೆ. ಇದೊಂದು ವಿಶಿಷ್ಟಮತೀಯ ಗ್ರಂಥವಲ್ಲ. ಆದುದರಿಂದ ಇಲ್ಲಿ ಆಯ್ದುಕೊಂಡ ವಚನ-ಗಳನ್ನು ಹೊಸ ಬಗೆಯಿಂದಲೇ ವಿಭಾಗಿಸಲಾಗಿದೆ. ಮಾನವತ್ವದ ವಿಕಾಸ-ದಿಂದ ದೇವತ್ವದೆಡೆಗೆ ಕರೆದೊಯ್ಯುವ ಬಸವಣ್ಣನವರ ಮಾರ್ಗವನ್ನು ಅರಿತು-

ಕೊಳ್ಳುವ ಬಗೆಯಲ್ಲಿ ಇಲ್ಲಿಯ ೫೦೦ ವಚನಗಳನ್ನು ಇಪ್ಪತ್ತು ವಿಭಾಗಗಳಲ್ಲಿ ಸೇರಿಸಲಾಗಿದೆ.

ಮಾನವ ಸಹಜವಾದ ದೌರ್ಬಲ್ಯ ಲೋಪಗಳಿಂದ ಕೂಡಿದಾಗ ಅವು-ಗಳನ್ನು ಗುರುತಿಸಿಕೊಂಡು ಪರಿಶುದ್ಧತೆಯನ್ನು ಪಡೆಯುವ ಹಂಬಲದಿಂದ ಆತ್ಮನಿವೇದನೆ ಮಾಡಿಕೊಳ್ಳುವ ವಚನಗಳಿಂದ ಈ ಸಂಗ್ರಹವನ್ನು ಆರಂಭಿಸ-ಲಾಗಿದೆ. ಈ ವಿಭಾಗದ ಹೆಸರು 'ಆತ್ಮನಿವೇದನೆ–ಪರಿಶೀಲನೆ' ಎಂಬು-ದಾಗಿದೆ. ಬಸವಣ್ಣನ ನಿರ್ಮಲ ಹೃದಯವನ್ನು, ನೇರವಾದ ಮನೋ-ಭಾವವನ್ನು, ವಿನಯವನ್ನು, ಪ್ರಾಮಾಣಿಕವಾದ ನಿವೇದನೆಯನ್ನು, ದೈವೀ ಕೃಪೆಯ ಹಂಬಲವನ್ನು ನಾವು ಈ ವಚನಗಳಲ್ಲಿ ಸ್ಪಷ್ಟವಾಗಿ ಕಂಡುಕೊಳ್ಳು-ತ್ತೇವೆ. ಪರಮಾತ್ಮನ ಕೃಪೆಯನ್ನು ಕುರಿತ ಉತ್ಕಟವಾದ ಹಂಬಲವೇ ಭಕ್ತಿ-ಮಾರ್ಗವನ್ನು ಅಣಿಗೊಳಿಸುತ್ತಿದೆ. ಭಕ್ತಿಭಾಂಡಾರಿ ಬಸವಣ್ಣನು ಸದ್ಭಕ್ತಿ-ಯನ್ನು ಕುರಿತು ಹೇಳಿದ ವಚನಗಳು ಎರಡನೆಯ ವಿಭಾಗದಲ್ಲಿ ಬಂದಿವೆ. ಮುಕ್ತಿಯ ಸ್ವರೂಪವನ್ನು ಮುಕ್ತಿಯ ಹಾದಿಯನ್ನು ಕುರಿತು ಇರುವ ಬೇರೆ ಬೇರೆ ವಾದಗಳನ್ನೆಲ್ಲ ಅಲ್ಲಗಳೆದು ಬಸವಣ್ಣ ಭಕ್ತಿಗೇ ಪ್ರಾಧಾನ್ಯ ಕೊಟ್ಟಿರುವು-ದನ್ನು ಇಲ್ಲಿಯ ವಚನಗಳು ಸ್ಪಷ್ಟಪಡಿಸುತ್ತಿವೆ. ಐಹಿಕ-ಜೀವನದ ಸ್ಥಾನ–ಮಾನಗಳಿಗಿಂತ ದೈವೀ ಭಕ್ತಿಯನ್ನೇ ಬಸವಣ್ಣ ಹೆಚ್ಚಾಗಿ ಮೆಚ್ಚಿಕೊಂಡಿದ್ದಾನೆ. ಭಕ್ತಿಗಾಗಿ ಏನೆಲ್ಲವನ್ನೂ ಮಾಡಲು ಸಿದ್ಧನಾಗಿದ್ದಾನೆ. ದೇವಾಲಯ ನಿರ್ಮಾಣಕ್ಕಿಂತ ದೇಹವನ್ನೇ ದೇವಾಲಯವೆಂದು ಭಾವಿಸಿದ್ದಾನೆ. ಹಿಂದಿನ ಭಕ್ತರ ಭಕ್ತಿಯ ಘನತೆಯನ್ನು ಸ್ಮರಿಸಿಕೊಂಡು ತನ್ನ ಭಕ್ತಿಯು ಅವರ ಮುಟ್ಟಕ್ಕೆ ಬಾರದೆಂದು ಹೇಳಿದ್ದಾನೆ. ಭಕ್ತಿಗಾಗಿ ತನುಮನಧನಗಳು ಸವೆಯ-ಬೇಕು. ಆದರೆ ಸಾಮಾನ್ಯ ಮಾನವನು ತನ್ನ ಅಹಂಕಾರ ತುಷ್ಟಿಗಾಗಿ ಅವು-ಗಳನ್ನು ವಿನಿಯೋಗಿಸುತ್ತಾನೆ. ಪರಮಾತ್ಮನ ಒಲವನ್ನು ಪಡೆಯುವ ಉತ್ಕಂಠ-ತೆಯ ನುಡಿಗಳು ಇಲ್ಲಿ ವಚನಗಳಲ್ಲಿ ಮತ್ತೆ ಮತ್ತೆ ಬರುತ್ತಿವೆ. ಶಾಸ್ತ್ರ, ಪುರಾಣ, ವೇದಾಂತ, ಸಂಗೀತ, ತಾತ್ತ್ವಿಕ ಚರ್ಚೆಗಳಿಂದ ಮಾತ್ರ ಪ್ರಯೋ-ಜನವಿಲ್ಲ ಮನಪೂಲಿದು, ಮನಕರಗಿ ಪರಮಾತ್ಮನ ಪೂಜೆಯಲ್ಲಿ ತಲ್ಲೀನ-ರಾಗಬೇಕೆಂಬ ಬೋಧೆಯು ಇಲ್ಲಿದೆ. ಭಕ್ತಿಮಾರ್ಗವು ಒಂದು ದೃಷ್ಟಿಯಿಂದ ಸುಲಭವೇನೋ ಅಹುದು. ಆದರೆ ಆ ಮಾರ್ಗದಲ್ಲಿ ನಡೆಯುವಾಗ ನಿಷ್ಠೆ-

ಯಿಲ್ಲದಿದ್ದರೆ ಅದು ಕಠೋರವಾಗಿ ಪರಿಣಮಿಸುತ್ತದೆ. ಹಸಿವು, ತೃಷೆ, ನಿದ್ರೆ, ಕಾಮ, ಕ್ರೋಧ, ಲೋಭ, ಮೋಹಗಳನ್ನೆಲ್ಲ ಮರೆತು ಭಕ್ತಿಪಥದಲ್ಲಿ ಮುಂದುವರಿಯಬೇಕಾಗುತ್ತದೆ. ಅದಕ್ಕಾಗಿ ನಿಷ್ಠೆ ಬಲಿಯಬೇಕು; ಶ್ರದ್ಧೆ ಗಟ್ಟಿಗೊಳ್ಳಬೇಕು. ಮನವಿಲ್ಲದೆ ಮಾಡಿದ್ದು ವ್ಯರ್ಥ. ನಿಜವಿಲ್ಲದೆ ನೀಡುವುದು ನಿಷ್ಪ್ರಯೋಜಕ. ತೋರಿಕೆಗಾಗಿ ಮಾಡುವ ಭಕ್ತಿಯಿಂದ ದೈವೀಕೃಪೆ ಸಾಧ್ಯವಾಗುವುದಿಲ್ಲ. ಕಲ್ಲು ಎನಿಸುಕಾಲ ನೀರೊಳಗಿದ್ದರೂ ನೆನೆದು ಮೃದುವಾಗಲಾರದು. ಅಂತೆಯೆ ನಿಷ್ಠೆ–ಶ್ರದ್ಧೆಗಳಿಲ್ಲದೆ ಮಾಡುವ ಪೂಜೆ ಫಲಕಾರಿಯಲ್ಲ. ಮನದಲ್ಲಿ ದೃಢವಿಲ್ಲದಾಗ ಮಾಡುವ ಪೂಜೆ, ಆಚರಿಸುವ ವ್ರತಗಳು ಕುಂಬಳಕಾಯಿಗೆ ಕಬ್ಬಿಣದ ಕಟ್ಟು ಹಾಕಿದಂತೆ. ಮುಹೂರ್ತ, ವಾರ ತಿಥಿಗಳನ್ನು ಗಮನಿಸಿ ಧಾರ್ಮಿಕ ಕಾರ್ಯಗಳನ್ನು ಆಚರಿಸುವುದು ಕೇವಲ ವಿಧಿ ಮಾತ್ರ. ಆದರೆ ತಿರುಳಿರುವುದು ನಿಷ್ಠೆಯಲ್ಲಿ, ಶ್ರದ್ಧೆಯಲ್ಲಿ. ಸಣ್ಣಾಗುವ ವರೆಗೆ ಅರೆದು, ಬಣ್ಣಗಾಣುವ ವರೆಗೆ ಒರೆದು ನೋಡುವ ದೇವನ ಪರೀಕ್ಷೆಯಲ್ಲಿ ನಾವು ಯಶಸ್ಸು ಪಡೆಯಬೇಕಾದರೆ ಶ್ರದ್ಧೆಯಿಂದ, ನಿಷ್ಠೆಯಿಂದ ಕೂಡಿರಬೇಕು. ನಂಬದೆ, ನೆಚ್ಚದೆ ಕರೆದರೆ ಶಿವನು ಬಾರನು. ಆದರೆ ನಂಬಿ ಕರೆದರೆ 'ಓ' ಎಂಬನು. 'ನಿಷ್ಠೆ–ಶ್ರದ್ಧೆ' ಎಂಬ ವಿಭಾಗದಲ್ಲಿ ಈ ಬಗೆಯ ವಿಚಾರಸರಣಿಯ ವಚನಗಳಿವೆ.

ದೈವೀ ಜೀವನದ ಹಾದಿಯಲ್ಲಿ ಶ್ರದ್ಧೆ–ನಿಷ್ಠೆಗಳು ಬಲಿಯುವಾಗ ಅಹಂಕಾರ–ಮಮಕಾರಗಳು ತೊಡಕಾಗಿ ಪರಿಣಮಿಸುತ್ತಿವೆ. ಮಾನವನ ಬಾಳಿನಲ್ಲಿಯ ಗೋಳಿಗೆ ಮುಖ್ಯ ಕಾರಣವೆಂದರೆ ಈ ಅಹಂಕಾರ–ಮಮಕಾರಗಳೇ. ಜಗತ್ತಿನ ಮಹಾವಿಭೂತಿಗಳಲ್ಲಿ ನಿರಹಂಕಾರ–ವಿನಯಗಳು ಒಡೆದು ಕಾಣುತ್ತಿವೆ. ಪರಮಾತ್ಮನ ಶಕ್ತಿಯನ್ನೇ ನೆಚ್ಚುವ ಮಹಾಪುರುಷರು ವಿನಯಶಾಲಿಗಳೇ ಆಗಿರುತ್ತಾರೆ. ಬಸವಣ್ಣ 'ವಿನಯಭಾಂಡಾರಿ'ಯೇ ಅಹುದೆಂಬುದು ಇಲ್ಲಿ ಸಂಗ್ರಹಿಸಿದ ವಚನಗಳಿಂದ ಸ್ಪಷ್ಟವಾಗುತ್ತದೆ. ಅಹಂಕಾರರಹಿತವಾದಲ್ಲಿ ದೇವ ಸನ್ನಿಹಿತನಾಗುತ್ತಾನೆ. ಕೂಡಲಸಂಗಮದೇವನನ್ನು ಪಡೆಯುವ ಉತ್ಕಟ ಹಂಬಲವುಳ್ಳ ಬಸವಣ್ಣನ ವಿನಯವೆಂತಹದೆಂಬುದನ್ನು ನಾವು 'ನಿರಹಂಕಾರ–ವಿನಯ' ಎಂಬ ವಿಭಾಗದಲ್ಲಿ ಕಾಣುತ್ತೇವೆ. 'ಮೇಲಾಗಲೊಲ್ಲೆನು ಕೀಳಾಗಲಲ್ಲದೆ' ಎಂಬುದು ಇಲ್ಲಿಯ ಸೂತ್ರವಾಗಿದೆ. 'ಮಾಡಿಪೆ-

ನೆಂಬುದು ಮನದಲ್ಲಿ ಹೊಳೆದರೆ ಶಿವನ ಡಂಗುರ ಹಿಡಿಸಿ ಕಾಡಿತ್ತು' ಎಂಬ ಎಚ್ಚರಿಕೆಯ ಮಾತನ್ನು ಇಲ್ಲಿ ಹೇಳಲಾಗಿದೆ. ನಾನೇ ದೊಡ್ಡವನೆಂದು ಸಾಮಾನ್ಯ ಜೀವಿ ಹೇಳುವುದಾದರೆ ಮಹಾತ್ಮ ಬಸವಣ್ಣ 'ಎನ್ನಿಂದ ಕಿರಿಯರಿಲ್ಲ' ಎಂದು ಉದ್ಘೋಷಿಸಿದ್ದಾನೆ. ಹೊಗಳಿಕೆಯನ್ನು ಹೊನ್ನಶೂಲವೆಂದು ಬಣ್ಣಿಸಿ 'ಹೊಗಳತೆಗೆ ಅಡ್ಡಬಾರಾ' ಎಂದು ದೇವನನ್ನು ಪ್ರಾರ್ಥಿಸಲಾಗಿದೆ. ಆತ್ಮಸ್ತುತಿ, ಪರನಿಂದೆ ಮಾನವರ ಬಾಳಿನಲ್ಲಿ ಪ್ರಮುಖವಾಗಿರುತ್ತವೆ. ಬಸವಣ್ಣ ಅವುಗಳನ್ನು ತನಗೆ ಕೇಳಿಸಬಾರದೆಂದು ದೇವನಿಗೆ ಬಿನ್ನವಿಸುತ್ತಾನೆ. 'ಅಯ್ಯಾ' ಎಂದಡೆ ಸ್ವರ್ಗ 'ಎಲವೋ' ಎಂದಡೆ ನರಕ, ಎಂದು ಹೇಳುವಲ್ಲಿ, ಸದುವಿನಯವೇ ಸದಾಶಿವನ ಒಲುಮೆಯೆಂದು ಬೋಧಿಸುವಲ್ಲಿ ಬಸವಣ್ಣನ ಅಂತರಂಗವನ್ನು ನಾವು ಅರಿತುಕೊಳ್ಳುತ್ತೇವೆ. 'ಆನು ನಿಮ್ಮ ಬಂಟರ ಬಂಟ; ಆನು ನಿಮ್ಮ ಲೆಂಕರ ಲೆಂಕ' ಎಂಬುದು ಬಸವಣ್ಣನ ವಾಣಿ. ತನ್ನನ್ನು ಮರೆಯುವವನು ಬಿನ್ನಾಣಿಯಲ್ಲದೆ ಭಕ್ತನಾಗಲಾರ. ಬಸವಣ್ಣ ಭಕ್ತಿಭಾಂಡಾರಿ. ಅಂತೆಯೆ ವಿನಯ ಭಾಂಡಾರಿ.

ವಿನಯವು ಕಾರ್ಯಸಾಧಕತೆಯ, ಆಶಾಪೂರ್ತಿಯ ಸಾಧನವಾಗಬಾರದು. ವಿನಯವೆಂದರೆ ಆತ್ಮವಿಶ್ವಾಸದ ಅಭಾವವೂ ಅಲ್ಲ. 'ನಿಸ್ಪೃಹತೆ ಆತ್ಮವಿಶ್ವಾಸ' ಎಂಬ ವಿಭಾಗದ ವಚನಗಳಲ್ಲಿ ಬಸವಣ್ಣನ ನಿಸ್ಪೃಹಭಾವ, ಆತ್ಮವಿಶ್ವಾಸದ ಕೆಚ್ಚುಗಳು ವ್ಯಕ್ತವಾಗುತ್ತವೆ.

> ನ್ಯಾಯನಿಷ್ಠುರಿ : ದಾಕ್ಷಿಣ್ಯಪರನು ನಾನಲ್ಲ;
> ಲೋಕವಿರೋಧಿ : ಶರಣನಾರಿಗಂಜುವನಲ್ಲ;
> ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ.

ಈ ವಚನವು ಬಸವಣ್ಣನ ವ್ಯಕ್ತಿತ್ವವನ್ನು ಅರ್ಥಪೂರ್ಣವಾಗಿ ಸಂಗ್ರಹಿಸುವಂತಿದೆ. ವಿನಯದೊಂದಿಗೆ ನ್ಯಾಯನಿಷ್ಠುರತೆ. ಲೋಕಹಿತಕ್ಕಾಗಿ ದೊಡ್ಡ ಸಂಘಟನೆ ಕೈಕೊಂಡಿರುವಾಗಲೂ ಅನ್ಯಾಯಕ್ಕೆ ಬಗ್ಗದೆ ಲೋಕವಿರೋಧವನ್ನು ಕಟ್ಟಿಕೊಳ್ಳುವ ಕೆಚ್ಚು. ದೈವೀಕೃಪೆಯ ಬಲವೇ ಇದಕ್ಕೆ ಕಾರಣ. ವಿನಯದೊಂದಿಗೆ ಸದಾಚಾರದ ಛಲವೂ ಮನುಷ್ಯನಿಗೆ ಬೇಕು. ಊರ ಮುಂದೆ ಹಾಲಿನ ಹಳ್ಳ ಹರಿದರೂ ಬಿಜ್ಜಳನ ಭಾಂಡಾರ ತನಗೆ ದೊರೆಯು-

ವಂತಿದ್ದರೂ ಅವುಗಳಿಗೆ ಆಶಿಸದೆ, ಬಸವಣ್ಣ ಕೂಡಲಸಂಗಮದೇವನ ಒಲವನ್ನೇ ಮಾತ್ರ ನಚ್ಚಿಕೊಂಡಿದ್ದ. ದೈವೀ ಇಚ್ಛೆಯಂತೆ ಬಡತನ, ಸಂಕಟ, ಅವಮಾನಗಳು ಒದಗಿ ಬಂದರೂ ಅವನ್ನೆಲ್ಲ ಮೆಟ್ಟಿ ನಿಲ್ಲುವ ಆತ್ಮಶಕ್ತಿಯನ್ನು ಗಳಿಸುವ ಬೋಧೆ ಬಸವ ಸಂದೇಶದಲ್ಲಿದೆ. ಒಡಲ ಕಳವಳ, ಬಾಯ ಸವಿ, ಇಂದಿಂಗೆ ನಾಳಿಂಗೆ ಎಂಬ ಸಂಗ್ರಹದೃಷ್ಟಿ ಇವುಗಳಿಗೆ ಮಾನವನು ಒಳಗಾಗಬಾರದು. ಕೊಲುವನೆಂಬ ಭಾಷೆ ದೇವನದಾದರೆ ಗೆಲುವೆನೆಂಬ ಭಾಷೆ ಭಕ್ತನದು. ಪರಿಶುದ್ಧ ನಡೆನುಡಿಯಿಂದ ಭಕ್ತ ಆಸೆ, ಅಂಜಿಕೆಗಳನ್ನು ಮೀರಿ ನಿಲ್ಲುತ್ತಾನೆ.

ನುಡಿದು ಹುಸಿವ, ನಡೆದು ತಪ್ಪುವ ಪ್ರಪಂಚಿಯ ಬಗೆ ಬೇರೆ. ಎನ್ನ ಒಡಲಿಂಗೆ, ಎನ್ನ ಒಡವೆಗೆ, ಎನ್ನ ಮಡದಿ-ಮಕ್ಕಳಿಗೆ, ಎನ್ನ ಪ್ರತಿಷ್ಠೆಗೆ ಎಂದು ಕುದಿಯುವುದು ಆತನ ಸ್ವಭಾವ. ಪರಮಾತ್ಮನ ನಿಲವಿಂಗೆ ಕುದಿಯುವುದು ಸದ್ಭಕ್ತರ ಲಕ್ಷಣ. ದೈವೀಜೀವನಪಥದಲ್ಲಿ ಸದಾಚಾರ, ಸದುನುಡಿಗಳು ಬೇಕು. ‘ಪರಿಶುದ್ಧ ನಡೆ-ನುಡಿ’ ಎಂಬ ವಿಭಾಗದಲ್ಲಿ ಈ ಬಗೆಯ ವಚನಗಳನ್ನು ಸಂಗ್ರಹಿಸಿದೆ. ಒಳ್ಳೆಯ ನಡೆ, ಒಳ್ಳೆಯ ನುಡಿಗಳನ್ನು ಕುರಿತ ಬಸವಣ್ಣನ ವಚನಗಳು ಸುಂದರವೂ, ಹೃದಯಂಗಮವೂ ಆಗಿವೆ. ನಮ್ಮ ಬಾಳನ್ನು ಹಸನುಗೊಳಿಸುವ, ಮನಸ್ಸನ್ನು ಹದಗೊಳಿಸುವ, ಸಹಜ ಸುಲಭ ಮಾರ್ಗವನ್ನು ಇಲ್ಲಿ ಬೋಧಿಸಲಾಗಿದೆ. ಕೆಡೆನಡೆಯದೆ, ಕೆಡೆನುಡಿಯದೆ ಇದ್ದರೆ ಪರಮಾತ್ಮನು ನಮಗೆ ತೃಪ್ತಿಯನ್ನು ಒದಗಿಸುತ್ತಾನೆ. ಪರಮಾತ್ಮನ, ಅವನ ಭಕ್ತರ ಪಾದವಲ್ಲದೆ ಬೇರೆ ವಿಷಯಕ್ಕೆ ಎಳಸದಂತೆ ತನ್ನನ್ನು ‘ಹೆಳವನ, ಅಂಧಕನ, ಕಿವುಡನ’ ಮಾಡಬೇಕೆಂದು ಬಸವಣ್ಣ ಬೇಡಿಕೊಳ್ಳುತ್ತಾನೆ. ಸದಾಚಾರದ ಬಗೆಗೆ ಇಂತಹ ಪರಾಕಾಷ್ಠತೆ ಬಸವಣ್ಣನ ವ್ಯಕ್ತಿತ್ವವನ್ನು ಉಜ್ವಲಗೊಳಿಸಿದೆ. ‘ನುಡಿದರೆ ಮುತ್ತಿನ ಹಾರದಂತಿರಬೇಕು’ ಎಂಬ ಸುಪ್ರಸಿದ್ಧ ವಚನ ಈ ವಿಭಾಗದಲ್ಲಿದೆ. ನುಡಿದಂತೆ ನಡೆಯಬೇಕೆಂಬ ತತ್ತ್ವವನ್ನು ಇಲ್ಲಿ ಪ್ರತಿಪಾದಿಸಲಾಗಿದೆ.

ಮಾನವನು ಅಜ್ಞಾನಕ್ಕೊಳಗಾಗಿ ಜನನದಿಂದ, ವೃತ್ತಿಯಿಂದ ಹೀನ, ಶ್ರೇಷ್ಠ ಎಂಬ ಕುಲಗಳನ್ನು ಕಲ್ಪಿಸಿಕೊಳ್ಳುತ್ತಾನೆ. ಆದರೆ ಮಾನವನ ಶೀಲವು ಮಾತ್ರ ಇದಕ್ಕೆ ಅಳತೆಗೋಲಾಗಬೇಕು. ಈ ಸಂದೇಶ ‘ಕುಲ-ಶೀಲ’ ಎಂಬ

ವಿಭಾಗದಲ್ಲಿಯ ವಚಗಳಲ್ಲಿ ಮೂಡಿಬಂದಿದೆ. ಕೊಲುವವನು ಮಾದಿಗ ಹೊಲಸ ತಿಂಬವ ಹೊಲೆಯ. ಶ್ವಪಚನಾದರೇನು ? ಲಿಂಗಭಕ್ತನೇ ಕುಲ-ಜನು. ಭಾವಶುದ್ಧಿಯಿಂದ ಭಕ್ತಿ ನೆಲೆಗೊಳ್ಳುತ್ತದೆ. ಭಾವಶುದ್ಧಿಯ ಭಕ್ತ-ರೆಲ್ಲ ಒಂದೆ ಕುಲದವರು. ಅಲ್ಲಿ ಮೇಲು-ಕೀಳುಗಳಿಲ್ಲ. ಹೆಣ್ಣು-ಗಂಡು ಎಂಬ ತಾರತಮ್ಯವೂ ಬೇಡ. ಇಂತಹ ವಿಚಾರಪ್ರಣಾಲಿಯಿಂದ ಜಾತಿಭೇದ ನಿರಾ-ಕರಣೆ ನಡೆದು ಸದಾಚಾರದ ಸೂತ್ರದಲ್ಲಿ ಬಂಧಿತವಾದ ನವೀನ ಸಮಾಜ ಸಂಸ್ಕರಣೆಯೊಂದು ಬಸವಣ್ಣನ ಕಾಲಕ್ಕೆ ನಡೆಯಿತು. ಅದೊಂದು ಮಹತ್ವದ ಸಾಮಾಜಿಕ ಕ್ರಾಂತಿ.

ಧಾರ್ಮಿಕ ವ್ರತಾಚಾರಗಳಲ್ಲಿ ಆಗ ಡಂಭಾಚಾರವು ಬೆಳೆದಿತ್ತು. ಕರ್ಮಠ-ತನಕ್ಕೆ ಪ್ರಾಶಸ್ತ್ಯ ದೊರೆತಿತ್ತು. ನೀರ ಕಂಡಲ್ಲಿ ಮುಳುಗಿ, ಮರನ ಕಂಡಲ್ಲಿ ಸುತ್ತುವ ಬಾಹ್ಯಾಚರಣೆಯ ಭ್ರಮೆಯಲ್ಲಿ ನಿಜದ ನೆಲೆ ಮರೆತಂತಾಗಿತ್ತು. ಖಂಡುಗ ಹಾಲೊಳಗೆ ಒಂದು ಇದ್ದಲು ಇದ್ದರೇನು ? ಅದು ಬಿಳುಪಾಗ-ಬಲ್ಲುದೇ. ಹಾಗೆ ವ್ರತಾಚಾರಗಳ ಮೆರವಣಿಗೆಯಲ್ಲಿ ಜನತೆ ಪರಮಾತ್ಮ-ನನ್ನು ಕಾಣದೆ ಬಳಲುತ್ತಿತ್ತು. ಆಗ ಕರ್ಮಠತನವನ್ನು ಡಂಭಾಚಾರವನ್ನು ಬಸವಣ್ಣ ಖಂಡಿಸಿ 'ದ್ವೈತಾದ್ವೈತವನೋದಿ ಏನು ಮಾಡುವಿರಯ್ಯಾ' ಎಂದು ಕೇಳಬೇಕಾಯಿತು. ತನುವ ನೋಯಿಸಿದರೆ, ಮನವ ಬಳಲಿಸಿದರೆ ದೈವೀ-ಸಂಪರ್ಕವೊದಗಲಾರದು, ಎಂದು ಖಂಡಿತವಾಗಿ ಹೇಳಬೇಕಾಯಿತು. ಕರ್ಮಠತನ–ಡಂಭಾಚಾರ ಎಂಬ ಶೀರ್ಷಿಕೆಯಲ್ಲಿ ಇಂತಹ ವಚನಗಳನ್ನು ಸೇರಿಸಿದೆ.

ಅಂದಿನ ಲೋಕಾಚಾರ ವಿಪರೀತಕ್ಕಿಳಿದಿತ್ತೆಂದು ತೋರುತ್ತದೆ. ದೇವ-ನೊಬ್ಬನೆಂಬುದನ್ನು ಮರೆತ ಅಜ್ಞಜನಸಮೂಹವು ಮಡಕೆ, ಮೊರ, ಬೀದಿಯ ಕಲ್ಲುಗಳನ್ನು ದೇವರೆಂದು ಭ್ರಮಿಸಿ ಬವಣೆಗೊಂಡಾಗ ಬಸವಣ್ಣ ದೇವತ್ವದ ನಿಜವಾದ ಕಲ್ಪನೆಯನ್ನು ಸರಳಸುಂದರವಾಗಿ ಬೋಧಿಸಬೇಕಾಯಿತು. ದೇವ-ನೊಬ್ಬನೆಂಬುದನ್ನು ಮಾರ್ಮಿಕವಾಗಿ ತಿಳಿಸಬೇಕಾಯಿತು. ಒಳಗೆ ಶುದ್ಧ-ವಾಗದನ್ನಕ್ಕ ಹೊರಗೆ ಹೂಸಿ ಪ್ರಯೋಜನವಿಲ್ಲವೆಂಬುದನ್ನು ಸ್ಪಷ್ಟಗೊಳಿಸ-ಬೇಕಾಯಿತು. ತಂತಮ್ಮ ಮನವನ್ನು ಸಂತೈಸಿಕೊಳ್ಳದವರು ಲೋಕದ ಡೊಂಕನ್ನು ತಿದ್ದಲು ಹೋಗುವ ಹವ್ಯಾಸವನ್ನು ವಿಡಂಬಿಸಬೇಕಾಯಿತು.

'ಲೋಕಾಚಾರವಿಡಂಬನ' ಎಂಬ ವಿಭಾಗದಲ್ಲಿ ಈ ಬಗೆಯ ವಚನಗಳು ಬಂದಿವೆ. ಅಂದಿನ ಡಂಭಾಚಾರ, ಅಜ್ಞಾನ, ಕರ್ಮಠತನಗಳಿಗೆ ಪ್ರತಿಯಾಗಿ ಅಂತರಂಗಶುದ್ಧಿಯನ್ನು ಸಾಧಿಸಿ ಹೊಸ ಸಮಾಜವನ್ನು ಸಂಘಟಿಸುವ ಆವಶ್ಯಕತೆಯಿತ್ತು. ಬಸವಣ್ಣ ಆ ಕಾರ್ಯಕ್ಕೆ ಪ್ರಮುಖವಾಗಿ ಗಮನಕೊಟ್ಟ. ಹುತ್ತವ ಬಡಿದೊಡೆ ಹಾವು ಸಾಯುವುದಿಲ್ಲ. ಅಂತರಂಗ-ಆತ್ಮಶುದ್ಧಿಯಿಲ್ಲದಿದ್ದರೆ ದೈವೀಕೃಪೆಯಿಲ್ಲ. ಮನೆಯಲ್ಲಿ ಮನೆಯೊಡೆಯನಿಲ್ಲವಾದರೆ ಧೂಳಿ ಬೀಳುತ್ತದೆ; ಪ್ರಾಂಗಣದಲ್ಲಿ ಹುಲ್ಲು ಬೆಳೆಯುತ್ತದೆ. ತನುವಿನೊಳಗೆ ಹುಸಿ ತುಂಬಿ ಮನದೊಳಗೆ ವಿಷಯ ತುಂಬಿದ್ದರೆ ಮನದೊಡೆಯ ಸಂಗಮದೇವ ಅಲ್ಲಿರುವುದಿಲ್ಲ. ಒಳಗೆ ಕುಟಿಲ, ಹೊರಗೆ ವಿನಯವಾಗಿದ್ದರೆ ಸತ್ಪಥವು ಸಾಧ್ಯವಲ್ಲ. 'ಮಾತಿನಂತೆ ಮನವಿಲ್ಲದ ಜಾತಿ ಡೊಂಬರ'ನ್ನು ವಿಡಂಬಿಸುವ, ಒಳ-ಹೊರಗು ಶುದ್ಧವಾಗುವ ಬಗೆಯನ್ನು ಬಣ್ಣಿಸುವ ವಚನಗಳು 'ಅಂತರಂಗಶುದ್ಧಿ' ಎಂಬ ವಿಭಾಗದಲ್ಲಿ ಅಡಕವಾಗಿವೆ.

ಸಂಸಾರದ ಮಾಯೆಯು ದೈವೀಜೀವನದ ಹಾದಿಯಲ್ಲಿ ಅಡೆತಡೆಯನ್ನೊಡ್ಡುತ್ತಿದೆ. ಹೊನ್ನೆನ್ನದು, ಹೆಣ್ಣೆನ್ನದು, ಮಣ್ಣೆನ್ನದು, ಕೀರ್ತಿ ನನ್ನದು ಎಂಬ ಮರುಳತನದಿಂದ ಪರಮಾತ್ಮನನ್ನೇ ಮರೆಯುವುದು ಮಾನವೀಯ ಸ್ವಭಾವ. ಇಂದಿಂಗೆಂತು, ನಾಳಿಂಗೆಂತು ಎಂಬ ತವಕ. ಕಾಮ, ಕ್ರೋಧ, ಮದ, ಮತ್ಸರಗಳ ಬಾಧೆ. ಅಂತು ದೇವನೊಡ್ಡಿದ ಬಲೆ, ನಮ್ಮ ಸಂಸಾರ. ಆದರೆ ಆ ಬಲೆಯನ್ನೂ ದಾಟಬೇಕಲ್ಲ! ಅದು ಪರಮಾತ್ಮನ ಕೃಪೆಯಿಂದ ಸಾಧ್ಯ. ಜಗವನ್ನು ಮಾಯೆ ಸುತ್ತಿದ್ದರೂ ನಮ್ಮ ಮನ ಪರಮಾತ್ಮನನ್ನು ಸುತ್ತಿದರೆ ಆ ಮಾಯೆಯ ಬಲೆಯಿಂದ ನಾವು ಪಾರಾಗಬಲ್ಲೆವು. ಪರಮಾತ್ಮನಿಗೆ ಶರಣು ಹೋಗುವುದೇ ಉಪಾಯ. ಪಂಚೇಂದ್ರಿಯಗಳನ್ನು ಹತ್ತಿಕ್ಕಲು ಯತ್ನಿಸಿದರೆ ಅವು ನಿಮ್ಮ ಮಾನಸಿಕ ಸ್ತರಕ್ಕಿಳಿದು ಮತ್ತೆ ಕಾಡುವುವು. ಆದರೆ ದೈವೀಸಮರ್ಪಣೆಯ ಭಾವದಿಂದ ನಾವು ಸಂಸಾರದಲ್ಲಿ ಬಾಳಬೇಕು. ಏಕೆಂದರೆ ಇಹವೆಂಬುದು ಕರ್ತಾರನ ಕಮ್ಮಟ. ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲುವುದಿಲ್ಲ. ಇಂತಹ ಸಂದೇಶವನ್ನುಳ್ಳ ವಚನಗಳು 'ಸಂಸಾರ : ಮಾಯೆ' ಎಂಬ ವಿಭಾಗದಲ್ಲಿವೆ.

ಇಲ್ಲಿಯೂ ಅಲ್ಲಿಯೂ ಸಲ್ಲುವುದಕ್ಕೆ ಮನದ ಮರ್ಕಟತನವು ವಿಘ್ನ-

ವನ್ನೊಡ್ಡುತ್ತಿದೆ. ಮನದ ಡಾಳಿಯನ್ನು ನೀಗುವ ಪರಿಯನ್ನು 'ಮನದ ಮರ್ಕಟತನ-ಶುದ್ಧೀಕರಣ' ಎಂಬ ವಿಭಾಗದ ವಚನಗಳಲ್ಲಿ ಕಾಣುತ್ತೇವೆ. ಹಾವಿಗೆ ಗರುಡ; ಮನವೆಂಬ ಸರ್ಪಕ್ಕೆ ಪರಮಾತ್ಮನನ್ನು ಕುರಿತ ಸದ್ಭಕ್ತಿಯೇ ಗರುಡ. ಸದ್ಭಕ್ತಿ ಅಳವಡಲು ಸಮರ್ಪಣಭಾವ ಬೇಕು. ಅದು ಅನನ್ಯ ಸಮರ್ಪಣೆಯೂ ಆಗಬೇಕು. ದೇವನಲ್ಲದೆ ಮತ್ತೆ ಯಾರೂ, ಯಾವುದೂ ನಮಗಿಲ್ಲವೆಂಬ ದೃಢವಾದ ಶ್ರದ್ಧೆ ನಮ್ಮಲ್ಲಿ ಮೂಡಬೇಕು. ಪರಮಾತ್ಮನಿಗಾಗಿ ಏನನ್ನೂ, ಎಲ್ಲವನ್ನೂ ತ್ಯಾಗಮಾಡುವ ನಿರ್ಧಾರದಿಂದ ನಾವು ಮುಂದುವರಿಯಬೇಕು. ಒಡೆಯನಿಗೆ ಒಡವೆಯನೊಪ್ಪಿಸುವಲ್ಲಿ ನಾವೇಕೆ ತಪ್ಪಬೇಕು? ಪ್ರಪಂಚದಲ್ಲಿ ಬಂದುದನ್ನೆಲ್ಲ ನಾವು ಕೈಕೊಳ್ಳಬೇಕು. ಪರಮಾತ್ಮನ ಕೃಪೆಗಾಗಿ ಎಲ್ಲವನ್ನೂ ಸಮರ್ಪಿಸಬೇಕೆಂಬ ಮನೋಭಾವವನ್ನು 'ಸರ್ವಾರ್ಪಣಭಾವ' ಎಂಬ ವಿಭಾಗದ ವಚನಗಳು ತೋರುತ್ತಿವೆ.

ಅವ್ಯಕ್ತ, ಅತೀತ ಪರಮಾತ್ಮನ ಸಂಪರ್ಕ ಪಡೆಯಲು ಆತನ ಸದ್ಭಕ್ತರ ಸಂಪರ್ಕ-ಸಹವಾಸ ಆವಶ್ಯಕ. ದೈವೀಶಕ್ತಿಯು ಸದ್ಭಕ್ತರಲ್ಲಿ, ಶರಣರಲ್ಲಿ ಒಡೆದು ಕಾಣುತ್ತಿದೆ. ಆದುದರಿಂದ ಬಸವಣ್ಣ ಶಿವಶರಣರ ಮಹತಿಯನ್ನು ಅವರ ವಾಣಿಯ ಶಕ್ತಿಯನ್ನು ಬಗೆಬಗೆಯಾಗಿ ಬಣ್ಣಿಸಿದ್ದಾನೆ. ಕೆಲವು ಶರಣರ ಮಹಿಮೆಯನ್ನು ಉಲ್ಲೇಖಿಸಿದ್ದಾನೆ. ಅಂತಹ ವಚನಗಳು 'ಶರಣರು—ಶರಣವಾಣಿ' ಎಂಬ ವಿಭಾಗದಲ್ಲಿವೆ. ಮಡಕೆಯ ಮಾಡುವರೆ ಮಣ್ಣೇ ಮೊದಲು; ಕೂಡಲಸಂಗಮದೇವರರಿವಿಗೆ ಶರಣರ ಸಂಗವೆ ಮೊದಲು. ಶರಣರು ಪರಮಸುಖಿಗಳು; ಮನದಲ್ಲಿ ನಿರ್ಲೇಪಜ್ಞಾನಿಗಳು.

ಪರಮಾತ್ಮನ ಸ್ವರೂಪ ಒಂದು ಜಟಿಲವಾದ ಪ್ರಶ್ನೆಯೇನೋ ಅಹುದು. ಆದರೆ ಅದನ್ನು ಬಸವಣ್ಣ ಸುಲಭಗೊಳಿಸಿದ್ದಾನೆ. ಭೂಮಿಯೊಳಗೆ ಅಡಗಿದ್ದ ನಿಧಾನವನ್ನು ಅಂಜನವುಳ್ಳವರು ತೋರುತ್ತಾರೆ. ಅಂತೆಯೆ ಬಸವಣ್ಣ ಪರಮಾತ್ಮನ ಸ್ವರೂಪವನ್ನು ಸಾಮಾನ್ಯರಿಗಾಗಿ ತೋರಿಸಿಕೊಟ್ಟಿದ್ದಾನೆ. ಪರಮಾತ್ಮನ ಸಿಲವು ಹಾಲಿನೊಳಗಿನ ತುಪ್ಪದಂತೆ, ನನೆಯೊಳಗಣ ಪರಿಮಳದಂತೆ. 'ಪರಮಾತ್ಮಸ್ವರೂಪ' ಎಂಬ ಶೀರ್ಷಿಕೆಯಲ್ಲಿ ಇಂತಹ ವಚನಗಳಿವೆ. ಅಗಮ್ಯ, ಅಗೋಚರ, ಅಪ್ರತಿಮ ಪರಮಾತ್ಮನನ್ನು ಸಾಧಿಸುವ ಹಾದಿಯನ್ನು 'ಧ್ಯಾನ-ಪೂಜೆ' ಎಂಬ ವಿಭಾಗದ ವಚನಗಳಲ್ಲಿ ಕಾಣ-

ಬಹುದು. ಭ್ರಮರಂಗೆ ಪರಿಮಳದ ಬಂಡುಂಬ ಚಿಂತೆಯಾದರೆ ಬಸವಣ್ಣನಿಗೆ ಕೂಡಲಸಂಗಮದೇವರ ನೆನೆವುದೆ ಚಿಂತೆ ಭವಬಂಧನವನ್ನು ಗೆಲ್ಲಬೇಕಾದರೆ ಓಂ ನಮಃ ಶಿವಾಯ ಶರಣು, ಎನ್ನಬೇಕು. ಕೂಡಲಸಂಗಮದೇವನ ಮರೆಯದೆ ಪೂಜಿಸಿದರೆ ನಮಗೆ ಕೇಡಿಲ್ಲದ ಪದವಿ ದೊರೆಕೊಳ್ಳುವುದು. ಅರಿದರೆ ಶರಣ, ಮರೆದರೆ ಮಾನವ. ಪರಮಾತ್ಮನ ನಾಮಾಮೃತ ವಚನದಲ್ಲಿ, ಮೂರುತಿ ನಯನದಲ್ಲಿ, ನೆನಹು ಮನದಲ್ಲಿ ತುಂಬಬೇಕು. ಆಗ ಹರಕಾರುಣ್ಯ ತಾನಾಗಿಯೇ ಒದಗಿಬರುತ್ತದೆ.

ಹರಕಾರುಣ್ಯದಿಂದ ಕೊರಡು ಕೊನರುವುದು; ಬರಡು ಹಯನಹುದು; ವಿಷವು ಅಮೃತವಹುದು. ಆದುದರಿಂದ ಬಸವಣ್ಣ ಹರಕಾರುಣ್ಯಕ್ಕಾಗಿ ಸತತವೂ ಹಾತೊರೆಯುತ್ತಿದ್ದ. ಅದೊಂದನ್ನುಳಿದು ಬೇರೆ ಯಾವ ಚಿಂತೆಯನ್ನೂ ಅವನು ಮಾಡಲಿಲ್ಲ. ದಿವ್ಯ ಜೀವನಪಥದ ಹಾದಿಯು ಅದೇ ಆಗಿದೆ. ಪರಿಪರಿಯಾಗಿ ಪರಮಾತ್ಮನನ್ನು ಬೇಡಿಕೊಳ್ಳುವ ವಚನಗಳನ್ನು 'ಹರಕಾರುಣ್ಯ' ಎಂಬ ವಿಭಾಗದಲ್ಲಿ ಸೇರಿಸಲಾಗಿದೆ. ಅಂಗಗುಣವಳಿದು ಭಕ್ತಿರಸ ಆವರಿಸಲು ಹರಕರುಣೆ ಬೇಕು. ಹರಕರುಣೆಯನ್ನೇ ಹಾರೈಸುತ್ತಿದ್ದ ಬಸವಣ್ಣ ಸಫಲತೆ ಪಡೆದ ಮಾತುಗಳೂ ಅಲ್ಲಿ ಬಂದಿವೆ. ವಿಶ್ವದಲ್ಲಿ ಉಳಿದಾವ ಬಾಂಧವ್ಯವೂ ಪ್ರಯೋಜನಕ್ಕೆ ಬರುವುದಿಲ್ಲ. ಆರಿಗಾರೂ ಇಲ್ಲ. ಕೆಟ್ಟವಂಗೆ ಕೆಳೆ ಇಲ್ಲ. ಜಗದ ನಂಟ ದೇವನೊಬ್ಬನೇ. ಈ ಭಾವ ನಮ್ಮಲ್ಲಿ ದೃಢವಾದಾಗ ನಿಜದನೆಲೆ ಸಾಧ್ಯವಾಗುತ್ತದೆ. ಪರಮಾತ್ಮನನ್ನು ಅರಿತಾಗ ಎಲ್ಲ ಬಗೆಯ ಭಿನ್ನಭಾವವು ದೂರಾಗಿ ಸರ್ವಾಂತರ್ಯಾಮಿಯಾದ ದೈವೀಚೇತನದ ಸಂಸ್ಪರ್ಶ ಎಲ್ಲೆಡೆಗೆ ಒದಗಿಬರುತ್ತದೆ. ಪರಮಾತ್ಮನನ್ನು ಅರಿಯದಿದ್ದಾಗ ಕುರಿಯ ಹಿಂಡು ಕಬ್ಬಿನ ತೋಟವ ಹೊಕ್ಕು ಹೊರಗಣ ಎಲೆಯ ಮೇದಂತೆ. ತನ್ನನ್ನು ತಾನರಿತು ಆ ಮೂಲಕ ದೇವನನ್ನೂ ಅರಿತುಕೊಂಡಾಗ ಕಬ್ಬಿನ ತನಿರಸವ ಸೇವಿಸಿದಂತೆ. ಓದಿದರೆ, ಕೇಳಿದರೆ ಫಲವಿಲ್ಲ. ಅನುಭವಿಸಿ ಪಡೆಯಬೇಕು, ದೈವೀಸಂಸ್ಪರ್ಶದ ಆನಂದವನ್ನು. ಕೊಡುವಾತ, ಕೊಂಬಾತ ದೇವ. ಮಾನವರು ಕೊಡುವರೆಂಬುದು, ಕೆಡಿಸುವರೆಂಬುದು ಹುಸಿ. ಮೂಲದಲ್ಲಿ ಒಂದೇ ಆದ ದೈವೀಚೇತನ ಲೀಲೆಗಾಗಿ ಇಹದಲ್ಲಿ ಎರಡಾಯಿತು. ಹಾಗೆ ಎರಡಾದುದು ಮತ್ತೆ ಮೂಲ ದೈವೀಚೇತನದಲ್ಲಿ ಒಂದಾಗ-

ಬೇಕಾದುದೇ ನಿಜದ ನೆಲೆ. ಕುಲವಳಿದು, ಛಲವಳಿದು, ಮದವಳಿದು, ಸರ್ವ ಅಹಂಕಾರವಳಿದು ನಿಜದ ನೆಲೆಯನ್ನು ಪಡಿಯಬೇಕು. ಬಸವಣ್ಣ ಅದನ್ನು ಪಡೆದ ವಚನಗಳು 'ನಿಜದನೆಲೆ' ಎಂಬ ವಿಭಾಗದಲ್ಲಿವೆ.

ನಿಜದ ನೆಲೆಯನ್ನರಿತಾಗ ಎಲ್ಲೆಲ್ಲಿಯೂ ಸಮತೆ–ಸಮರಸಗಳು ಮೈ-ಗೂಡುವವು. ಜಗದೊಳಗೆ ಕೂಡಿ ಪರಿಪೂರ್ಣವಾದ ಬಳಿಕ ಇದಿರ ನೋಡಿ ಜರೆದು ನುಡಿಯುವ ತಾಣವಾವುದೂ ಇಲ್ಲ. ತನಗೆ ಮುನಿದವರ ಬಗೆಗೂ ಮುನಿಯಬೇಕಾಗಿಲ್ಲ. ಒಲಿವೆನೆಂಬುದು ಕಾಯಗುಣ, ಒಲ್ಲೆಂಬುದು ವೈರಾಗ್ಯ. ಇವೆರಡನ್ನೂ ಬಿಟ್ಟು ತಾನಾಗಿಯೇ ಬಂದುದನ್ನು ಲಿಂಗಾರ್ಪಿತವೆಂದು ಭೋಗಿಸ-ಬೇಕು. ಪರಮಾತ್ಮನನ್ನು ಪೂಜಿಸಿ ಪೂಜಿಸಿ ತನ್ನನ್ನೇ ಮರೆಯುವ ಸ್ಥಿತಿಯ ನಿಲುಕಡೆಯನ್ನು ಮಾನವ ಪಡೆಯಬಲ್ಲ. ಬಸವಣ್ಣ ಪಡೆದಿದ್ದ. ಮಾಡುವ, ಮಾಡಿಸಿಕೊಂಬ ನಿಲುಕಡೆ ಒಂದೇ ಆದ ನಿಲವು, ಅದು. ಗುರುವೊಂದೇ, ಲಿಂಗವೊಂದೇ, ಜಂಗಮವೊಂದೇ, ಪ್ರಸಾದವೊಂದೇ. ಒಂದಾದಲ್ಲಿ ಎರಡಾಗಿ ಮಾಡುವ ಭಕ್ತ ನೀನೇ ಕೂಡಲಸಂಗಮದೇವಾ.

ಇದೇ ಅನುಭಾವಿಯ ನಿಲವು. ಅನುಭಾವವೆಂಬುದು ಬೀದಿಯ ಪಸರ-ವಲ್ಲ, ಸಂತೆಯ ಸುದ್ದಿಯಲ್ಲ. ಅನುಭಾವವೆಂಬುದು ಅಂತರಂಗದ ರತ್ನ. ಸ್ವಯಲಿಂಗದನುಭವ ತನಗೆ ದೊರೆಕೊಂಡ ಬಳಿಕ ದೇವಲೋಕ, ಮರ್ತ್ಯ-ಲೋಕವೆಂಬುದರಲ್ಲಿ ಆವ ಭೇದವೂ ಇಲ್ಲ. ಬಯಲನೊಳಕೊಂಡ ಬ್ರಹ್ಮಾಂಡ-ದೊಳಗಿಪ್ಪ ಸ್ವಯಾನುಭಾವಿಗಳ ಅನುಭಾವದ ಮಹತಿಯನ್ನು 'ಅನುಭಾವ' ಎಂಬ ಶೀರ್ಷಿಕೆಯಲ್ಲಿಯ ವಚನಗಳು ವಿವೇಚಿಸುತ್ತವೆ. ಎಲ್ಲೆಲ್ಲಿಯೂ ಪರ-ಮಾತ್ಮನನ್ನು ಅರಿಯಲು ಸಾಧ್ಯವಾದಾಗ ಮನದ ಸೂತಕವು ಅಳಿದುಹೋಗು-ತ್ತದೆ. ಬಯಲ ರೂಪ ಮಾಡಬಲ್ಲಾತ ಶರಣ; ಆ ರೂಪ ಬಯಲ ಮಾಡ-ಬಲ್ಲಾತ ಲಿಂಗಾನುಭಾವಿ. ಆ ಉಭಯವೊಂದಾದಾಗ ತೆರಹಿಲ್ಲದಂತೆ ಪರ-ಮಾತ್ಮನ ಸಂಪರ್ಕವೊದಗುವುದು. ಕೂಡಲಸಂಗಮದೇವನೆಂಬ ಸಾಗರ-ದೊಳೋಲಾಡುವ ಸ್ಥಿತಿಯದು. ಬೆಳಗು ಬೆಳಗ ಕೂಡಿದ ಕೂಟವದು.

ಆತ್ಮಪರಿಶೀಲನೆಯಿಂದ ಅನುಭಾವದ ವರೆಗಿನ ವಿವಿಧ ನಿರೂಪಣೆಯು ಈ ವಚನಸಂಗ್ರಹದಲ್ಲಿದೆ. ಬಸವಣ್ಣನ ಮೂರ್ತಿಸ್ವರೂಪ, ಸಂದೇಶ, ಸಾಧನ-ಮಾರ್ಗ, ಸಿದ್ಧಿಯ ಹಂತ, ಪ್ರಗತಿಪರ ಪರಿಶುದ್ಧ ಸಮಾಜರಚನೆಯ ತಳಹದಿ–

ಇತ್ಯಾದಿ ವಿಚಾರಪ್ರಣಾಲಿಯನ್ನು ಇಲ್ಲಿ ನಾವು ಕಂಡುಕೊಳ್ಳುತ್ತೇವೆ. ಪ್ರಾಮಾಣಿಕವಾದ ನಮ್ರ ಆತ್ಮನಿವೇದನೆಯೊಂದಿಗೆ ಧಾರ್ಮಿಕ ಡಂಭಾಚಾರಗಳನ್ನು ನಿರ್ಭಯವಾಗಿ ಖಂಡಿಸುವ ರೀತಿಯೂ ಇಲ್ಲಿದೆ. ದೇವನೊಬ್ಬನೇ ಎಂಬುದನ್ನು ಬಸವಣ್ಣ ತನ್ನ ವಚನಗಳಲ್ಲಿ ಬಹಳ ಪರಿಣಾಮಕಾರಿಯಾದ ಬಗೆಯಲ್ಲಿ ಹೇಳಿದ್ದಾನೆ. ಕ್ಷುದ್ರ ದೇವತೆಗಳ ಉಪಾಸನೆಯನ್ನು ವಿಡಂಬಿಸಿದ್ದಾನೆ. ಧಾರ್ಮಿಕ ಜೀವನದಲ್ಲಿ ಸರ್ವರಿಗೂ ಸಮಾನ ಅವಕಾಶ, ಕಾಯಕತತ್ತ್ವ, ಅಂತರಂಗಶುದ್ಧಿಯ ಮಹತ್ತ್ವ, ಸದಾಚಾರ, ಸದ್ಭಕ್ತಿ, ಸದುನುಡಿ, ಸರ್ವಾರ್ಪಣಭಾವ, ಸಮರಸಜೀವನ– ಇತ್ಯಾದಿ ವಿಚಾರಪ್ರಣಾಲಿಯನ್ನೊಳಗೊಂಡ ಬಸವಣ್ಣನ ಬೋಧೆಯು ಸಕಲ ಜೀವಾತ್ಮರ ಲೇಸನ್ನು ಬಯಸುವಂತಹದಾಗಿದೆ. ಗಹನವಿಚಾರಗಳನ್ನು ಮನಂಬುಗುವಂತೆ ಸರಳವಾಗಿ ವಿವೇಚಿಸುವ ಭಾಷಾ ಶೈಲಿಯಿಂದ ಈ ವಚನಗಳು ಕೂಡಿವೆ. ಭಾವವು ಶುದ್ಧವೂ ನೇರವೂ ಆದಾಗ ಭಾಷೆಯು ಸುಂದರವೇ ಆಗಿರುತ್ತದೆ. ಬಾಯಬಲ್‌ದಲ್ಲಿಯ ಕ್ರೈಸ್ತನ ವಾಣಿಯನ್ನು ನಾವು ನೆನಪಿಗೆ ತಂದುಕೊಳ್ಳಬಹುದು. ಬಸವಣ್ಣನ ವಚನಗಳ ಭಾಷೆಯು ಪರಿಪಕ್ವ ಹೃದಯದ, ಮಾಗಿದ ಅನುಭವದ ಪ್ರತೀಕವಾಗಿದೆ. ಸಾಮಾನ್ಯವಾಗಿ ಜಡ ಮತ್ತು ರುಕ್ಷವೆನಿಸುವ ಆತ್ಮಾನಾತ್ಮ, ಶಿವಾಶಿವ ವಿಚಾರಗಳು ಬಸವಣ್ಣನ ವಾಣಿಯಲ್ಲಿ ಸರಸ, ಸುಂದರ ರೂಪ ತಳೆದುಬಂದಿವೆ. ಆತ್ಮೋನ್ನತಿಯ ರಹಸ್ಯವನ್ನು ಇಷ್ಟೊಂದು ಸುಲಭವಾಗಿ, ಸೊಗಸಾಗಿ ತಿಳಿಸಿಕೊಟ್ಟ ಬಸವಣ್ಣ ಲೋಕಪ್ರಿಯ ವ್ಯಕ್ತಿಯಾದುದು ಸಹಜವೇ ಆಗಿದೆ. ಬಸವಣ್ಣನ ವಚನಗಳಲ್ಲಿ ಲೋಕಜೀವನದ ವಿಪುಲ ಅನುಭವವಿದೆ. ಜನಜೀವನದ ಆಗು–ಹೋಗುಗಳಿಂದ, ನಡೆ–ನುಡಿಗಳಿಂದ ಆರಿಸಿಕೊಂಡ ದೃಷ್ಟಾಂತಗಳನ್ನು, ಉಪಮೆಗಳನ್ನು ಈ ವಚನಗಳಲ್ಲಿ ವಿಪುಲವಾಗಿ ಬಳಸಿಕೊಳ್ಳಲಾಗಿದೆ. ಬಸವಣ್ಣನ ವಚನಗಳಿಂದ ಬಗೆಬಗೆಯ ನುಡಿಮುತ್ತುಗಳನ್ನು, ನಾಣ್ನುಡಿಗಳನ್ನು ಸಂಗ್ರಹಿಸಿಕೊಳ್ಳಬಹುದಾಗಿದೆ. ಬಸವಣ್ಣನು ತನ್ನ ಸಾಧಕಜೀವನದ ವಿವಿಧ ಹಂತಗಳನ್ನು ವಚನಗಳಲ್ಲಿ ಚಿತ್ತಾಕರ್ಷಕವಾಗಿ ಚಿತ್ರಿಸಿದ್ದಾನೆ. ನೂರಾರು ಉಪದೇಶಗಳಿಗಿಂತ ಒಬ್ಬ ಮಹಾಪುರುಷನ ಜೀವನದ ಅರ್ಥಪೂರ್ಣ ಅನುಭವಗಳ ರಮ್ಯಚಿತ್ರಣವು ಜನತೆಯ ಹೃದಯವನ್ನು ತಟ್ಟಿ .ಮುಟ್ಟಿ ಉತ್ತಮ ಸಂಸ್ಕಾರವನ್ನು ಒದಗಿಸುವಲ್ಲಿ ಹೆಚ್ಚು ಪ್ರಯೋಜನಕಾರಿಯಾಗುತ್ತದೆ. ಕೇವಲ

ಆಧ್ಯಾತ್ಮಿಕವಾಗಿ ಮಾತ್ರವಲ್ಲ, ಲೌಕಿಕವಾಗಿಯೂ ಸಫಲಜೀವನ ನಡೆಸಿದ ಬಸವಣ್ಣನು ತನ್ನ ಬಾಳಿನಲ್ಲಿ ಇಹ-ಪರಗಳ ಸಮನ್ವಯವನ್ನು ಹೇಗೆ ಸಾಧಿಸಿದನೆಂಬುದನ್ನು ಈ ವಚನಗಳಿಂದ ನಾವು ಅರಿತುಕೊಳ್ಳುತ್ತೇವೆ. ಜೀವನತತ್ತ್ವ-ಆಧ್ಯಾತ್ಮಿಕತತ್ತ್ವ, ಸಾಹಿತ್ಯಿಕ ರಸತ್ವಗಳ ತ್ರಿವೇಣೀ ಸಂಗಮವು ಇಲ್ಲಿದೆ. ಸ್ವಧರ್ಮ, ಸಮಾಜಧರ್ಮ, ಮಾನವಧರ್ಮ—ಇವುಗಳ ಮೂಲಭೂತ ತತ್ತ್ವಗಳನ್ನೊಳಗೊಂಡ ಬಸವಣ್ಣನ ವಚನಗಳು ತಿಳಿಯಾದ ಭಾಷೆಯಿಂದ ಹೃದಯಂಗಮವಾದ ಶೈಲಿಯಿಂದ, ಆತ್ಮೀಯವಾದ ನಿರೂಪಣೆಯಿಂದ ಕೂಡಿವೆ. ಘನವಾದ ವಿಚಾರಪ್ರಣಾಲಿ, ಸುರಸ ಕಾವ್ಯದ ಹೃದಯಂಗಮತೆ, ಸಂಗೀತದ ಸವಿಗಳನ್ನು ಮೇಳವಿಸಿಕೊಂಡ ವಚನಗಳ ಪ್ರಾತಿನಿಧಿಕ ಸಂಗ್ರಹವು ಇದಾಗುವಂತಹ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

(೪)

ಈ ಸಂಗ್ರಹಕ್ಕೆ ವಚನಗಳನ್ನು ಆಯ್ದುಕೊಳ್ಳುವಾಗ ಡಾ. ಫ. ಗು. ಹಳಕಟ್ಟಿ ಅವರ ಪ್ರಕಟನೆಗಳನ್ನು, ಲಿಂಗೈಕ್ಯ ಪ್ರೊ. ಬಸವನಾಳರು ಸಂಪಾದಿಸಿದ 'ಬಸವಣ್ಣನವರ ಷಟ್ಸ್ಥಲ ವಚನಗಳು', 'ಹೆಚ್ಚಿಗೆ ದೊರೆತ ವಚನಗಳು' ಮತ್ತು 'ಲಿಂಗಲೀಲಾವಿಲಾಸಚಾರಿತ್ರ'ದಲ್ಲಿ ಬಂದಿರುವ ವಚನಗಳು—ಇವುಗಳ ಉಪಯೋಗವನ್ನು ಪಡೆದುಕೊಂಡಿದ್ದೇನೆ. ಸಾಮಾನ್ಯವಾಗಿ ಲಿಂ. ಬಸವನಾಳರ ಪಾಠಗಳನ್ನು ಮುದ್ರಣದ ಕ್ರಮವನ್ನು ನಾನು ಅಂಗೀಕರಿಸಿದ್ದೇನೆ. ಆಯ್ದುಕೊಂಡ ವಚನಗಳ ಪ್ರಥಮ ಪಾದಗಳ ಅಕಾರಾದಿ ಪಟ್ಟಿಯನ್ನು ಕೊನೆಯಲ್ಲಿ ಸೇರಿಸಿದ್ದೇನೆ. ಇಲ್ಲಿ ಬಂದಿರುವ ವಚನಗಳ ವಿಭಾಗಗಳ ಹೊಣೆ ನನ್ನದಾಗಿದೆ. ಈ ವಚನ ಸಂಗ್ರಹದ ವಿಶಿಷ್ಟ ಉದ್ದೇಶಕ್ಕನುಗುಣವಾಗಿ ನಾನು ವಿಭಾಗಕ್ರಮವನ್ನು ಹಾಗೆ ಇಟ್ಟುಕೊಳ್ಳಬೇಕಾಯಿತು.

ಈ ಸಂಗ್ರಹದ ಕಾರ್ಯವನ್ನು ನನಗೆ ವಹಿಸಿಕೊಟ್ಟ ಸಾಹಿತ್ಯ ಅಕಾಡೆಮಿಯ ಅಧಿಕಾರಿಗಳಿಗೆ ನಾನು ಉಪಕೃತನಾಗಿದ್ದೇನೆ. ನಾನು ಬಳಸಿಕೊಂಡ ಸಂಕಲನಗಳ ಸಂಪಾದಕರಿಗೂ, ನನ್ನ ಈ ಕಾರ್ಯದಲ್ಲಿ ನೆರವಾದ ಸ್ನೇಹಿತರಿಗೂ ನಾನು ಋಣಿಯಾಗಿದ್ದೇನೆ.

ಧಾರವಾಡ
೨೬–೪–೧೯೬೩ **ಸ. ಸ. ಮಾಳವಾಡ**

ಶ್ರೀ ಬಸವಣ್ಣನವರ ವಚನ ಸಂಗ್ರಹ

ವಿಭಾಗಗಳ ಪರಿವಿಡಿ

ಶ್ರೀ ಬಸವಣ್ಣನವರ ವಚನ ಸಂಗ್ರಹ

೧

ಆತ್ಮನಿವೇದನೆ-ಪರಿಶೀಲನೆ

೧

' ಅಯ್ಯಾ, ಅಯ್ಯಾ ' ಎಂದು ಕರೆಯುತ್ತಲಿದ್ದೇನೆ;
' ಅಯ್ಯಾ, ಅಯ್ಯಾ ' ಎಂದೊಱಲುತ್ತಲಿದ್ದೇನೆ :
' ಓ ' ಎನ್ನಲಾಗದೇ, ಅಯ್ಯಾ ?
ಆಗಳೂ ನಿಮ್ಮುವ ಕರೆಯುತ್ತಲಿದ್ದೇನೆ :
ಮೌನವೇ, ಕೂಡಲಸಂಗಮದೇವಾ ?

೨

ಅಡವಿಯೊಳಗೆ ಹೊಲಬುಗೆಟ್ಟ ಪಶುವಿನಂತೆ,
' ಅಂಬೇ ಅಂಬೇ ' ಎಂದು ಕರೆಯುತ್ತಲಿದ್ದೇನೆ;
' ಅಂಬೇ ಅಂಬೇ ' ಎಂದು ಒಱಲುತ್ತಲಿದ್ದೇನೆ;
ಕೂಡಲಸಂಗಮದೇವ ' ಬಾಳು, ಬಾಳೆ 'ಂಬನ್ನಕ್ಕ.

೩

ಬಡಪಸು ಪಂಕದಲ್ಲಿ ಬಿದ್ದೊಡೆ ಕಾಲ ಬಡಿವುದಲ್ಲದೆ
ಬೇಱೆ ಗತಿಯುಂಟೆ ?
ಶಿವ ಶಿವಾ ! ಹೋದಹೆ, ಹೋದಹೆನಯ್ಯಾ !
ನಿಮ್ಮ ಮನದತ್ತಲೆನ್ನ ತೆಗೆಯಯ್ಯಾ,
ಪಶುವಾನು; ಪಶುಪತಿ ನೀನು !
ತುಡುಗುಣಿಯೆಂದು ಎನ್ನ ಹಿಡಿದು ಬಡಿಯದ ಮುನ್ನ,
ಒಡೆಯ ನಿಮ್ಮ ಬಯ್ಯದಂತೆ ಮಾಡು, ಕೂಡಲಸಂಗಮದೇವಾ.

೪

ಬಲೆಗೆ ಸಿಕ್ಕಿದ ಮೃಗದಂತೆ ನಾನಯ್ಯ,
ಮಱಿದಪ್ಪಿದ ಹುಲ್ಲೆಯಂತೆ,
ದೆಸೆದೆಸೆಗೆ ಬಾಯಿಬಿಡುತಿರುವೆನಯ್ಯಾ.
ನಾನಾರ ಸಾರುವೆನಯ್ಯಾ ?
ತಾಯಾಗಿ ತಂದೆಯಾಗಿ ನೀನೆ,
ಸಕಲ ಬಂಧು ಬಳಗವು ನೀನೆ,
ಕೂಡಲಸಂಗಮದೇವಾ.

೫

ಹೊಲಬುಗೆಟ್ಟ ಶಿಶು ತನ್ನ ತಾಯ ಬಯಸುವಂತೆ,
ಬಳಿದಪ್ಪಿದ ಪಶು ತನ್ನ ಹಿಂಡನಱಸುವಂತೆ,
ಬಯಸುತ್ತಿರ್ದೆನಯ್ಯಾ ನಿಮ್ಮ ಶರಣರ ಬರವನು;
ಬಯಸುತ್ತಿರ್ದೆನಯ್ಯಾ ನಿಮ್ಮ ಭಕ್ತರ ಬರವನು.
ದಿನಕರನುದಯಕ್ಕೆ ಕಮಳ ವಿಕಸಿತವಾದಂತೆ
ಎನಗೆ ನಿಮ್ಮ ಶರಣರ ಬರವು, ಕೂಡಲಸಂಗಮದೇವಾ.

೬

ಹುಟ್ಟಿಂದು ಲೋಕದಲ್ಲಿ ಹುಟ್ಟಿಸಿ ಇಳಿಯಬಿಟ್ಟೊಡೆ
ನಿಮ್ಮ ನಗುವರಯ್ಯಾ.
ಶಿವಬಟ್ಟೆಯೊಳೆನ್ನನು ಇರಿಸಯ್ಯಾ, ಹರನೇ,
ಹೊಲಬುಗೆಟ್ಟೆನು, ಬಟ್ಟೆಯ ತೋಱಯ್ಯಾ.
ಹುಯ್ಯಲಿಟ್ಟೆನು : " ಗಣಂಗಳು ಕೇಳಿರಯ್ಯಾ,
ಕೂಡಲಸಂಗಮದೇವಯ್ಯನೆನ್ನ ಕಾಡಿಹನಯ್ಯಾ ! "

೭

ಅಕಟಕಟಾ! ಶಿವ, ನಿನಗಿನಿತು ಕರುಣವಿಲ್ಲ;
ಅಕಟಕಟಾ! ಶಿವ, ನಿನಗಿನಿತು ಕೃಪೆಯಿಲ್ಲ.
ಏಕೆ ಹುಟ್ಟಿಸಿದೆ ಇಹಲೋಕದುಃಖಿಯ?
ಪರಲೋಕದೂರನ ಏಕೆ ಹುಟ್ಟಿಸಿದೆ?
ಕೂಡಲಸಂಗಮದೇವಾ, ಕೇಳಯ್ಯಾ,
ಎನಗಾಗಿ ಮತ್ತೊಂದು ತರುಮರನಿಲ್ಲವೆ?

೮

ಮೇರುಗುಣವನಱಸುವುದೆ ಕಾಗೆಯಲ್ಲಿ?
ಪರುಷಗುಣವನಱಸುವುದೆ ಕಬ್ಬುನದಲ್ಲಿ?
ಸಾಧುಗುಣವನಱಸುವುದೆ ಅವಗುಣಿಯಲ್ಲಿ?
ಚಂದನಗುಣವನಱಸುವುದೆ ತರುಗಳಲ್ಲಿ?
ಸರ್ವಗುಣಸಂಪನ್ನಲಿಂಗವೇ,
ನೀನೆನ್ನಲ್ಲಿ ಅವಗುಣವನಱಸುವರೆ,
ಕೂಡಲಸಂಗಮದೇವಾ?

೯

ಮತಿಮಂದನಾಗಿ ಗತಿಯ ಕಾಣದೆ ಇರ್ದೆನಯ್ಯಾ!
ಹುಟ್ಟುಗುರುಡನ ಕಯ್ಯೆ ಕೋಲ ಕೊಟ್ಟು ನಡೆಸುವಂತೆ
ನಡೆಸಯ್ಯಾ ಎನ್ನಾ.
ನಿಮ್ಮಚ್ಚಶರಣರ ಒಕ್ಕುದ ಮಿಕ್ಕುದ ನಚ್ಚಿಸು, ಮೆಚ್ಚಿಸು,
ಕೂಡಲಸಂಗಮದೇವಾ.

೧೦

ಬೆಳೆಭೂಮಿಯೊಳೊಂದು ಪ್ರಳಯದ ಕಸ ಹುಟ್ಟಿ
ತಿಳಿಯಲೀಯದು, ಎಚ್ಚಱಲೀಯದು !
ಎನ್ನವಗುಣವೆಂಬ ಕಸವ ಕಿತ್ತು ಸಲಹಯ್ಯಾ, ಲಿಂಗತಂದೆ!
ಸುಳಿದೆಗೆದು ಬೆಳೆವೆನು, ಕೂಡಲಸಂಗಮದೇವಾ.

೧೧

ತಾಳಮಾನ ಸರಿಸವನಱಿಯೆ,
ಓಜೆಬಜಾವಣಿಯ ಲೆಕ್ಕವನಱಿಯೆ,
ಅಮೃತಗಣ ದೇವಗಣವನಱಿಯೆ!
ಕೂಡಲಸಂಗಮದೇವಾ, ನಿನಗೆ ಕೇಡಿಲ್ಲವಾಗಿ
ಆನೊಲಿದಂತೆ ಹಾಡುವೆ !

೧೨

ಬೆದಕದಿರು, ಬೆದಕದಿರು; ಬೆದಕಿದೊಡೆ ಹುರುಳಿಲ್ಲ.
ಚಿತ್ತರಟ್ಟೆಯ ಕಾಯಲ್ಲಿ ಮತ್ತೇನನಱಸುವಿರಯ್ಯಾ?
ನಿಮ್ಮುತ್ತಮಿಕೆಯನೇ ಪೂರಯಿಸುವುದು,
ಕೂಡಲಸಂಗಮದೇವಾ.

೧೩

ನಾನು ಭಕ್ತನಲ್ಲವಯ್ಯಾ, ನಾನು ಯುಕ್ತನಲ್ಲವಯ್ಯಾ,
ನಾನು ಕಪಟವೇಷಡಂಭಕನಯ್ಯಾ, ಕೂಡಲಸಂಗಮದೇವಾ,
ಎನ್ನ ಭಕ್ತಿ ಮಳಲೊಟ್ಟಿಲು ಎಂಬುದ ನೀವು ತೋಱಿದಿರಾಗಿ
ಎನಗೆ ಅಱಿಯಬಂದಿತಯ್ಯಾ, ಪ್ರಭುವೆ.

೧೪

ದಂದುಗ ಬಿಡದು, ಮನದ ಸಂದೇಹ ಹಿಂಗದಾಗಿ :
ಮುಂದೆ ಲಿಂಗವ ಕಂಡಹೆನೆಂಬುದು ಹುಸಿ ನೋಡಾ!
ಬೆಂದ ಕರಣಾದಿಗಳು ಒಂದೇ ಪಂಥವನಱಿಯವು :
ಎಂತು ಶಿವಪಥವೆನಗೆ ಸಾಧ್ಯವಪ್ಪುದಯ್ಯಾ?
ಎನ್ನ ತಂದೆ ಕೂಡಲಸಂಗಮದೇವಾ,
ನಿನ್ನ ಶರಣರ ಬಳಿವಿಡಿದರೆ ಎನ್ನ ದಂದುಗ ಹಿಂಗುವುದು.

೧೫

ತಾಮಸದೆ ಮುಸುಕಿ ಕಂಗಳ ಕೆಡಿಸಿತ್ತೆನ್ನ ಭಕ್ತಿ;
ಕಾಮವೆಂಬಗ್ನಿಗೆ ಮುಱಿದಿಕ್ಕಿತ್ತೆನ್ನ ಭಕ್ತಿ;
ಉದರಕ್ಕೆ ಕುದಿಕುದಿದು ಮುಂದುಗೆಡಿಸಿತ್ತೆನ್ನ ಭಕ್ತಿ;
ಹೆಣಮೂಳನು ನಾನು, ಕೂಡಲಸಂಗಮದೇವಾ!
ಕ್ಷಣ ಹದುಳವಿರದೆ ಬಾಯ ಟೊಣೆದೇ ಹೋಯಿತ್ತೆನ್ನ ಭಕ್ತಿ!

೧೬

ಕಾಣುತ್ತ ಕಡೆಗಣಿಸಿ, ಕೆಡಿಸಿಯಱಿಸುವ
ಮತಿಭ್ರಷ್ಟ ನಾನು, ಲಿಂಗಯ್ಯಾ.
ತನುಲೋಭ, ಮನಲೋಭ, ಧನಲೋಭ
ಮುಂದುಗೆಡಿಸಿ ಕಾಡಿಹವೆನ್ನ.
ತನು–ಮನ–ಧನವ ನಿವೇದಿಸಿದವರ ಮನೆಯ ಮಗ ನಾನಯ್ಯಾ,
ಕೂಡಲಸಂಗಮದೇವಾ.

೧೭

ತನುವ ಕೊಟ್ಟೆನೆಂದು ನುಡಿದು ಗುರುವಚನಕ್ಕೆ ದೂರವಾದೆ;
ಮನವ ಕೊಟ್ಟೆನೆಂದು ನುಡಿದು ಲಿಂಗಮುಖಕ್ಕೆ ದೂರವಾದೆ;
ಧನವ ಕೊಟ್ಟೆನೆಂದು ನುಡಿದು ಜಂಗಮಮುಖಕ್ಕೆ ದೂರವಾದೆ.
ಕೂಡಲಸಂಗಮದೇವಯ್ಯಾ, ನಿಮಗೆ ಮಾಡಿದೆನೆಂದು ನುಡಿದು
ಕೆಟ್ಟ, ಕೇಡಿಂಗೆ ಕಡೆಯಿಲ್ಲ.

೧೮

ತನು ನಿಮ್ಮದೆಂಬೆ, ಮನ ನಿಮ್ಮದೆಂಬೆ, ಧನ ನಿಮ್ಮದೆಂಬೆ :
ಮತ್ತೆಯೂ ವಂಚನೆ ಮಾಣದಯ್ಯಾ !
ಲಿಂಗ ಜಂಗಮವೆಂಬೆ, ಜಂಗಮ ಲಿಂಗವೆಂಬೆ :
ಮತ್ತೆಯೂ ವಂಚನೆ ಮಾಣದಯ್ಯಾ !
ಒಡಲೊಡವೆ ಹಡೆದರ್ಥ ನಿಮ್ಮದೆಂಪಱಿಯದೆ
ಕೆಮ್ಮನೆ ಕೆಟ್ಟೆ, ಕೂಡಲಸಂಗಮದೇವಾ !

೧೯

ಒಲೆ ಹತ್ತಿಯುರಿದೊಡೆ ನಿಲಬಹುದಲ್ಲದೆ
ಧರೆ ಹತ್ತಿಯುರಿದೊಡೆ ನಿಲಬಾರದು.
ಏರಿ ನೀರುಣ್ಬೊಡೆ, ಬೇಲಿ ಕೆಯ್ಯ ಮೇವೊಡೆ,
ನಾರಿ ತನ್ನ ಮನೆಯಲ್ಲಿ ಕಳುವೊಡೆ,
ತಾಯ ಮೊಲೆವಾಲು ನಂಜಾಗಿ ಕೊಲುವೊಡೆ
ಇನ್ನಾರಿಗೆ ದೂಱುವೆ, ಕೂಡಲಸಂಗಮದೇವಾ ?

೨೦

ಒಲುವ ಗಂಡನೊಮ್ಮೆ ಒಲ್ಲದಿಪ್ಪ ಕಂಡಯ್ಯಾ;
ತಪ್ಪೆನ್ನದು, ತಪ್ಪೆನ್ನದು!
ತನು—ಮನ–ಧನದಲ್ಲಿ ಮಾಟಕೂಟವೆಂದಱಿಯದ
ತಪ್ಪೆನ್ನದು, ತಪ್ಪೆನ್ನದು!
ಕಡೆಯಿಲ್ಲದ ಹುಸಿಯೆನ್ನದು, ಕೂಡಲಸಂಗಮದೇವಾ!

೨೧

ಒಡೆಯರಿಗೆ ಒಡವೆಯನೊಪ್ಪಿಸಲಾಱದೆ
ಮೊಱೆಯಿಡುವ ಮನವ ನಾನೇನೆಂಬೆ?
ನೆತ್ತಿಯಲ್ಲಿ ಅಲಗ ತಿರುಹುವಂತಪ್ಪ ವೇದನೆಯಹುದೆನಗೆ!
ಕೊಯಿದ ಮೂಗಿಂಗೆ ಕನ್ನಡಿಯ ತೋಱುವಂತಪ್ಪ ವೇದನೆಯಹುದೆನಗೆ!
ಬೆಂದ ಹುಣ್ಣ ಕಂಬಿಯಲ್ಲಿ ಕೀಸುವಂತಪ್ಪ ವೇದನೆಯಹುದೆನಗೆ!
ಕೂಡಲಸಂಗಮದೇವ ಮಾಡಿ ನೋಡುವ ಹಗರಣವ
ನಾ ಮಾಡಿಹೆನೆಂದರೆ ಮನಕ್ಕೆ ಮನ ನಾಚದೆ ಅಯ್ಯಾ?

೨೨

ಎನ್ನ ಆಪತ್ತು, ಸುಖ–ದುಃಖವನಿನ್ನಾರಿಗೆ ಹೇಳುವೆ?
ಶರಣಸ್ಥಳದವರಿಗೆ ಹೇಳಿದರೆ ಮಚ್ಚರ!
ಸವತಿ ಸಕ್ಕರೆ—ಬೇವು ಬೆಲ್ಲ ಉಂಟೆ?
ಇನ್ನಾರಿಗೆ ಹೇಳುವೆ?
ಕೂಡಲಸಂಗಮದೇವಾ, ಜಂಗಮವಾಗಿ ಬಂದು
ಎನ್ನ ಮನದ ಸೂತಕವ ಕಳೆಯಾ.

೨೩

ಎನ್ನ ನುಡಿಯೆ ಎನಗೆ ನಂಜಾಯಿತ್ತು: ಎನ್ನಲಗೆ ಎನ್ನ ಕೊಂದಿತ್ತು!
ಆನು ಪಾಪಿಯಯ್ಯಾ, ಆನು ಕೋಪಿಯಯ್ಯಾ:
ತರಳತನದಲ್ಲಿ ಕೆಟ್ಟೆನಯ್ಯಾ!
ಭಕ್ತಿಯುಕ್ತಿಯ ಹೊಲಬನಱಿಯದೆ ಆನು ಮರುಳಾದೆನಯ್ಯಾ!
ಆಳು ಮುನಿದರೆ ಆಳೇ ಕೆಡುವುದು:
ನೀವು ಮುನಿದರೆ ನಾನೇ ಕೆಡುವೆನಯ್ಯಾ,
ಕೂಡಲಸಂಗಮದೇವಾ.

೨೪

ಎನ್ನ ತಪ್ಪು ಅನಂತಕೋಟಿ, ನಿಮ್ಮ ಸೈರಣೆಗೆ ಲೆಕ್ಕವಿಲ್ಲ.
ಇನ್ನು ತಪ್ಪಿದೆನಾದರೆ ನಿಮ್ಮ ಪಾದವೇ ದಿಬ್ಯ!
ಕೂಡಲಸಂಗಮದೇವಯ್ಯಾ,
ನಿಮ್ಮ ಪ್ರಮಥರ ಮುಂದೆ ಕಿನ್ನರಿ ಬೊಮ್ಮಣ್ಣನೆ ಸಾಕ್ಷಿ!

೨೫

ಈ ಕಯ್ಯಲಿ ಸುಖವು: ಈ ಕೈಯ್ಯಲೇ ದುಃಖವು!
ಏಕಯ್ಯಾ, ನೀ ನಮ್ಮ ಬಱಿದೆ ಬಳಲಿಸುವೆ?
ನಾನಾರ ಸೇರುವೆನಯ್ಯಾ?
ಆರು ಇಲ್ಲದ ದೇಸಿಗ ನಾನು, ಕಾಣಾ,
ಕೂಡಲಸಂಗಮದೇವಾ.

೨೬

ಇಱಿಸಿಕೊಂಡು ಭಕ್ತರಾದರೆಮ್ಮವರು;
ತಱಿಸಿಕೊಂಡು ಭಕ್ತರಾದರೆಮ್ಮವರು;
ಕೊಱಿಯಿಸಿಕೊಂಡು ಭಕ್ತರಾದರೆಮ್ಮವರು;
ಜಱಿಯಿಸಿಕೊಂಡು ಭಕ್ತರಾದರೆಮ್ಮವರು:
ಕೂಡಲಸಂಗನ ಶರಣರಿಗೆ ಮುನಿಸ ತಾಳಿ
ಎನ್ನ ಭಕ್ತಿ ಅರೆಯಾಯಿತ್ತು!

೨೭

ಆನೆತ್ತ ಬಲ್ಲೆನಯ್ಯಾ, ನಿಮ್ಮ ಭಕ್ತಿಯ ಘನವ?
ಆನೆತ್ತ ಬಲ್ಲೆನಯ್ಯಾ, ನಿಮ್ಮ ಪ್ರಸಾದದ ನಿಲವ?
ಕಾಯದ ಕಳವಳದ ಮಱಿಯಲ್ಲಿದ್ದವರಲ್ಲಿ
ನಂಬುಗೆ ಅಳವಡುವುದೆ?
ಕೂಡಲಸಂಗಮದೇವಾ, ಎನ್ನ ಗುಣವ ನೋಡದೆ
ಕರುಣದಿಂದೆ ಭಕ್ತಿಯ ನಿಲವ ತೋಱಾ, ತಂದೇ!

೨೮

ಅಭ್ಯಾಸವೆನ್ನ ವರ್ತಿಸಿತ್ತಯ್ಯಾ:
ಭಕ್ತಿ ಸಾಧ್ಯವಾಗದು, ನಾನೇವೆನಯ್ಯಾ?
ಆ ನಿಮ್ಮ ಮನಬೊಗುವನ್ನಕ್ಕ, ನೀವೆನ್ನ ಮನಬೊಗುವನ್ನಕ್ಕ,
ಕಾಯಗುಣಂಗಳ ಕಳೆದವರಿಗೆ ಶರಣೆಂಬೆ,
ಕೂಡಲಸಂಗಮದೇವಾ.

೨೯

ಭಕ್ತನೆಂತೆಂಬೆನಯ್ಯಾ, ಭವಿಸಂಗ ಬಿಡದನ್ನಕ್ಕ?
ಮಾಹೇಶ್ವರನೆಂತೆಂಬೆನಯ್ಯಾ,
ಪರಸ್ತ್ರೀಯ ಪರರರ್ಥದಾಸೆ ಬಿಡದನ್ನಕ್ಕ?
ಪ್ರಸಾದಿಯೆಂತೆಂಬೆನಯ್ಯಾ,
ಆಧಿವ್ಯಾಧಿ ನಷ್ಟವಾಗದನ್ನಕ್ಕ?
ಪ್ರಾಣಲಿಂಗಿಯೆಂತೆಂಬೆನಯ್ಯಾ,
ಪ್ರಾಣ ಸ್ವಸ್ಥಿರವಾಗದನ್ನಕ್ಕ?
ಶರಣನೆಂತೆಂಬೆನಯ್ಯಾ,
ಪಂಚೇಂದ್ರಿಯ ನಾಸ್ತಿಯಾಗದನ್ನಕ್ಕ?
ಐಕ್ಯನೆಂತೆಂಬೆನಯ್ಯಾ,
ಜನನಮರಣವಿರಹಿತನಾಗದನ್ನಕ್ಕ?
ಇಂತಪ್ಪ ಭಾಷೆ ವ್ರತ ನೇಮಂಗಳನಾನಱಿಯೆನಯ್ಯಾ!
ಅಘಟಿತಘಟಿತವರ್ತಮಾನವ ನಾನಱಿಯೆನಯ್ಯಾ!
ನಿಮ್ಮ ಶರಣರ ತೊತ್ತು: ಭೃತ್ಯಾಚಾರವ ಮಾಡುವೆ,
ಕೂಡಲಸಂಗಮದೇವಾ.

೩೦

ಆಡೂದಳವಟ್ಟಿತ್ತು, ಹಾಡೂದಳವಟ್ಟಿತ್ತು,
ಅರ್ಚನೆಯಳವಟ್ಟಿತ್ತು, ಪೂಜನೆಯಳವಟ್ಟಿತ್ತು,
ನಿತ್ಯಲಿಂಗಾರ್ಚನೆ ಮುನ್ನವೆ ಅಳವಟ್ಟಿತ್ತು:
ಕೂಡಲಸಂಗನ ಶರಣರು ಬಂದರೆ
ಏನು ಬೆಸನೆಂಬುದು ಒಪ್ಪಚ್ಚಿಯಳವಡದು.

೩೧

ಆವಾವ ಭಾವದಲ್ಲಿ ಮಾಡಿ ಕೂಡಿಹೆವೆಂಬರ ಬಾಗಿಲ ತೋಱಯ್ಯಾ.
ತನುವನೊಪ್ಪಿಸಿದವರ, ಮನವನೊಪ್ಪಿಸಿದವರ,
ಧನವನೊಪ್ಪಿಸಿದವರ ಬಾಗಿಲ ತೋಱಯ್ಯಾ.
ಇವನೆಲ್ಲವನೊಪ್ಪಿಸಿ ಜಂಗಮವೆನ್ನವರೆನ್ನವರೆನ್ನವರೆಂಬವರ
ಕೆರಹ ಹೊತ್ತಿರಿಸೆನ್ನನು, ಕೂಡಲಸಂಗಮದೇವಾ.

೩೨

ಜನ್ಮಜನ್ಮಕ್ಕೆ ಹೋಗಲೀಯದೆ, 'ಸೋಽಹಂ' ಎಂದೆನಿಸದೆ
'ದಾಸೋಽಹಂ' ಎಂದೆನಿಸಯ್ಯಾ.
ಲಿಂಗಜಂಗಮದ ಪ್ರಸಾದವ ತೋಱ ಬದುಕಿಸಯ್ಯಾ,
ಕೂಡಲಸಂಗಮದೇವಾ.

೩೩

ನರ ಕೂರಂಬಿನಲೆಚ್ಚ: ಅವಂಗೊಲಿದೆಯಯ್ಯಾ!
ಅರಳಂಬಿನಲೆಚ್ಚಕಾಮನನುರುಹಿದೆಯಯ್ಯಾ!
ಇರುಳು ಹಗಲೆನ್ನದೆ ಪ್ರಾಣಘಾತವ ಮಾಡಿದ
ಬೇಡನ ಕೈಲಾಸಕ್ಕೊಯ್ದೆಯಯ್ಯಾ:
ಎನ್ನನೇತಕ್ಕೊಲ್ಲೆ, ಕೂಡಲಸಂಗಮದೇವಾ?

೩೪

ಏನನೋದಿ, ಏನ ಕೇಳಿ, ಏನ ಮಾಡಿಯೂ ಫಲವೇನು,
ನಿನ್ನವರೊಲಿಯದನ್ನಕ್ಕ, ಶಿವಶಿವ, ಮಹಾದೇವಾ?
ಬಾಳಿಲ್ಲದವಳ ಓಲೆಯಂತಾಯಿತ್ತೆನಗೆ ಕೂಡಲಸಂಗಮದೇವಾ.

೩೫

ಗಿಳಿಯ ಹಂಜರವಿಕ್ಕಿ, ಸೊಡರಿಂಗೆಣ್ಣೆಯನೆಱೆದು, ಬತ್ತಿಯನಿಕ್ಕಿ,
ಬರವ ಹಾರುತ್ತಿದ್ದೆನೆಲಗವ್ವಾ.
ತಱಗೆಲೆ ಗಿಱಕೆಂದೊಡೆ ಹೊಱಗನಾಲಿಸುವೆ :
ಅಗಲಿದೆನೆಂದೆನ್ನ ಮನ ಧಿಗಿಲೆಂದಿತ್ತೆಲಗವ್ವಾ.
ಕೂಡಲಸಂಗನ ಶರಣರು ಬಂದು, ಬಾಗಿಲ ಮುಂದೆ ನಿಂದು,
'ಶಿವಾ' ಎಂದರೆ, ಸಂತೋಷಬಟ್ಟೆನೆಲಗವ್ವಾ.

೩೬

ಅಂಕ ಓಡಿದರೆ ತೆತ್ತಿಗಂಗೆ ಭಂಗವಯ್ಯಾ :
ಕಾದಿ ಗೆಲಿಸಯ್ಯಾ, ಕೂಡಲಸಂಗಮದೇವಯ್ಯಾ,
ಎನ್ನ ತನು–ಮನ–ಧನದಲ್ಲಿ ವಂಚನೆಯಿಲ್ಲದೆ.

೩೭

ಓಡದಿರೋಡದಿರು : ನಿನ್ನ ಬೇಡುವವ ನಾನಲ್ಲ :
ಶಿವನೇ, ನೋಡುವೆ ಕಣ್ಣತುಂಬ ;
ಆಡಿ ಪಾಡಿ ನಲಿದಾಡುವೆ !
ಬೇಡೆನೆನ್ನ ಕೂಡೆ ಮಾತನಾಡಲಾಗದೆ ?
ಎಲೆ, ಕೂಡಲಸಂಗಮದೇವಾ, ನೀನಾಡಿಸುವ ಗೊಂಬೆ ನಾನು.

೩೮

ಭವಬಂಧನ ಭವಪಾಶಂಗಳಾದ ಕಾರಣವೇನಯ್ಯಾ ?
ಹಿಂದಣ ಜನ್ಮದಲ್ಲಿ ಲಿಂಗವ ಮಱೆದೆನಾಗಿ,
ಹಿಂದಣ ಸಿರಿಯಲ್ಲಿ ಜಂಗಮವ ಮಱೆದೆನಾಗಿ.
ಅಱೆದಡೆ ಸಂಸಾರವ ಹೊದ್ದಲೀವೆನೆ, ಕೂಡಲಸಂಗಮದೇವಾ ?

೩೯

ಹಾಲೆಂಜಲು ಪೆಯ್ಯನ, ಉದಕವೆಂಜಲು ಮತ್ಸ್ಯದ,
ಪುಷ್ಪವೆಂಜಲು ತುಂಬಿಯ, ಎಂತು ಪೂಜಿಸುವೆನಯ್ಯಾ,
ಶಿವ ಶಿವಾ! ಎಂತು ಪೂಜಿಸುವೆ?
ಈ ಎಂಜಲವನತಿಗಳೆವಡೆ ಎನ್ನಳವಲ್ಲ, ಬಂದುದ ಕೈಕೋ,
ಕೂಡಲಸಂಗಮದೇವಾ.

೪೦

ನಡೆಯೆ ಕಂಡಾ ನಂಬಿ: ನುಡಿಯೆಲ್ಲಾ ಉಪಚಾರ!
ಮಿಗಿಲೊಂದು ಮಾತು ಬಂದರೆ ಸೈರಿಸಲಾಱೆನು!
ತುಯ್ಯಲಾದರೆ ಉಂಬೆ: ಹುಯ್ಯಲಾದರೆ ಓಡುವೆ!
ಆಳು ಬೇಡಿದಡೆ ಆಳ್ದನೇನನೀಯನಯ್ಯಾ?
ಆಳಾಗಿ ಹೊಕ್ಕು ಅರಸಾಗಿ ನಡೆದರೆ
ಆಳಿಗೊಂಡಿತ್ತೆನ್ನ ಕೂಡಲಸಂಗನ ಭಕ್ತಿ!

೪೧

ಆಸತ್ತೆನಲಸಿದೆನೆಂದೊಡೆ ಮಾಣದು,
ಬೇಸತ್ತೆ ಬೆಂಬಿದ್ದೆನೆಂದೊಡೆ ಮಾಣದು,
ಏವೆನೇವೆನೆಂದೊಡೆ ಮಾಣದು,
ಕಾಯದ ಕರ್ಮದ ಫಲಭೋಗವು.
ಕೂಡಲಸಂಗನ ಶರಣರು ಬಂದು,
"ಹೋ, ಹೋ! ಅಂಜದಿರೆ"ಂದೊಡಾನು ಬರ್ದುಂಕುವೆನು.

೪೨

ಹೋ ಹೋ! ನಾನೊಬ್ಬರಿಗೆ ಉಪದೇಶವ ಮಾಡಲಮ್ಮೆನು.
ಮುನ್ನಲಾದವರು ತಮ್ಮಿಂದ ತಾವಾದರು :
ಅವರೆಲ್ಲರೂ ನಿಜ ಲಿಂಗೈಕ್ಯರು, ನಾನೇನೂ ಮಾಡಲಿಲ್ಲ.
ತತ್ತ್ವವ ಹಿಡಿದವರಿಗೆ ತೊತ್ತಾಗಿ ನಡೆವೆನು.
ಅಮರಗಣಂಗಳೇ ಸಾಕ್ಷಿ!
ಕೂಡಲಸಂಗಮದೇವರ ಮುಂದೆ
ಭಾಷೆ ಪ್ರಸಾದವನಿಕ್ಕಲಮ್ಮೆನಯ್ಯಾ, ಚೆನ್ನಬಸವಣ್ಣಾ.

೪೩

ಮಸಿಯನೇಸು ಕಾಲ ಬೆಳಗಿದರೆ, ಬಿಳಿದಾಗಬಲ್ಲುದೆ?
ಕರ್ಮಸ್ಥಿತಿ ಬೆನ್ನ ಬಿಡದು!
ಅನಂತಕೋಟಿ ಸನ್ಮಾನವ ಮಾಡಿದರೇನು?
ನಿಮಿಷದುದಾಸೀನ ಕೆಡಿಸಿತ್ತು!
ನಿಮ್ಮ ನಂಬಿಯೂ ನಂಬದ ಡಂಭಕ ನಾನಯ್ಯಾ,
ಕೂಡಲಸಂಗಮದೇವಾ.

೪೪

ಸಟೆಯಿಲ್ಲದಂತೆ, ಪ್ರಪಂಚುವಿಲ್ಲದಂತೆ, ವೈಶಿಕವಿಲ್ಲದಂತೆ,
ನಡೆಸಯ್ಯಾ, ಲಿಂಗತಂದೇ!
ಒಂದು ನಿಮಿಷವಾದರೆಯೂ ನಿಮ್ಮ ಶರಣರ ಸಂಗದಲ್ಲಿರಿಸಯ್ಯಾ,
ಬೇಡಿತೆ ಮತ್ತೆ ಅನ್ಯವ ತೋಱದಿರಯ್ಯಾ,
ಹೊಲಬುಗೆಟ್ಟೆನಯ್ಯಾ, ಕೂಡಲಸಂಗಮದೇವಾ.

೪೫

ಶಬ್ದಸುಖಕ್ಕೆ ಮಚ್ಚಿ, ಮಾತಿಂಗೆ ಮಾತನು ಕೊಟ್ಟು ಕೆಟ್ಟೆನಯ್ಯಾ !
ಅನುಭಾವ ಅಕ್ಕವೆಯಾಗದೆ ಬೆಬ್ಬನೆ ಬೆಱತೆನಯ್ಯಾ !
ಅಮೃತದ ಕೊಡನ ತುಂಬಿ ಒಡೆಯೆ ಹೊಯ್ದು ಅಱಿಸಲುಂಟೆ ?
ಸ್ವಾಮಿ-ಭೃತ್ಯಸಂಬಂಧವೆ ಎನ್ನ ಭಕ್ತಿ, ಪ್ರತ್ಯುತ್ತರ ನಾಯಕನರಕ,
ಕೂಡಲಸಂಗಮದೇವಾ.

೪೬

ಭಕ್ತನೆನಿಸುವೆನಯ್ಯಾ ಮೆಲ್ಲಮೆಲ್ಲನೆ,
ಯುಕ್ತನೆನಿಸುವೆನಯ್ಯಾ ಮೆಲ್ಲಮೆಲ್ಲನೆ,
ಸಾರಿ ಶರಣನೆನಿಸುವೆನಯ್ಯಾ ಮೆಲ್ಲಮೆಲ್ಲನೆ !
ಎಡಹು-ಗುಳಿಗಳ ದಾಂಟಿ ಬರಬರ ಲಿಂಗೈಕ್ಯನೆನಿಸುವೆನಯ್ಯಾ;
ಕೂಡಲಸಂಗಮದೇವಾ, ನಿಮ್ಮಿಂದಧಿಕನೆನಿಸುವೆನಯ್ಯಾ.

೪೭

ಎನ್ನ ಶಿರ ನಿಮ್ಮ ಚರಣವನೊರಸೊರಸೆ ಭೇದವಿಲ್ಲಯ್ಯಾ !
ಎನ್ನ ಕಾಯದ ಕಪಟ, ಎನ್ನ ಮನದ ವಿಕಾರ,
ನಿಮ್ಮ ಅಂಗುಷ್ಟದ ಕೊನೆಯ ಸೋಂಕಲೊಡನೆ
ಹಱಿದುಹೋಹುದು ನೋಡಯ್ಯಾ !
ಕೂಡಲಸಂಗಮದೇವಯ್ಯಾ,
ನಿಮ್ಮ ಶ್ರೀಪಾದದ ಬೆಳಗ ಕಂಡು ಎನ್ನಂಗದ ಕತ್ತಲೆ ತೊಡೆದಿತ್ತು !

೪೮

ಸೂರ್ಯನುದಯ ತಾವರೆಗೆ ಜೀವಾಳ,
ಚಂದ್ರಮನುದಯ ನೈದಿಲೆಗೆ ಜೀವಾಳ,
ಕೂಪರ ತಾವಿನಲ್ಲಿ ಕೂಟ ಜೀವಾಳ,
ಒಲಿದ ತಾವಿನಲ್ಲಿ ನೋಟ ಜೀವಾಳವಯ್ಯಾ,
ಕೂಡಲಸಂಗನ ಶರಣರ ಬರವೆನಗೆ
ಪ್ರಾಣಜೀವಾಳವಯ್ಯಾ.

೪೯

ಎನ್ನ ಕಾಯದ ಕತ್ತಲೆ ಹಿಂಗಿತ್ತು, ಚೆನ್ನಬಸವಣ್ಣಾ.
ಇಂದಿನಲ್ಲಿ ಎನ್ನ ತನುಮನಧನದ ಲೋಭವಳಿದು ತಳವೆಳಗಾಯಿತ್ತು;
ಇಂದಿನಲ್ಲಿ ಎನ್ನನೆಡೆಗೊಂಡ ಅಹಂಕಾರ ನಿರ್ವಯಲಾಯಿತ್ತು, ಚೆನ್ನಬಸವಣ್ಣಾ.
ಇಂದಿನಲ್ಲಿ ಕೂಡಲಸಂಗಮದೇವರ
ತೃಪ್ತಿಯ ತೆಱನ ನೀನು ತೋಱಿದೆಯಾಗಿ,
ನಾನು ಬದುಕಿದೆನು, ಕಾಣಾ, ಚೆನ್ನಬಸವಣ್ಣಾ.

೨

ಸದ್ಭಕ್ತಿ

೫೦

ನಾದಪ್ರಿಯ ಶಿವನೆಂಬರು, ನಾದಪ್ರಿಯ ಶಿವನಲ್ಲಯ್ಯಾ;
ವೇದಪ್ರಿಯ ಶಿವನೆಂಬರು, ವೇದಪ್ರಿಯ ಶಿವನಲ್ಲಯ್ಯಾ;
ನಾದವ ಮಾಡಿದ ರಾವಳಂಗೆ ಅರೆಯಾಯುಷ್ಯವಾಯಿತ್ತು;
ವೇದವನೋದಿದ ಬ್ರಹ್ಮನ ಶಿರ ಹೋಯಿತ್ತು !
ನಾದಪ್ರಿಯನೂ ಅಲ್ಲ, ವೇದಪ್ರಿಯನೂ ಅಲ್ಲ,
ಭಕ್ತಿಪ್ರಿಯ ನಮ್ಮ ಕೂಡಲಸಂಗಮದೇವ.

೫೧

ಬ್ರಹ್ಮಪದವಿಯನೊಲ್ಲೆ, ವಿಷ್ಣುಪದವಿಯನೊಲ್ಲೆ, ರುದ್ರಪದವಿಯನೊಲ್ಲೆ,
ಮತ್ತಾವ ಪದವಿಯನೊಲ್ಲೆನಯ್ಯಾ, ಕೂಡಲಸಂಗಮದೇವಾ,
ನಿಮ್ಮ ಸದ್ಭಕ್ತರ ಪಾದವನಱಿದಿಪ್ಪ ಮಹಾಪದವಿಯನೆ ಕರುಣಿಸಯ್ಯಾ.

೫೨

ಭಕ್ತಿಯೆಂಬ ನಿಧಾನವ ಸಾಧಿಸುವರೆ
ಶಿವಪ್ರೇಮವೆಂಬಂಜನವ ನೆಚ್ಚಿಕೊಂಬುದು.
ಭಕ್ತನಾದವಂಗೆ ಇದೇ ಪಥವಾಗಿರಬೇಕು.
ನಮ್ಮ ಕೂಡಲಸಂಗನ ಶರಣರನುಭಾವ ಗಜವೈದ್ಯವಯ್ಯಾ.

೫೩

ಒಲವಿಲ್ಲದ ಪೂಜೆ ! ನೇಹವಿಲ್ಲದ ಮಾಟ !!
ಆ ಪೂಜೆಯು, ಆ ಮಾಟವು
ಚಿತ್ರದ ರೂಹು ಕಾಣಿರಣ್ಣಾ ! ಚಿತ್ರದ ಕಬ್ಬು ಕಾಣಿರಣ್ಣಾ !!
ಅಪ್ಪಿದರೆ ಸುಖವಿಲ್ಲ ! ಮೆಲಿದರೆ ರುಚಿಯಿಲ್ಲ !!
ಕೂಡಲಸಂಗಮದೇವಾ, ನಿಜವಿಲ್ಲದವನ ಭಕ್ತಿ !!

೫೪

ನಚ್ಚಿದೆನೆಂದರೆ, ಮಚ್ಚಿದೆನೆಂದರೆ,
ಸಲೆ ಮಾಱುವೋದೆನೆಂದರೆ,
ತನುವನಲ್ಲಾಡಿಸಿ ನೋಡುವೆ ನೀನು,
ಮನವನಲ್ಲಾಡಿಸಿ ನೋಡುವೆ ನೀನು,
ಧನವನಲ್ಲಾಡಿಸಿ ನೋಡುವೆ ನೀನು !
ಇದಕ್ಕೆಲ್ಲ ಅಂಜದಿದ್ದರೆ, ಭಕ್ತಿಕಂಪಿತ ನಮ್ಮ ಕೂಡಲಸಂಗಮದೇವ.

೫೫

ನರವಿಂಧ್ಯದೊಳಗೆನ್ನ ಹುಲುಗಿಳಿಯ ಮಾಡಿ ಸಲಹುತ್ತ
'ಶಿವ ಶಿವಾ' ಎಂದೋದಿಸಯ್ಯಾ :
ಭಕ್ತಿಯೆಂಬ ಪಂಜರದೊಳಗಿಕ್ಕಿ ಸಲಹು,
ಕೂಡಲಸಂಗಮದೇವಾ.

೫೬

ಅರಸರ ಮನೆಯಲ್ಲಿ ಅರಸಿಯಾಗಿಪ್ಪುದರಿಂದ
ಭಕ್ತರ ಮನೆಯಲ್ಲಿ ತೊತ್ತಾಗಿಪ್ಪುದು ಕರ ಲೇಸಯ್ಯಾ :
'ತಾರೋ ಅಗ್ಘವಣಿಯ, ನೀಡೋ ಪತ್ರೆಯ,
ಲಿಂಗಕ್ಕೆ ಬೋನವ ಹಿಡಿಯೋ' ಎಂಬರು.
ಕೂಡಲಸಂಗನ ಮಹಾಮನೆಯಲ್ಲಿ
'ಒಕ್ಕುದನುಣ್ಣೋ, ತೊತ್ತೇ' ಎಂಬರು

೫೭

ಎನ್ನ ಕಾಯವ ದಂಡಿಗೆಯ ಮಾಡಯ್ಯಾ;
ಎನ್ನ ಶಿರವ ಸೋರೆಯ ಮಾಡಯ್ಯಾ;
ಎನ್ನ ನರವ ತಂತಿಯ ಮಾಡಯ್ಯಾ;
ಎನ್ನ ಬೆರಳ ಕಡ್ಡಿಯ ಮಾಡಯ್ಯಾ;
ಬತ್ತೀಸ ರಾಗವ ಮಾಡಯ್ಯಾ! ಉರದಲೊತ್ತಿ ಬಾರಿಸು,
ಕೂಡಲಸಂಗಮದೇವಾ.

ಉಳ್ಳವರು ಶಿವಾಲಯವ ಮಾಡಿದರು :
ನಾನೇನ ಮಾಡಲಯ್ಯಾ, ಬಡವನು!
ಎನ್ನ ಕಾಲೇ ಕಂಭ, ದೇಹವೇ ದೇಗುಲ,
ಶಿರವೇ ಹೊನ್ನ ಕಲಶವಯ್ಯಾ!
ಕೂಡಲಸಂಗಮದೇವ ಕೇಳಯ್ಯಾ,
ಸ್ಥಾವರಕ್ಕಳಿವುಂಟು, ಜಂಗಮಕ್ಕಿಲ್ಲ.

೫೯

ಮಾಡುವ ಭಕ್ತನ ಕಾಯ ಬಾಳೆಯ ಕಂಭದಂತಿರಬೇಕು.
ಮೆಲ್ಲಮೆಲ್ಲನೆ ಹೊರೆಯೆತ್ತಿ ನೋಡಿದರೆ, ಒಳಗೆ ಕೆಚ್ಚಿಲ್ಲದಿರಬೇಕು.
ಮೇಲಾದ ಫಲವ ನಮ್ಮವರು ಬೀಜಸಹಿತ ನುಂಗಿದರು :
ಎನಗಿನ್ನಾವ ಭವವಿಲ್ಲ, ಕಾಣಾ, ಕೂಡಲಸಂಗಮದೇವಾ.

೬೦

ಭಕ್ತಿ ಎಂತಹುದಯ್ಯಾ? ದಾಸಯ್ಯ ಮಾಡಿದಂತಹುದಯ್ಯಾ.
ಭಕ್ತಿ ಎಂತಹುದಯ್ಯಾ? ಸಿರಿಯಾಳ ಮಾಡಿದಂತಹುದಯ್ಯಾ.
ಭಕ್ತಿ ಎಂತಹುದಯ್ಯಾ? ನಮ್ಮ ಸಿಂಧುಬಲ್ಲಾಳ ಮಾಡಿದಂತಹುದಯ್ಯಾ.
ಭಕ್ತಿ ಎಂತಹುದಯ್ಯಾ, ಕೂಡಲಸಂಗಮದೇವಾ?
ನೀ ಬಾಣನ ಬಾಗಿಲ ಕಾಯ್ದಂತಹುದಯ್ಯಾ.

೬೧

ಭಕ್ತಿಯಿಲ್ಲದ ಬಡವನು ನಾನಯ್ಯಾ :
ಕಕ್ಕಯ್ಯನ ಮನೆಯಲು ಬೇಡಿದೆ,
ಚೆನ್ನಯ್ಯನ ಮನೆಯಲು ಬೇಡಿದೆ,
ದಾಸಯ್ಯನ ಮನೆಯಲೂ ಬೇಡಿದೆ.
ಎಲ್ಲಾ ಪುರಾತರು ನೆರೆದು ಭಕ್ತಿಭಿಕ್ಷವನಿಕ್ಕಿದರೆ
ಎನ್ನ ಪಾತ್ರೆ ತುಂಬಿತ್ತು, ಕೂಡಲಸಂಗಮದೇವಾ.

೬೨

ಲೋಕೋಪಚಾರಕ್ಕೆ ಮಜ್ಜನಕ್ಕೆಱೆವೆನಯ್ಯಾ :
ಮನದ ತಾಮಸ ಬಿಡದು, ಮನದ ಕಪಟ ಬಿಡದಯ್ಯಾ;
ಶಿವ ಶರಣೆಂಬುದು ಒಪ್ಪಚಿಯಳವಡದಯ್ಯಾ!
ಎನ್ನ ಮನದಲ್ಲಿ ಎರಡುಳ್ಳನ್ನಕ್ಕ
ಕೂಡಲಸಂಗಮದೇವರೆಂತೊಲಿವ?

೬೩

ಮಾತಿನ ಮಾತಿನಲ್ಲಿಪ್ಪುದೇ ಭಕ್ತಿ ?
ಮಾಡಿ ತನು ಸವೆಯದನ್ನಕ್ಕ, ಮನ ಸವೆಯದನ್ನಕ್ಕ,
ಧನ ಸವೆಯದನ್ನಕ್ಕ ಅಪ್ಪುದೇ ಭಕ್ತಿ ?
ಕೂಡಲಸಂಗಮದೇವನೆಲುದೋಱಿ ಸರಸವಾಡುವನು :
ಸ್ಥೈರಿಸದನ್ನಕ್ಕ ಅಪ್ಪುದೇ ಭಕ್ತಿ ?

೬೪

ಹಸಿದು ಎಕ್ಕೆಯ ಕಾಯ ಮೆಲಬಹುದೇ ?
ನೀರಡಿಸಿ ವಿಷವನೀಂಟಬಹುದೇ ?
ಸುಣ್ಣದ ತುಯ್ಯಲ ಬಣ್ಣ ಒಂದೆ ಎಂದರೆ ನಂಟುತನಕ್ಕೆ ಉಣ್ಣಬಹುದೆ ?
ಲಿಂಗಸಾರಾಯ ಸಜ್ಜನರಲ್ಲದವರ ಕೂಡಲಸಂಗಮದೇವರೆಂತೊಲಿವನು ?

೬೫

ಭಕ್ತಿಹೀನನ ದಾಸೋಹವ ಸದ್ಭಕ್ತರು ಸವಿಯರು;
ಬೇವಿನ ಹಣ್ಣು ಕಾಗೆಗೆ ಇನಿದಲ್ಲದೆ ಕೋಗಿಲೆಗೆ ಮೆಲಬಾರದು;
ಲಿಂಗಸಂಬಂಧವಿಲ್ಲದವರ ನುಡಿ ಕೂಡಲಸಂಗನ ಶರಣರಿಗೆ ಸಮನಿಸದು.

೬೬

ಅರಸಿನವನೆ ಮಿಂದು, ಹೊಂದೊಡಿಗೆಯನೆ ತೊಟ್ಟು,
ಪುರುಷನ ಒಲವಿಲ್ಲದ ಲಲನೆಯಂತಾಗಿರ್ದೆನಯ್ಯಾ !
ವಿಭೂತಿಯನೆ ಹೂಸಿ, ರುದ್ರಾಕ್ಷಿಯನೆ ಕಟ್ಟಿ,
ಶಿವ, ನಿಮ್ಮೊಲವಿಲ್ಲದಂತೆ ಆಗಿರ್ದೆನಯ್ಯಾ !
ಕೆಟ್ಟು ಬಾಳುವರಿಲ್ಲಾ ಎಮ್ಮವರ ಕುಲದಲ್ಲಿ :
ನೀನೊಲಿದಂತೆ ಸಲಹಯ್ಯಾ, ಕೂಡಲಸಂಗಮದೇವಾ.

೬೭

ಗೀತವ ಹಾಡಿದೊಡೇನು?
ಶಾಸ್ತ್ರಪುರಾಣವ ಕೇಳಿದೊಡೇನು ?
ವೇದವೇದಾಂತವನೋದಿದೊಡೇನು ?
ಮನವೊಲಿದು ಲಿಂಗಜಂಗಮವ ಪೂಜಿಸಲಱಿಯದವರು
ಎಲ್ಲಱಲಿ. ಅನುಭಾವಿಯಾದೊಡೇನು ?
ಭಕ್ತಿಯಿಲ್ಲದವರನೊಲ್ಲ ಕೂಡಲಸಂಗಮದೇವ.

೬೮

ಸಮಚಿತ್ತವೆಂಬ ನೇಮದ ಹಲಗೆಯ ಹಿಡಿದು,
ಶಿವಚಿತ್ತವೆಂಬ ಕೂರಲಗ ಕೊಂಡು,
ಶರಣಾರ್ಥಿಯೆಂಬ ಶ್ರವವ ಕಲಿತರೆ
ಆಳುತನಕ್ಕೆ ದೇಸಿಯಪ್ಪೆ, ನೋಡಾ.
ಮಾಱಂಕ ಜಂಗಮ ಮನೆಗೆ ಬಂದಲ್ಲಿ ಇದಿರೆದ್ದು ನಡೆವುದು :
ಕೂಡಲಸಂಗಮದೇವನನೊಲಿಸುವೊಡಿದು ಚಿಹ್ನ.

೬೯

ಹಮ್ಮಿನ ಭಕ್ತಿ ಕರ್ಮಕ್ಕೆ ಮೊದಲು :
ವರ್ಮವನಱಿಯದ ಮಾಟ ಸಯಿದಾನದ ಕೇಡು !
ಬಂದ ಸಮಯೋಚಿತವನಱಿಯದಿದ್ದರೆ
ನಿಂದಿರಲೊಲ್ಲ ಕೂಡಲಸಂಗಮದೇವ.

೭೦

ಮನದೊಡೆಯ ಮನೆಗೆ ಬಂದರೆ
ಕನಕದ ತೋರಣವ ಕಟ್ಟಿ,
ಷಡುಸಮ್ಮಾರ್ಜನೆಯ ಮಾಡಿ,
ರಂಗವಾಲಿಯನಿಕ್ಕಿ 'ಉಘೇ ಚಾಂಗು ಭಲಾ' ಎಂಬೆನು.
ಕೂಡಲಸಂಗಮದೇವಾ,
ನಿಮ್ಮ ಶರಣ ಪ್ರಭುದೇವರು ಬಂದರೆ
ಉಬ್ಬಿ ಕೊಬ್ಬಿ ನಲಿದಾಡುವೆ!

೭೧

ಹರಿವ ನದಿಯ ತೆಱನ ಹೋಲಬಲ್ಲರೆ ಭಕ್ತಿ;
ಕೂಡಿ ಸಯಿದಾನವ ನೀಡಬಲ್ಲರೆ ಭಕ್ತಿ.
ನೀಡಿ ಮಿಕ್ಕುದ ಕಾಯ್ದುಕೊಂಡಿರಬಲ್ಲರೆ
ಕೂಡಿಕೊಂಡಿಪ್ಪ ನಮ್ಮ ಕೂಡಲಸಂಗಮದೇವ.

೭೨

ಸಿಂಗದ ನಡು ಮುಱಿಯಲಾ ಸಿಂಗವೇನು ಬಾತೆ?
ಸುಂಡಿಲು ಮುಱಿದರೆ ಗಜವೇನು ಬಾತೆ?
ಸಂಗ್ರಾಮದಲ್ಲಿ ವೀರನುಳಿಯಲದೇನು ಬಾತೆ?
ಶೃಂಗಾರದ ಮೂಗು ಹೋದರೆ ಶೃಂಗಾರವೇನು ಬಾತೆ?
ನಿಜ ತುಂಬಿದ ಭಕ್ತಿ ತುಳುಕಾಡದವರ ಸಂಗವೇನು ಬಾತೇ,
ಕೂಡಲಸಂಗಮದೇವಾ?

೭೩

ಉದಯದ ಮಾಗಿಯ ಬಿಸಿಲು ಅಂಗಕ್ಕೆ ಹಿತವಾಯಿತ್ತು;
ಮಧ್ಯಾಹ್ನದ ಬಿಸಿಲು ಅಂಗಕ್ಕೆ ಕರಕಠಿಣವಾಯಿತ್ತು :
ಮೊದಲಲ್ಲಿ ಲಿಂಗಭಕ್ತಿ ಹಿತವಾಯಿತ್ತು;
ಕಡೆಯಲ್ಲಿ ಜಂಗಮಭಕ್ತಿ ಕಠಿಣವಾಯಿತ್ತು.
ಇದುಕಾರಣ, ಕೂಡಲಸಂಗಮದೇವನವರ ಬಲ್ಲನಾಗಿ ಒಲ್ಲನಯ್ಯಾ.

೭೪

ಭಕ್ತಿಯೆಂಬುದ ಮಾಡಬಾರದು :
ಕರಗಸದಂತೆ ಹೋಗುತ್ತ ಕೊಯ್ವುದು, ಬರುತ್ತ ಕೊಯ್ವುದು !
ಘನಸರ್ಪನಲ್ಲಿ ಕೈದುಡುಕಿದರೆ ಹಿಡಿವುದು ಮಾಂಬುದೇ,
ಕೂಡಲಸಂಗಮದೇವಾ ?

೭೫

ಭಕ್ತಿರತಿಯ ವಿಕಳತೆಯ ಯುಕ್ತಿಯನೇನ ಬೆಸಗೊಂಬಿರಯ್ಯಾ ?
ಕಾಮಿಗುಂಟೆ, ನಾಚಿಕೆಲಜ್ಜೆ ? ಕಾಮಿಗುಂಟೆ, ಮಾನಾಪಮಾನ ?
ಕೂಡಲಸಂಗನ ಶರಣರಿಗೊಲಿದ ಮರುಳನನೇನ ಬೆಸಗೊಂಬಿರಯ್ಯಾ?

೭೬

ಭಕ್ತನ ಮುಖದರ್ಪಣದಲ್ಲಿ ಲಿಂಗವ ಕಾಣಬಹುದು :
ಭಕ್ತದೇಹಿಕ ದೇವ ಅನಿಮಿಷನಾಗಿ.
ಕೂಡಲಸಂಗಮದೇವ ಭಕ್ತನ ನುಡಿಯ ನಡುವೆ ರಾಶಿಯಾಗಿರ್ಪನು.

೭೭

ಮನ ಮನ ಬೆರಸಿದಲ್ಲಿ ತನು ಕರಗದಿದ್ದರೆ,
ಸೋಂಕಿನಲ್ಲಿ ಪುಳಕಂಗಳು ಹೊಱಹೊಮ್ಮದಿದ್ದರೆ,
ಕಂಡಾಗಳಶ್ರುಜಲಂಗಳು ಸುರಿಯದಿದ್ದರೆ,
ನುಡಿವಲ್ಲಿ ಗದ್ಗದಂಗಳು ಹೊಱಹೊಮ್ಮದಿದ್ದರೆ,
—ಕೂಡಲಸಂಗಮದೇವರ ಭಕ್ತಿಗಿದು ಚಿಹ್ನ—
ಎನ್ನಲ್ಲಿವಿಲ್ಲವಾಗಿ ಆನು ಡಂಭಕ ಕಾಣಿರೇ !

೭೮

ಚಂದ್ರಕಾಂತದ ಶಿಲೆಯಲ್ಲಿ ಜಲವಿಲ್ಲದನ್ನಕ್ಕ
ಶೈತ್ಯವ ತೋಱುವ ಪರಿಯೆಂತೊ ?
ಸೂರ್ಯಕಾಂತದ ಶಿಲೆಯಲ್ಲಿ ಅಗ್ನಿಯಿಲ್ಲದನ್ನಕ್ಕ
ಉಷ್ಣವ ತೋಱುವ ಪರಿಯೆಂತೊ ?
ಶರಣಂಗೆ ಭಕ್ತಿಕಾಯವಿಲ್ಲದನ್ನಕ್ಕ
ಕೂಡಲಸಂಗಯ್ಯನನಱಿವ ಪರಿಯೆಂತೊ ?

೭೯

ಹಸಿವು ತೃಷೆ ನಿದ್ರೆ ವಿಷಯಂಗಳ ಮಱೆದೆ: ನೀವು ಕಾರಣ.
ಕಾಮಕ್ರೋಧ ಲೋಭಮೋಹ ಮದಮತ್ಸರಂಗಳ ಮಱೆದೆ : ನೀವು ಕಾರಣ.
ಪಂಚೇಂದ್ರಿಯ ಸಪ್ತಧಾತು ಅಷ್ಟಮದಂಗಳ ಮಱೆದೆ : ನೀವು ಕಾರಣ.
ಕೂಡಲಸಂಗಮದೇವಯ್ಯಾ,
ನಿಮ್ಮ ಶರಣರಿಗೆ ಆಪ್ಯಾಯನವಾದರೆ ಎನಗೆ ತೃಪ್ತಿಯಾಯಿತ್ತು !

೩

ನಿಷ್ಠೆ – ಶ್ರದ್ಧೆ

೮೦

ಮಾಡಿ ಮಾಡಿ ಕೆಟ್ಟರು ಮನವಿಲ್ಲದೆ,
ನೀಡಿ ನೀಡಿ ಕೆಟ್ಟರು ನಿಜವಿಲ್ಲದೆ!
ಮಾಡುವ ನೀಡುವ ನಿಜಗುಣವುಳ್ಳರೆ,
ಕೂಡಿಕೊಂಬ ನಮ್ಮ ಕೂಡಲಸಂಗಮದೇವ.

೮೧

ಹೊಸತಿಲ ಪೂಜಿಸಿ ಹೊಱವಟ್ಟು ಹೋದ
ಒಕ್ಕಲಿತಿಯಂತಾಯಿತ್ತೆನ್ನ ಭಕ್ತಿ!
ಜಂಗಮವೆನ್ನೊಡೆಯರೆಂದು ಒಕ್ಕುದ ಕೊಂಡು ಉದಾಸೀನವ ಮಾಡಿದರೆ,
ಇಹಲೋಕಕ್ಕೆ ದೂರ, ಪರಲೋಕಕ್ಕೆ ದೂರ!
ಕೂಡಲಸಂಗಮದೇವ ಅಘೋರ ನರಕದಲಿಕ್ಕುವ!

೮೨

ಮಾಡಿ, ನೀಡಿ ಲಿಂಗವ ಪೂಜಿಸಿಹೆವೆಂಬವರು ನೀವೆಲ್ಲ ಕೇಳಿರಣ್ಣಾ!
ಹಾಗದ ಕೆರಹ ಹೊಱಗೆ ಕಳೆದು
ದೇಗುಲಕ್ಕೆ ಹೋಗಿ ನಮಸ್ಕಾರ ಮಾಡುವನಂತೆ:
ತನ್ನ ಕೆರಹಿನ ಧ್ಯಾನವಲ್ಲದೆ, ದೇವರ ಧ್ಯಾನವಿಲ್ಲ!
ಧನವನಿರಿಸದಿರಾ: ಇರಿಸಿದರೆ ಭವ ಬಪ್ಪುದು ತಪ್ಪದು.
ಕೂಡಲಸಂಗನ ಶರಣರಿಗೆ ಸವಿಸಲೇ ಬೇಕು.

೬೩

ಭಕ್ತರ ಕಂಡರೆ ಬೋಳರಪ್ಪಿರಯ್ಯಾ;
ಶ್ರವಣರ ಕಂಡರೆ ಬತ್ತಲೆಯಪ್ಪಿರಯ್ಯಾ;
ಹಾರುವರ ಕಂಡರೆ ಹರಿನಾಮವೆಂಬಿರಯ್ಯಾ !
ಅವರವರ ಕಂಡರೆ ಅವರವರಂತೆ !
ಸೂಳೆಗೆ ಹುಟ್ಟಿದವರ ತೋಱದಿರಯ್ಯಾ !
ಕೂಡಲಸಂಗಮದೇವರ ಪೂಜಿಸಿ ಅನ್ಯದೈವಂಗಳಿಗೆಱಗಿ
ಭಕ್ತರೆನಿಸಿಕೊಂಬ ಅಜ್ಞಾನಿಗಳ ನಾನೇನೆಂಬೆನಯ್ಯಾ ?

೬೪

ಎನಿಸುಕಾಲ ಕಲ್ಲು ನೀರೊಳಗಿದ್ದರೇನು,
ನೆನೆದು ಮೃದುವಾಗಬಲ್ಲುದೆ ?
ಎನಿಸುಕಾಲ ನಿಮ್ಮ ಪೂಜಿಸಿ ಏವೆನಯ್ಯಾ,
ಮನದಲ್ಲಿ ದೃಢವಿಲ್ಲದನ್ನಕ್ಕ ?
ನಿಧಾನವ ಕಾಯ್ದಿರ್ದ ಬೆಂತರನಂತೆ :
ಅದಱ ವಿಧಿಯೆನಗಾಯಿತ್ತು, ಕೂಡಲಸಂಗಮದೇವಾ.

೬೫

ನಿಷ್ಠೆಯಿಂದ ಲಿಂಗವ ಪೂಜಿಸಿ,
ಮತ್ತೊಂದು ಪಥವನಱಿಯದ ಶರಣರು
ಸರ್ಪನ ಹೆಡೆಯ ಮಾಣಿಕದಂತಿಪ್ಪರು, ಭೂಷಣರಾಗಿ :
ದರ್ಪಣದೊಳಗಣ ಪ್ರತಿಬಿಂಬದಂತೆ ಹಿಂಗದಿಪ್ಪರು,
ಕೂಡಲಸಂಗಮದೇವಾ, ನಿಮ್ಮ ಶರಣರು.

೮೬

ಸುರರ ಬೇಡಿದಡಿಲ್ಲ, ನರರ ಬೇಡಿದಡಿಲ್ಲ,
ಬಱಿದೆ ಧೃತಿಗೆಬೇಡ, ಮನವೇ:
ಆರನಾದಡೆಯೂ ಬೇಡಿ ಬೇಡಿ ಬಱಿದೆ ಧೃತಿಗೆಡಬೇಡ, ಮನವೇ.
ಕೂಡಲಸಂಗಮದೇವನನಲ್ಲದೆ, ಆರ ಬೇಡಿದಡಿಲ್ಲ, ಮನವೇ.

೮೭

ಮೊನೆ ತಪ್ಪಿದ ಬಳಿಕ ಅಲಗೇನ ಮಾಡುವುದು?
ವಿಷ ತಪ್ಪಿದ ಬಳಿಕ ಹಾವೇನ ಮಾಡುವುದು?
ಭಾಷೆ ತಪ್ಪಿದ ಬಳಿಕ ದೇವ ಬಲ್ಲಿದ! ಭಕ್ತನೇನ ಮಾಡುವನಯ್ಯಾ?
ಭಾಷೆ ತಪ್ಪಿದ ಬಳಿಕ ಪ್ರಾಣದಾಸೆಯನು ಹಾರಿದರೆ
ಮೊಸಲ ಸೊಣಗ ಮುಟ್ಟಿದಂತೆ, ಕೂಡಲಸಂಗಮದೇವಾ.

೮೮

ಧರಣಿಯ ಮೇಲೊಂದು ಹಿರಿದಪ್ಪ ಅಂಗಡಿಯನಿಕ್ಕಿ
ಹರದ ಕುಳ್ಳಿರ್ದ ನಮ್ಮ ಮಹಾದೇವಸೆಟ್ಟಿ.
ಒಮ್ಮನವಾದರೆ ಒಡನೆ ನುಡಿವನು,
ಇಮ್ಮನವಾದರೆ ನುಡಿಯನು;
ಕಾಣಿಯ ಸೋಲ, ಅರ್ದ್ಧಗಾಣಿಯ ಗೆಲ್ಲ!
ಜಾಣ, ನೋಡವ್ವಾ, ನಮ್ಮ ಕೂಡಲಸಂಗಮದೇವ!

೮೯

ತನುಮುಟ್ಟಿ ಮನಮುಟ್ಟದೆ ದೂರವಾದರಯ್ಯಾ, ಜಲವೆಣ್ಣೆನಂತೆ!
ಸೂಳೆ ತನುಮುಟ್ಟಿ ಅಪ್ಪುವಳಲ್ಲದೆ ಮನಮುಟ್ಟಿ ಅಪ್ಪಳಾಗಿ.
ಆಚಾರವಱಿಯದ ಅರೆಮರುಳುಗಳು ಸುಖವನೆತ್ತ ಬಲ್ಲರು,
ಕೂಡಲಸಂಗಮದೇವಾ?

೯೦

ಕುಂಬಳಕಾಯಿಗೆ ಕಬ್ಬುನದ ಕಟ್ಟ ಕೊಟ್ಟರೆ
ಕೊಳೆವುದಲ್ಲದೆ ಬಲುಹಾಗಬಲ್ಲುದೆ?
ಅಳಿಮನದವಂಗೆ ಶಿವದೀಕ್ಷೆಯ ಕೊಟ್ಟರೆ
ಭಕ್ತಿ ಎಂತಹುದೋ?—ಮುನ್ನಿನಂತೆ!
ಕೂಡಲಸಂಗಯ್ಯಾ, ಮನಹೀನನ ಮೊಸಲ ಕಾಯ್ದಿರಿಸಿದಂತೆ!

೯೧

ಕಬ್ಬುನ ಪರುಷವೇಧಿಯಾದರೇನು,
ಕಬ್ಬುನ ಹೊನ್ನಾಗದೊಡಾ ಪರುಷವದೇಕೋ?
ಮನೆಯೊಳಗೆ ಕತ್ತಲೆ ಹಱಿಯದೊಡಾ ಜ್ಯೋತಿಯದೇಕೋ?
ಕೂಡಲಸಂಗಮದೇವರ ಮನಮುಟ್ಟಿ ಪೂಜಿಸಿ
ಕರ್ಮ ಹಱಿಯದೊಡಾ ಪೂಜೆಯದೇಕೋ?

೯೨

ಕಬ್ಬುನದ ಕೋಡಗವ ಪರುಷ ಮುಟ್ಟಲು,
ಹೊನ್ನಾದರೇನು, ಮತ್ತೇನಾದರೇನು,
ತನ್ನ ಮುನ್ನಿನ ರೂಹ ಬಿಡದನ್ನಕ್ಕ?
ಕೂಡಲಸಂಗಮದೇವಾ,
ನಿಮ್ಮ ನಂಬಿಯೂ ನಂಬದ ಡಂಭಕರಿಗಯ್ಯಾ?

೯೩

ಎಮ್ಮವರು ಬೆಸಗೊಂಡರೆ ಶುಭಲಗ್ನವೆನ್ನಿರಯ್ಯಾ,
ರಾಶಿಕೂಟ ಋಣಸಂಬಂಧವುಂಟೆಂದು ಹೇಳಿರಯ್ಯಾ,
ಚಂದ್ರಬಲ ತಾರಾಬಲ ಉಂಟೆಂದು ಹೇಳಿರಯ್ಯಾ,
ನಾಳಿನ ದಿನಕಿಂದಿನ ದಿನ ಲೇಸೆಂದು ಹೇಳಿರಯ್ಯಾ :
ಕೂಡಲಸಂಗಮದೇವನ ಪೂಜಿಸಿದ ಫಲ ನಿಮ್ಮದಯ್ಯಾ !

೯೪

ಅಷ್ಟಮಿ ನವಮಿ ಎಂಬ ಕಲ್ಪಿತವೇಕೋ ಶರಣಂಗೆ ?
ತಪ್ಪಿತ್ತು ಗಣಪದವಿ ! ಲಿಂಗಕ್ಕೆ ದೂರ, ಜಂಗಮಕ್ಕೆ ದೂರ !
ಒಬ್ಬರಿಗಾಳಾಗಿ ಒಬ್ಬರನೋಲೈಸುವ ನಿರ್ಬುದ್ಧಿಮನುಜರನೇನೆಂಬೆ,
ಕೂಡಲಸಂಗಮದೇವಾ ?

೯೫

ಭವಿಯ ಸಂಗವನೊಲ್ಲೆನೊಲ್ಲೆ :
ಆ ಸಂಗ ಮುಂದೆ ಅನಂತಭವಂಗಳಲ್ಲಿ ಬರಿಸುವುದಾಗಿ.
ಅನ್ಯದೈವ ಭಜನೆಯನೊಲ್ಲೆನೊಲ್ಲೆ :
ಆ ಭಜನೆ ಮುಂದೆ ಅನಂತ ಘೋರನರಕವನುಣಿಸುವುದಾಗಿ.
ಉಭಯಜಡತೆಯ ಹೊದ್ದದೆ ಹಿಂಗಿ ನಿಂದ, ಕೂಡಲಸಂಗಮದೇವ.

೯೬

ಅರ್ಥ–ಪ್ರಾಣ–ಅಭಿಮಾನದಲ್ಲಿ ವಂಚನೆಯಿಲ್ಲದಿಹುದೇ ಭಕ್ತಿ ;
ಹೆಚ್ಚುಕುಂದಿಲ್ಲದಿಹುದೇ ಸಮಯಾಚಾರ.
ತನುವಂಚನೆ ಮನವಿಕಾರ ಬಿಡದು ನಾನಿನ್ನೇವೆನಯ್ಯಾ ?
ತನುವನಲ್ಲಾಡಿ ನೋಡುವಲ್ಲಿ, ಮನವನಲ್ಲಾಡಿ ನೋಡುವಲ್ಲಿ,
ಧನವನಲ್ಲಾಡಿ ನೋಡುವಲ್ಲಿ ದೃಢವಿಲ್ಲದಿದ್ದರೆ,
ಒಡೆಯನ ಕಂಡು ನಾಯಿ ಬಾಲವ ಬಡಿದುಕೊಂಬಂತೆ.
ಅದಕೇನು ವೆಚ್ಚ ಹತ್ತಿದುದುಂಟೆ, ಕೂಡಲಸಂಗಮದೇವಾ ?

೯೭

ಅರೆಭಕ್ತರಾದವರ ನೆರೆ ಬೇಡ, ಹೊರೆ ಬೇಡ,
ದಾರಿ ಸಂಗಡ ಬೇಡ, ದೂರ ನುಡಿಯಲು ಬೇಡ;
ಕೂಡಲಸಂಗನ ಶರಣರಲ್ಲಿ ಅಚ್ಚ ಲಿಂಗೈಕ್ಯಂಗೆ
ತೊತ್ತಾಗಿಹುದಯ್ಯಾ.

೯೮

ಬರಬರ ಭಕ್ತಿಯರೆಯಾಯಿತ್ತು, ಕಾಣಿರಣ್ಣಾ :
ಮೊದಲ ದಿನ ಹಣೆಮುಟ್ಟೆ, ಮಱುದಿನ ಕೈಯ ಮುಟ್ಟೆ,
ಮೂಱೆಂಬ ದಿನಕ್ಕೆ ತೂಕಡಿಕೆ ಕಾಣಿರಣ್ಣಾ !
ಹಿಡಿಮುದ ಬಿಡದಿದ್ದರೆ ಕಡೆಗೆ ಚಾಚುವ,
ಅಲ್ಲದಿದ್ದರೆ ನಡುನೀರಲ್ಲದ್ದುವ, ನಮ್ಮ ಕೂಡಲಸಂಗಮದೇವ.

ಗುರುವಿನಲ್ಲಿ ಸದಾಚಾರ: ಲಿಂಗದಲ್ಲಿ ಅನುದಿನವೇಳೆ.
ಜಂಗಮದಲ್ಲನುಭಾವ, ಸಮಯಾಚಾರ : ಲಿಂಗದಲ್ಲಿ ಅನುದಿನವೇಳೆ.
ಈ ಉಭಯಾಚಾರದಿಂದ ತಿಳಿದ ತಿಳಿವು : ಲಿಂಗದಲ್ಲಿ ಅನುದಿನವೇಳೆ.
ಬೇಱೆ ತೋಱಲಿಲ್ಲಾ :
ಲಿಂಗಜಂಗಮದಲ್ಲಿ ಲೀಯವಾದಾಚಾರ ಸಮಯಾಚಾರ.
ಇದುಕಾರಣ, ಕೂಡಲಸಂಗಮದೇವಾ, ಲಿಂಗದಲ್ಲಿ ಅನುದಿನವೇಳೆ !

೧೦೦

ಅಚ್ಚ ಶರಣರು ನಿಮ್ಮ ನಿಚ್ಚ ನಿಚ್ಚ ನೆನೆವರು :
ಬಚ್ಚಬಱಿಯ ಮಾತನಾಡುವೆನು !
ಒಪ್ಪಚ್ಚಿ ಅರೆಭಕ್ತಿ ನೆನೆಯಲೀಯದು ನಿಮ್ಮ :
ಮೆಚ್ಚರು ನಿಮ್ಮ ಶರಣರು ಎನ್ನ, ಕೂಡಲಸಂಗಮದೇವಾ.

೧೦೧

ಅರೆವನಯ್ಯಾ ಸಣ್ಣವಹನ್ನಕ್ಕ, ಒರೆವನಯ್ಯಾ ಬಣ್ಣಗಾಣ್ಬನ್ನಕ್ಕ.
ಅರೆದರೆ ಸಣ್ಣವಾಗಿ, ಒರೆದರೆ ಬಣ್ಣವಾದರೆ
ಕೂಡಲಸಂಗಮದೇವನೊಲಿದು ಸಲಹುವನು.

೧೦೨

ಶಿವಭಕ್ತನಾಗಿ ತನ್ನ ಹಿಡಿದಹೆನೆಂದು ಹೋದರೆ,
ನುಗ್ಗು ಮಾಡುವ, ನುಸಿಯ ಮಾಡುವ,
ಮಣ್ಣು ಮಾಡುವ, ಮಸಿಯ ಮಾಡುವ;
ಕೂಡಲಸಂಗಮದೇವರ ನೆಱೆನಂಬಿದನಾದರೆ
ಕಡೆಗೆ ತನ್ನಂತೆ ಮಾಡುವ.

೧೦೩

ನಂಬರು, ನಚ್ಚರು, ಬಱಿದೆ ಕರೆವರು; ನಂಬಲಱಿಯರೀ ಲೋಕದ ಜನರು.
ನಂಬಿ ಕರೆದೊಡೆ 'ಓ' ಎನ್ನನೇ ಶಿವನು?
"ನಂಬದೆ ನಚ್ಚದೆ ಬಱಿದೆ ಕರೆವರ ಕೊಂಬ ಮೆಟ್ಟಿ ಕೂಗೆ"ಂದ,
ನಮ್ಮ ಕೂಡಲಸಂಗಮದೇವ.

೧೦೪

ವ್ಯಾಧನೊಂದು ಮೊಲನ ತಂದರೆ ಸಲುವ ಹಾಗಕ್ಕೆ ಬಿಲಿವರಯ್ಯಾ.
ನೆಲನಾಳ್ದನ ಹೆಣನೆಂದರೆ ಒಂದಡಕೆಗೆ ಕೊಂಬುವರಿಲ್ಲಾ, ನೋಡಯ್ಯಾ.
ಮೊಲನಿಂದ ಕಡುಕಷ್ಟ ನರನ ಬಾಳುವೆ!
ಸಲೆ ನಂಬೋ, ನಮ್ಮ ಕೂಡಲಸಂಗಮದೇವನ.

೧೦೫

ಮನವೇ, ನಿನ್ನ ಜನ್ಮದ ಪರಿಭವವ ಮಱಿದೆಯಲ್ಲಾ, ಮನವೇ!
ಲಿಂಗವ ನಂಬು, ಕಂಡಾ, ಮನವೇ; ಜಂಗಮವ ನಂಬು, ಕಂಡಾ, ಮನವೇ.
ಕೂಡಲಸಂಗಮದೇವರ ಬಿಡದೆ ಬೆಂಬತ್ತು, ಕಂಡಾ, ಮನವೇ.

೧೦೬

ನೆಱಿ ನಂಬೋ ನೆಱಿ ನಂಬೋ, ಧರಧುರವಿಲ್ಲದೆ ಸಾಮವೇದಿಗಳಂತೆ;
ನೆಱಿ ನಂಬೋ ನೆಱಿ ನಂಬೋ, ದಾಸ–ದುಗ್ಗಳೆಯಂತೆ;
ನೆಱಿ ನಂಬೋ ನೆಱಿ ನಂಬೋ, ಸಿರಿಯಾಳ–ಚಂಗಳೆಯಂತೆ;
ನೆಱಿ ನಂಬೋ ನೆಱಿ ನಂಬೋ, ಸಿಂಧುಬಲ್ಲಾಳನಂತೆ.
ನಂಬಿದೆಯಾದೊಡೆ ತನ್ನನೀವ ಕೂಡಲಸಂಗಮದೇವ.

೧೦೭

ನಂಬಿದರೆ ಪ್ರಸಾದ, ನಂಬದಿದ್ದರೆ ವಿಷವು.
ತುಡುಕಬಾರದು ನೋಡಾ, ಲಿಂಗನ ಪ್ರಸಾದ, ಸಂಗನ ಪ್ರಸಾದ,
ಕೂಡಲಸಂಗನ ಪ್ರಸಾದ : ಸಿಂಗಿ ಕಾಲಕೂಟ ವಿಷವು.

೧೦೮

ಕೋಣನ ಹೇಱಿಂಗೆ ಕುನ್ನಿ ಬಸುಗುತ್ತಬಡೆವಂತೆ
ತಾವು ನಂಬರು, ನಂಬುವವರ ನಂಬಲೀಯರು;
ತಾವು ಮಾಡರು, ಮಾಡುವವರ ಮಾಡಲೀಯರು!
ಮಾಡುವ ಭಕ್ತರ ಕಂಡು ಸೈರಿಸಲಾಱದವರ,
ಕೂಗಿಡೆ ಕೂಗಿಡೆ, ನರಕದಲ್ಲಿಕ್ಕುವ, ಕೂಡಲಸಂಗಮದೇವ!

೧೦೯

ಎಡದ ಪಾದದಲೊದ್ದರೆ ಬಲದ ಪಾದವ ಹಿಡಿವೆ;
ಬಲದ ಪಾದದಲೊದ್ದರೆ ಎಡದ ಪಾದವ ಹಿಡಿವೆ.
ತ್ರಾಹಿ, ತ್ರಾಹಿ : ತಪ್ಪೆನ್ನದು, ಕ್ಷಮೆ ನಿನ್ನದು!
ಕೂಡಲಸಂಗಮದೇವಾ, ನಿಮ್ಮ ಕರುಣದ ಕಂದ ನಾನು!

೧೧೦

ಒಣಗಿಸಿ ಎನ್ನ ಘುಣಘುಣಲನೆ ಮಾಡಿದರೆಯೂ
ಹರಣವುಳ್ಳನ್ನಕ್ಕ ನಿಮ್ಮ ಚರಣವ ನೆನೆವುದ ಮಾಣೆ, ಮಾಣೆ;
ಶರಣೆಂಬುದ ಮಾಣೆ, ಮಾಣೆ;
ಕೂಡಲಸಂಗಮದೇವಾ, ಎನ್ನ ಹೆಣನ ಮೇಲೆ
ಕಂಚಿಟ್ಟುಂಡರೆಯೂ ಮಾಣೆ, ಮಾಣೆ.

೧೧೧

ಮತ್ತೊಂದ ಕಾಣದಂತೆ, ಮತ್ತೊಂದ ಕೇಳದಂತೆ,
ನಿಮ್ಮ ಶರಣರ ಪಾದವಲ್ಲದೆ ಅನ್ಯವಿಷಯಕ್ಕೆಳಸದಂತೆ
ಇರಿಸಯ್ಯಾ, ಕೂಡಲಸಂಗಮದೇವಾ.

೧೧೨

ಧೃತಿಗೆಟ್ಟು ಅನ್ಯರ ಬೇಡದಂತೆ, ಮತಿಗೆಟ್ಟು ಪರರ ಹೊಗಳದಂತೆ,
ಪರಸತಿಯರ ರತಿಗೆ ಮನ ಹಾರದಂತೆ, ಶಿವಪಥವೊಲ್ಲದವರೊಡನಾಡದಂತೆ,
ಅನ್ಯಜಾತಿಯ ಸಂಗವ ಮಾಡದಂತೆ ಎನ್ನ ಪ್ರತಿಪಾದಿಸು,
ಕೂಡಲಸಂಗಮದೇವಾ.

೧೧೩

ಹಲವು ಕೊಂಬಿಗೆ ಹಾಯಬೇಡ :
ಬಱುಕಾಯಕ್ಕೆ ನೀಡಬೇಡ, ಲೋಗರಿಗೆಡೆಗೊಟ್ಟು ಭ್ರಮಿತನಾಗಿರಬೇಡ!
ಆಚಾರವೆಂಬುದು ಹಾವಸೆಗಲ್ಲು: ಭಾವ ತಪ್ಪಿದ ಬಳಿಕ ಏಗೆಯ್ದೊಡಾಗದು.
ಅಂಜದಿರು, ಅಳುಕದಿರು, ಪರದೈವಕ್ಕೆಱಗದಿರು :
ಕೂಡಲಸಂಗನ ಕೈಯಲು ಈಸುವುದೆನ್ನ ಭಾರ!

೧೧೪

ಶಿವಾಚಾರವೆಂಬುದೊಂದು ಬಾಳಬಾಯ ಧಾರೆ :
ಲಿಂಗ ಮೆಚ್ಚಬೇಕು, ಜಂಗಮ ಮೆಚ್ಚಬೇಕು,
ಪ್ರಸಾದ ಮೆಚ್ಚಿ ತನ್ನಲ್ಲಿ ಸ್ವಾಯತವಾಗಿರಬೇಕು!
ಬಿಚ್ಚಿ ಬೇಱಾದರೆ ಮೆಚ್ಚುವನೆ, ನಮ್ಮ ಕೂಡಲಸಂಗಮದೇವ?

೧೧೫

ಎಲವೋ, ಎಲವೋ, ಪಾಪಕರ್ಮವ ಮಾಡಿದವನೇ,
ಎಲವೋ, ಎಲವೋ, ಬ್ರಹ್ಮಹತ್ಯವ ಮಾಡಿದವನೇ,
ಒಮ್ಮೆ ಶರಣೆನ್ನೆಲವೋ!
ಒಮ್ಮೆ ಶರಣೆಂದರೆ ಪಾಪಕರ್ಮ ಓಡುವುವು.
ಸರ್ವ ಪ್ರಾಯಶ್ಚಿತ್ತಕ್ಕೆ ಹೊನ್ನ ಪರ್ವತಂಗಳೈದವು :
ಒರ್ವಂಗೆ ಶರಣೆನ್ನು, ನಮ್ಮ ಕೂಡಲಸಂಗಮದೇವಂಗೆ.

೧೧೬

ಒಡೆಯರುಳ್ಳ ಆಳಿಂಗೆ ಕೇಡಿಲ್ಲ, ಕಾಣಿ ಭೋ!
ಊರೆನ್ನದೆ ಅಡವಿಯೆನ್ನದೆ ಆಳನರಸಿ ಬಹ ಆಳಿದರುಂಟೇ ?
ಜೋಳವಾಳಿಂಗೆ ಬಿಜ್ಜಳಂಗೆ ಆಳಾದರೇನು ?
ವೇಳೆವಾಳಿಂಗೆ ಕೂಡಿಕೊಂಡಿಪ್ಪ ನಮ್ಮ ಕೂಡಲಸಂಗಮದೇವ.

೪

ನಿರಹಂಕಾರ–ವಿನಯ

೧೧೭

ಅಹಂಕಾರ ಮನವನಿಂಬುಗೊಂಡಲ್ಲಿ ಲಿಂಗ ತಾನೆಲ್ಲಿ ಬಪ್ಪುದೊ ?
ಅಹಂಕಾರಕ್ಕೆ ಎಡೆಗೊಡದೆ ಲಿಂಗತನುವಾಗಿರಬೇಕು.
ಅಹಂಕಾರರಹಿತವಾದಲ್ಲಿ ಸನ್ನಿಹಿತ, ಕಾಣಾ, ಕೂಡಲಸಂಗಮದೇವ.

೧೧೮

ಮೇಲಾಗಲೊಲ್ಲೆನು ಕೀಳಾಗಲಲ್ಲದೆ :
ಕೀಳಿಂಗಲ್ಲದೆ ಹಯನ ಕಱೆವುದೆ ?
ಮೇಲಾಗಿ ನರಕದೊಳೋಲಾಡಲಾಱೆನು :
ನಿಮ್ಮ ಶರಣರ ಪಾದಕ್ಕೆ ಕೀಳಾಗಿರಿಸು,
ಮಹಾದಾನಿ, ಕೂಡಲಸಂಗಮದೇವಾ.

೧೧೯

ಮಾವಿನ ಕಾಯೊಳಗೊಂದು ಎಕ್ಕೆಯ ಕಾಯಿ ನಾನಯ್ಯಾ.
ಆನು ಭಕ್ತನೆಂತೆಂಬೆ, ನಿಮ್ಮ ಶರಣರ ಮುಂದೆ ನಾಚಿಕೆಯಿಲ್ಲದೆ ?
ಕೂಡಲಸಂಗನ ಶರಣರ ಮುಂದೆ ನಾನೆಂತು ಭಕ್ತನಪ್ಪೆನಯ್ಯಾ ?

೧೨೦

ಅಡ್ಡದೊಡ್ಡ ನಾನಲ್ಲಯ್ಯಾ : ದೊಡ್ಡ ಬಸಱು ಎನಗಿಲ್ಲಯ್ಯಾ :
ದೊಡ್ಡವರಲ್ಲದೆ ನಿಮ್ಮ ಶರಣರು ಮನ್ನಿಸರಯ್ಯಾ !
ಹಡೆದುಂಬ ಸೂಳೆಯಂತೆ ಧನವುಳ್ಳವರನಱಸಿಯಱಸಿ,
ಬೋಧಿಸಲು ಪ್ರಾರ್ಥಿಸಲು ಮುನ್ನ ನಾನಱಿಯೆನಯ್ಯಾ.
ದೊಡ್ಡತನವೆನಗಿಲ್ಲ : ಅಂಜುವೆನಂಜುವೆ ನಿಮ್ಮ ಪ್ರಮಥರಿಗೆ :
ಅನಾಥ ನಾನಯ್ಯಾ, ಕೂಡಲಸಂಗಮದೇವಾ.

೧೨೧

ಮಾಡಿದೆನೆಂಬುದು ಮನದಲ್ಲಿ ಹೊಳೆದರೆ
ಏಡಿಸಿ ಕಾಡಿತ್ತು ಶಿವನ ಡಂಗುರ !
ಮಾಡಿದೆನೆನ್ನದಿರಾ ಲಿಂಗಕ್ಕೆ, ಮಾಡಿದೆನೆನ್ನದಿರಾ ಜಂಗಮಕ್ಕೆ.
ಮಾಡಿದೆನೆಂಬುದು ಮನದಲ್ಲಿಲ್ಲದಿದ್ದರೆ,
ಬೇಡಿತ್ತನೀವ, ಕೂಡಲಸಂಗಮದೇವ.

೧೨೨

ಹತ್ತು ಮತ್ತರದ ಭೂಮಿ, ಬತ್ತುವ ಹಯನು,
ನಂದಾದೀವಿಗೆಯ ನಡೆಸಿಹೆನೆಂಬವರ
ಮುಖವ ನೋಡಲಾಗದು; ಅವರ ನುಡಿಯ ಕೇಳಲಾಗದು.
ಅಂಡಜ, ಸ್ವೇದಜ, ಉದ್ಭಿಜ, ಜರಾಯುಜರೆಂಬ
ಪ್ರಾಣಿಗಳಿಗೆ ಭವಿತವ್ಯವ ಕೊಟ್ಟವರಾರೊ ?
ಒಡೆಯರಿಗೆ ಉಂಡಲಿಗೆಯ ಮುಱಿದಿಕ್ಕಿದಂತೆ
' ಎನ್ನಿಂದಲೆ ಆಯಿತ್ತು, ಎನ್ನಿಂದಲೆ ಹೋಯಿತ್ತು ' ಎಂಬವರ ಬಾಯಲ್ಲಿ
ಮೆಟ್ಟಿ ಹುಡಿಯ ಹೊಯ್ಯದೆ ಮಾಣ್ಬನೆ, ಕೂಡಲಸಂಗಮದೇವ ?

೧೨೩

ಮರದ ನೆಳಲಲಿದ್ದು ತನ್ನ ನೆಳಲನಱಸಬಹುದೆ ?
ನಿಮ್ಮ ಶರಣರ ಮುಂದೆ ನಾನೇತಱ ಭಕ್ತನಯ್ಯಾ ?
ನಿಮ್ಮ ಶರಣರ ಮುಂದೆ ನಾನೇತಱ ಯುಕ್ತನಯ್ಯಾ ?
ಆನು ಭಕ್ತನೆಂಬ ನುಡಿ ಸುಡದೆ, ಕೂಡಲಸಂಗಮದೇವಾ ?

೧೨೪

ಒತ್ತಿ ಹೊಸೆದು ಕಿಚ್ಚನೆ ಮಾಡಿದೆನೆಂದು
ಮುಚ್ಚಿ ಹಿಡಿವೊಡೆ ಕೈ ಬೇಯದಿಹುದೆ?
'ಎನ್ನಿಂದಾಯಿತ್ತು, ಎನ್ನಿಂದ ಹೋಯಿತ್ತು' ಎನ್ನದಿರು ಮನವೆ;
ನಾನು ಮಾಡಿದೆನೆನ್ನದಿರು ಮನವೆ.
ಕೂಡಲಸಂಗಮದೇವ, ಕೇಳಯ್ಯಾ:
ಚೆನ್ನಬಸವಣ್ಣನ ಪಾದಕ್ಕೆ 'ನಮೋ ನಮಃ' ಎಂಬೆನು.

೧೨೫

ಎಳ್ಳಿಲ್ಲದ ಗಾಣವನಾಡಿದ ಎತ್ತಿನಂತಾಯಿತ್ತೆನ್ನ ಭಕ್ತಿ.
ಉಪ್ಪು ಅಪ್ಪುವಿನಲ್ಲಿ ಅದ್ದಿ ಮೆಲಿದಂತಾಯಿತ್ತೆನ್ನ ಭಕ್ತಿ.
ಕೂಡಲಸಂಗಮದೇವಾ, ಆನು ಮಾಡಿದೆನೆಂಬೀ ಕಿಚ್ಚು ಸಾಲದೆ?

೧೨೬

ಎನ್ನಿಂದ ಕಿಱಿಯರಿಲ್ಲ, ಶಿವಭಕ್ತರಿಂದ ಹಿರಿಯರಿಲ್ಲಾ:
ನಿಮ್ಮ ಪಾದಸಾಕ್ಷಿ, ಎನ್ನ ಮನಸಾಕ್ಷಿ, ಕೂಡಲಸಂಗಮದೇವಾ,
ಎನಗಿದೇ ದಿಬ್ಯ!

೧೨೭

ಎನ್ನವರೊಲಿದು ಹೊನ್ನಶೂಲದಲಿಕ್ಕಿದರೆನ್ನ ಹೊಗಳಿ, ಹೊಗಳಿ!
ಎನ್ನ ಹೊಗಳತೆ ಎನ್ನನಿಮ್ಮೆಯ್ಗೊಂಡಿತ್ತಲ್ಲಾ!
ಅಯ್ಯಾ, ನಿಮ್ಮ ಮನ್ನಣೆಯೇ ಮಸೆದಲಗಾಗಿ ತಾಗಿತ್ತಲ್ಲಾ!
ಅಯ್ಯೋ! ನೊಂದೆನು! ಸೈರಿಸಲಾಱೆನು!
ಕೂಡಲಸಂಗಮದೇವಾ, ನೀನೆನಗೊಳ್ಳಿದನಾದರೆ,
ಎನ್ನ ಹೊಗಳತೆಗಡ್ಡಬಾರಾ ಧರ್ಮಿ!

೧೨೮

ಎನ್ನವರೊಲಿದು ಹೊನ್ನಶೂಲವನಿಕ್ಕಿದರಯ್ಯಾ !
ಅಹಂಕಾರಪೂರಾಯಗಾಯದಲ್ಲಿ ಆನೆಂತು ಬದುಕುವೆನೆಂತು ಜೀವಿಸುವೆ?
ಜಂಗಮವಾಗಿ ಬಂದು ಜಱೆದು, ಶೂಲವನಿಳುಹಿ,
ಪ್ರಸಾದದ ಮದ್ದನಿಕ್ಕಿ ಸಲಹು, ಕೂಡಲಸಂಗಮದೇವಾ.

೧೨೯

ಆತ್ಮಸ್ತುತಿ ಪರನಿಂದೆಯ ಕೇಳಿಸದಿರಯ್ಯಾ, ನಿಮ್ಮ ಧರ್ಮ !
' ಆನು ಭಕ್ತನೆನ್ನಲ್ಲಿ ಲೇಸುಂಟೆ 'ಂದು ಪರಿಣಾಮಿಸಿದರೆ
ನಿಮಗಾನು ದ್ರೋಹಿಯಯ್ಯಾ, ಕೂಡಲಸಂಗಮದೇವಾ.
ನಿಮ್ಮ ಶರಣರ ಲೇಸೇ ಎನ್ನ ಲೇಸಯ್ಯಾ.

೧೩೦

ಮಾಡುವಂತಿರಬೇಕು, ಮಾಡದಂತಿರಬೇಕು,
ಮಾಡುವ ಮಾಟದೊಳಗೆ ತಾನಿಲ್ಲದಿರಬೇಕು.
ಕೂಡಲಸಂಗಮದೇವರ ನೋಡುತ್ತ ನೋಡುತ್ತ ನೋಡದಂತಿರಬೇಕು.

೧೩೧

ಎನಗೆ ನಾನೇ ಹಗೆ ನೋಡಯ್ಯಾ : ಎನಗೆ ನಾನೇ ಕೆಳೆ ನೋಡಯ್ಯಾ :
ನಿಮ್ಮ ಸದ್ಭಕ್ತರೊಡನೆ ವಿರೋಧ ಮಾಡಿದೊಡೆ ಎನ್ನ ಕೊಲುವುದಾಗಿ,
ನಿಮ್ಮ ಪುರಾತನರಿಗಂಜಿ ಬೆಸಗೊಂಡೊಡೆ ಎನ್ನ ಕಾಯ್ವುದಾಗಿ.
ಅನ್ಯ ಹಗೆ ಎಲ್ಲಿ? ಕೆಳೆಯೆಲ್ಲಿ?
ಬಾಗಿದ ತಲೆಯ ಮುಗಿದ ಕೈಯಾಗಿರಿಸು, ಕೂಡಲಸಂಗಮದೇವಾ.

೧೩೨

ಪುಣ್ಯಪಾಪವೆಂಬುವು ತಮ್ಮಿಷ್ಟ ಕಾಣಿರೇ :
‘ ಅಯ್ಯಾ ’ ಎಂದಡೆ ಸ್ವರ್ಗ, ‘ ಎಲವೋ ’ ಎಂದಡೆ ನರಕ !
‘ ದೇವಾ, ಭಕ್ತ ಜಯಾ ಜೀಯಾ ’ ಎಂಬ ನುಡಿಯೊಳಗೆ
ಕೈಲಾಸವಿದ್ದುದೇ, ಕೂಡಲಸಂಗಮದೇವಾ,

೧೩೩

ಆನೆಯು ಆ ದಾರಿಯಲ್ಲಿ ಹೋಯಿತ್ತೆಂದಡೆ,
ಆಡೂ ಆ ದಾರಿಯಲ್ಲಿ ಹೋಯಿತ್ತೆನ್ನಬಹುದೇ ?
ಸಂಗನ ಶರಣರಿಗೆ ಆನು ಸರಿಯೆಂದು ಗಳಹಲು ಬಹುದೆ ?
ಜಂಗಮಕ್ಕೆ ಮಾಡುವ ಭಕ್ತರಿಗೆ ಆನು ಸರಿಯೆ ?
ಹೇಳಾ, ಕೂಡಲಸಂಗಮದೇವಾ.

೧೩೪

ಆವನಾದರೇನು ?
ಶ್ರೀಮಹಾದೇವನ ನೆನೆವವನ ಬಾಯ ತಂಬುಲ ಮೆಲುವೆ,
ಬೀಳುಡಿಗೆಯ ಹೊದೆವೆ, ಪಾದರಕ್ಷೆಯ ಕಾಯ್ದು ಬದುಕುವೆ,
ಕೂಡಲಸಂಗಮದೇವಾ.

೧೩೫

ಆ ಕರಿಯಾಕೃತಿಯ ಸೂಕರನ ಹೋಲಿಸಿದರೆ
ಆ ಕರಿಯಾಗಲಱಿವುದೇ ?
ಭೂನಾಗನಾಕೃತಿಯನು ವ್ಯಾಳೇಶನ ಹೋಲಿಸಿದರೆ
ವ್ಯಾಳೇಶನಾಗಲಱಿವುದೇ ?
ನಾನು ಭಕ್ತನಾದರೇನಯ್ಯಾ ? ನಿಮ್ಮ ಕೂಡಲಸಂಗಮದೇವನ
ಸದ್‌ಭಕ್ತರ ಹೋಲಲಱಿವೆನೆ ?

೧೩೬

ಒಪ್ಪವ ನುಡಿವರಯ್ಯಾ ತುಪ್ಪವ ತೊಡೆದಂತೆ!
ಶರಣ ತನ್ನ ಮೆಱೆವನೆ ಬಿನ್ನಾಣಿಯಂತೆ?
ಕೂಡಲಸಂಗನ ಪ್ರಸಾದದಿಂದ ಬದುಕುವನಲ್ಲದೆ ತನ್ನ ಮೆಱೆವನೆ?

೧೩೭

ಬಿದಿರಲಂದಣವಕ್ಕು, ಬಿದಿರೆ ಸತ್ತಿಗೆಯಕ್ಕು,
ಬಿದಿರಲ್ಲಿ ಗುಡಿಯು ಗೂಡಾರವಕ್ಕು: ಬಿದಿರಲ್ಲಿ ಸಕಲ ಸಂಪದವೆಲ್ಲವು!
ಬಿದಿರದವರ ಮೆಚ್ಚ, ನಮ್ಮ ಕೂಡಲಸಂಗಮದೇವ.

೧೩೮

ಆನು ನಿಮ್ಮ ಬಂಟರ ಬಂಟನಯ್ಯಾ,
ಆನು ನಿಮ್ಮ ಲೆಂಕರ ಲೆಂಕನಯ್ಯಾ,
ಆನು ನಿಮ್ಮ ತೊತ್ತಿನ ಪಡಗವ ತೆಗೆವ ಪಡಿದೊತ್ತಯ್ಯಾ!
ಕೂಡಲಸಂಗನ ಶರಣರಿಗೆಲ್ಲ ಸಂಗನಬಸವನ ಬಿನ್ನಪವು:
ಕವಳಿಗೆ ಸಂದಿತ್ತು;
ನಿಮ್ಮ ನಿಜಪದದಲ್ಲಿ ಬೆರಸೆಂದು ಕೃಪೆಮಾಡಿರಯ್ಯಾ!

೧೩೯

"ಏನಿ ಬಂದಿರಿ, ಹದುಳವಿದ್ದಿರೆ?" ಎಂದರೆ
ನಿಮ್ಮ ಮೈಸಿರಿ ಹಾಱಿಹೋಹುದೆ?
"ಕುಳ್ಳಿರೆ"ಂದರೆ ನೆಲ ಕುೞಿಹೋಹುದೆ?
ಒಡನೆ ನುಡಿದರೆ ಶಿರ–ಹೊಟ್ಟೆಯೊಡೆವುದೆ?
ಕೊಡಲಿಲ್ಲದಿದ್ದರೊಂದು ಗುಣವಿಲ್ಲದಿರ್ದಡೆ,
ಕೆಡಹಿ ಮೂಗ ಕೊಯ್ಯದೆ ಮಾಣ್ಬನೆ, ಕೂಡಲಸಂಗಮದೇವನು?

ಕಂಡ ಭಕ್ತರಿಗೆ ಕೈಮುಗಿವಾತನೇ ಭಕ್ತ :
ಮೃದುವಚನವೇ ಸಕಲ ಜಪಂಗಳಯ್ಯಾ,
ಮೃದುವಚನವೇ ಸಕಲ ತಪಂಗಳಯ್ಯಾ,
ಸದುವಿನಯವೇ ಸದಾಶಿವನೊಲಿಮೆಯಯ್ಯಾ.
ಕೂಡಲಸಂಗಯ್ಯನಂತಲ್ಲದೊಲ್ಲನಯ್ಯಾ.

೫

ನಿಸ್ಪೃಹತೆ– ಆತ್ಮವಿಶ್ವಾಸ

೧೪೧

ನ್ಯಾಯನಿಷ್ಠುರಿ : ದಾಕ್ಷಿಣ್ಯಪರನು ನಾನಲ್ಲ;
ಲೋಕವಿರೋಧಿ : ಶರಣನಾರಿಗಂಜುವನಲ್ಲ :
ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ.

೧೪೨

ಛಲ ಬೇಕು ಶರಣಂಗೆ ' ಪರಧನವನೊಲ್ಲೆನೆ 'ಂಬ,
ಛಲ ಬೇಕು ಶರಣಂಗೆ ' ಪರಸತಿಯನೊಲ್ಲೆನೆ 'ಂಬ,
ಛಲ ಬೇಕು ಶರಣಂಗೆ ' ಪರದೈವವನೊಲ್ಲೆನೆ 'ಂಬ,
ಛಲ ಬೇಕು ಶರಣಂಗೆ ' ಲಿಂಗ ಜಂಗಮ ಒಂದೆ ' ಎಂಬ,
ಛಲ ಬೇಕು ಶರಣಂಗೆ ' ಪ್ರಸಾದ ದಿಟವೆ 'ಂಬ :
ಛಲವಿಲ್ಲದವರ ಮೆಚ್ಚ ನಮ್ಮ ಕೂಡಲಸಂಗಮದೇವ.

೧೪೩

ಊರ ಮುಂದೆ ಹಾಲಹಳ್ಳ ಹರಿಯುತ್ತಿರಲು,
ಓಜೆಯಾವಿನ ಬೆನ್ನಲ್ಲಿ ಹರಿಯಲದೇಕಯ್ಯಾ ?
ಲಜ್ಜೆಗೆಡಲೇಕೆ ? ನಾಣುಗೆಡಲೇಕೆ ?
ಕೂಡಲಸಂಗಮದೇವಯ್ಯನುಳ್ಳನ್ನಕ್ಕ
ಬಿಜ್ಜಳನ ಭಂಡಾರವೆನಗೇಕಯ್ಯಾ ?

೧೪೪

ಕಂಡುದಕ್ಕೆಳಸೆನೆನ್ನ ಮನದಲ್ಲಿ; ನೋಡಿ ಸೋಲೆನೆನ್ನ ಕಂಗಳಲ್ಲಿ;
ಆಡಿ ಹುಸಿಯೆನೆನ್ನ ಜಿಹ್ವೆಯಲ್ಲಿ :
ಕೂಡಲಸಂಗಮದೇವಾ, ನಿಮ್ಮ ಶರಣರ ಪರಿ ಇಂತುಟಯ್ಯಾ.

೧೪೫

ಒಡೆದೋಡು ಎನ್ನ ಮನೆಯಲ್ಲಿಲ್ಲದಂತೆ ಮಾಡಯ್ಯಾ;
ಕೊಡು, ದೇವಾ, ಎನ್ನ ಕೈಯಲ್ಲೊಂದು ಕಜ್ಜೋಳೆಯ;
'ಮೃಡ, ದೇವಾ, ಶರಣೆ'ಂದು ಭಿಕ್ಷಕ್ಕೆ ಹೋದರೆ, ಅಲ್ಲಿ,
'ನಡೆ, ದೇವಾ' ಎಂದೆನಿಸು, ಕೂಡಲಸಂಗಮದೇವಾ.

೧೪೬

ಚಂದ್ರಕೈತ್ಯದಲು ಬೆಳೆದ ಕಾಯಕ್ಕೆ
ಬೆಳದಿಂಗಳ ಬಯಸುವ ಹಂಗೇಕಯ್ಯಾ?
ಶರಣರ ಸಂಗದಲಿರ್ದು ಶಿವನ ಬೇಡುವ ಹಂಗೇಕಯ್ಯಾ?
ಕೂಡಲಸಂಗಯ್ಯನ ಶರಣರು ಬಂದು
ತಮ್ಮವನೆಂದರೆ ಸಾಲದೆ, ಅಯ್ಯಾ?

೧೪೭

ದೂಷಕನವನೊಬ್ಬ ದೇಶವ ಕೊಟ್ಟರೆ
ಆಸೆಮಾಡಿಯವನ ಹೊರೆಯಲಿರಬೇಡ.
ಮಾದರ ಶಿವಭಕ್ತನಾದರೆ ಆತನ ಹೊರೆಯಲಿ
ಭೃತ್ಯನಾಗಿರ್ಪುದು ಕರ ಲೇಸಯ್ಯಾ;
ತೊತ್ತಾಗಿರ್ಪುದು ಕರ ಲೇಸಯ್ಯಾ.
ಕಾಡ ಸೊಪ್ಪ ತಂದು, ಓಡಿನಲ್ಲಿ ಹುರಿದಿಟ್ಟು,
ಕೂಡಿಕೊಂಡಿಪ್ಪುದು ನಮ್ಮ ಕೂಡಲಸಂಗನ ಶರಣರ.

೧೪೮

ಒಡಲ ಕಳವಳಕ್ಕೆ, ಬಾಯ ಸವಿಗೆ ಬಯಸಿ ಉಂಡೆನಾದರೆ,
ನಿಮ್ಮ ತೊತ್ತಿನ ಮಗನಲ್ಲಾ !
ಬೇಡೆ, ಬೇಡೆ, ನಿಮ್ಮ ನಂಬಿದ ಸದ್ಭಕ್ತರ.
ಅವರೊಕ್ಕುದನುಂಬೆ, ಅವರೆಂದಂತೆ ಎಂಬೆ.
ಎನ್ನೊಡೆಯ ಕೂಡಲಸಂಗಮದೇವನೊಲ್ಲದವರ ಹಿಡಿದೆನಾದಡೆ
ನಿಮ್ಮ ಪಾದದಾಣೆ !

೧೪೯

ಹೊನ್ನಿನೊಳಗೊಂದೊರೆಯ, ಸೀರೆಯೊಳಗೊಂದೆಳೆಯ,
ಇಂದಿಂಗೆ ನಾಳಿಂಗೆ ಬೇಕೆಂದೆನಾದರೆ,
ನಿಮ್ಮಾಣೆ, ನಿಮ್ಮ ಪುರಾತರಾಣೆ !
ನಿಮ್ಮ ಶರಣರಿಗಲ್ಲದೆ ಮತ್ತೊಂದನರಿಯೆ,
ಕೂಡಲಸಂಗಮದೇವಾ.

೧೫೦

ಆಸೆಗೆ ಹುಟ್ಟಿದ ಪ್ರಾಣಿ ಆಸೆಯನೆ ಕಲಿತು
ಪುಣ್ಯಪದವಿಯ ಬಯಸಿದರೆ ಭವಮಾಲೆಯ ಬರವು ತಪ್ಪದು.
ಬೇಡಲು ಹುಟ್ಟಿದ ಪ್ರಾಣಿಗೆ ಬೇಡಲು ವಿಧಿಯೇ !
ಸೂಳೆಗೆ ಹುಟ್ಟಿದ ಪ್ರಾಣಿಗೆ ನಿಜಗುಣ ಸಜ್ಜನವಪ್ಪುದೆ ?
ಲಿಂಗ–ಉದಯ, ಶರಣ–ವಿಸ್ತಾರವು ಬಯಸಿದರೊಳವೆ
ಕೂಡಲಸಂಗಮದೇವಾ ?

೧೫೧

ಹುತ್ತದ ಮೇಲಿನ ರಜ್ಜು ಮುಟ್ಟಿದರೆಯೂ ಸಾವರು ಶಂಕಿತರಾದವರು;
ಸರ್ಪದಷ್ಟವಾದರೂ ಸಾಯರು ನಿಶ್ಚಿಂತರಾದವರು :
ಕೂಡಲಸಂಗಮದೇವಯ್ಯಾ,
ಶಂಕಿತಂಗೆ ಪ್ರಸಾದ ಸಿಂಗಿ, ಕಾಳಕೂಟವಿಷವು !

೧೫೨

ಸುಖ ಬಂದರೆ ಪುಣ್ಯದ ಫಲವೆನ್ನೆನು,
ದುಃಖ ಬಂದರೆ ಪಾಪದ ಫಲವೆನ್ನೆನು;
ನೀ ಮಾಡಿದೊಡಾಯಿತ್ತೆಂದೆನ್ನೆನು,
ಕರ್ಮಕ್ಕೆ ಕರ್ತುವೆ ಕಡೆಯೆಂದೆನ್ನೆನು,
ಉದಾಸೀನವಿಡಿದು ಶರಣೆನ್ನೆನು.
ಕೂಡಲಸಂಗಮದೇವಾ,
ನೀ ಮಾಡಿದುಪದೇಶವು ಎನಗೀಪರಿಯಲಿ :
ಸಂಸಾರವ ಸವೆಯೆ ಬಳಸುವೆನು.

೧೫೩

ನೀನಿರಿಸಿದ ಮನದಲ್ಲಿ ನಾನಂಜೆನಯ್ಯಾ :
ಮನವು ಮಹಾಘನಕ್ಕೆ ಶರಣಗತಿವೊಕ್ಕುದಾಗಿ.
ನೀನಿರಿಸಿದ ಧನದಲ್ಲಿ ನಾನಂಜೆನಯ್ಯಾ :
ಧನವು ಸತಿ–ಸುತ–ಮಾತಾ–ಪಿತರಿಗೆ ಹೋಗದಾಗಿ.
ನೀನಿರಿಸಿದ ತನುವಿನಲ್ಲಿ ನಾನಂಜೆನಯ್ಯಾ :
ತನುವು ಸರ್ವಾರ್ಪಿತದಲ್ಲಿ ನಿಯತಪ್ರಸಾದಭೋಗಿಯಾಗಿ.
ಇದುಕಾರಣ, ವೀರಧೀರ ಸಮುಗ್ರಾಹಕನಾಗಿ,
ನಿಮಗಾನಂಜೆ, ಕೂಡಲಸಂಗಮದೇವಾ !

೧೫೪

ಧನಧಾನ್ಯ ಹೋಯಿತೆಂದಡೆ, ಮನ ಬೆದಱಿದಡೆ,
ಚಿತ್ತ ಹೆದಱಿದಡೆ, ತನು ತೆರಳಿದಡೆ,
ಭಾವ ಓಸರಿಸಿದಡೆ ನಿಮ್ಮಾಣೆ,
ನಿಮ್ಮ ಪ್ರಮಥರಾಣೆ!
ತನು–ಮನ–ಧನವನಲ್ಲಾಡಿಸಿ ನೋಡುವ ಒಡೆಯನು ನೀನೆ!
ಹರಣವ ಮೇಲೆತ್ತುವೊಡೆ ಕಳವಳವೇ,
ಕೂಡಲಸಂಗಮದೇವಾ?

೧೫೫

ದೇವನೊಲ್ಲಿದನೆಂದು ಮುಯ್ಯಾನಲುಬೇಡ:
ಅಳಿಸುವ ನಗಿಸುವನೊಲ್ಲಿದನೇ?
ತಱಕಟ ಕಾಡುವನೊಲ್ಲಿದನೆ?
ಬೆಚ್ಚದೆ ಬೆದಱದೆ ತೊತ್ತುತನವ ಮಾಡಲು
ತನ್ನಂತೆ ಮಾಡುವ ಕೂಡಲಸಂಗಮದೇವ.

೧೫೬

ಜಂಬೂದ್ವೀಪ ನವಖಂಡ ಪೃಥ್ವಿಯೊಳಗೆ, ಕೇಳಿರಯ್ಯಾ,
ಎರಡಾಳಿನ ಭಾಷೆಯ—
ಕೊಲುವೆನೆಂಬ ಭಾಷೆ ದೇವನದು,
ಗೆಲುವೆನೆಂಬ ಭಾಷೆ ಭಕ್ತನದು!
ಸತ್ಯವೆಂಬ ಕೂರಲಗನೆ ತಳೆದುಕೊಂಡು ಸದ್ಭಕ್ತರು ಗೆದ್ದರು, ಕಾಣಾ,
ಕೂಡಲಸಂಗಮದೇವಾ.

೧೫೭

ಎನಿಸೆನಿಸೆಂದೊಡೆ ನಾ ಧೃತಿಗೆಡೆನಯ್ಯಾ :
ಎಲುದೋಱಿದರೆ, ನರ ಹಱಿದರೆ, ಕರುಳು ಕುಪ್ಪಳಿಸಿದರೆ
ನಾ ಧೃತಿಗೆಡೆನಯ್ಯಾ !
ಸಿರ ಹಱಿದು, ಅಟ್ಟೆ ನೆಲಕ್ಕೆ ಬಿದ್ದರೆ
ನಾಲಗೆ " ಕೂಡಲಸಂಗಾ, ಶರಣೆ "ನುತ್ತಿದ್ದೀತಯ್ಯಾ !

೧೫೮

ಆಯುಷ್ಯ ತೀರಿದಲ್ಲದೆ ಮರಣವಿಲ್ಲ; ಭಾಷೆ ತಪ್ಪಿದಲ್ಲದೆ ದಾರಿದ್ರ್ಯವಿಲ್ಲ :
ಅಂಜಲೇಕೋ, ಲೋಕವಿಗುರ್ಬಣೆಗೆ,
ಅಂಜಲೇಕೋ, ಕೂಡಲಸಂಗಮದೇವಾ, ನಿಮ್ಮಾಳಾಗಿ ?

೧೫೯

ಅರ್ಥವನರ್ಥವ ಮಾಡಿ ಕೋಳಾಹಳಂಗೆಯ್ಯುತ್ತಿರಲಿ,
ಹುಟ್ಟಿದ ಮಕ್ಕಳ ನವಖಂಡವ ಮಾಡಿ ಕಡಿಯುತ್ತಿರಲಿ,
ಮುಟ್ಟುವ ಸ್ತ್ರೀಯ ಕಣ್ಣಮುಂದೆ ಅಭಿಮಾನಗೊಂಡು ನೆರೆಯುತ್ತಿರಲಿ;
—ಇಂತೀ ತ್ರಿವಿಧವು ಹೊಱಗಣವು—
ಇನ್ನೆನ್ನಂಗದ ಮೇಲೆ ಬರಲಿ, ಹಿಡಿಖಂಡಂಗೊಯ್ಯಲಿ,
ಇಕ್ಕುವ ಸೂಲ ಪ್ರಾಪ್ತಿಸಲಿ,
ಹಾಕೊಂದೆಸೆ ಹನ್ನೊಂದೆಸೆಯಾಗಿ ಮಾಡುತ್ತಿರಲಿ;
ಮತ್ತೆಯೂ ಲಿಂಗಾರಾಧನೆಯ ಮಾಡುವೆ,
ಜಂಗಮಾರಾಧನೆಯ ಮಾಡುವೆ, ಪ್ರಸಾದಕ್ಕೆ ತಪ್ಪೆನು !
ಇಂತಪ್ಪ ಭಾಷೆ ಕಿಂಚಿತ್ತು ಹುಸಿಯಾದರೆ
ನೀನಂದೆ ಮೂಗ ಕೊಯಿ, ಕೂಡಲಸಂಗಮದೇವಾ.

೧೬೦

ಅಂಜಿದರಾಗದು, ಅಳುಕಿದರಾಗದು, ವಜ್ರಪಂಜರದೊಳಗಿದ್ದರಾಗದು :
ತಪ್ಪದುವೋ ಲಲಾಟಲಿಖಿತ !
ಕಕ್ಕುಲತೆಗೆ ಬಂದರೆ ಆಗದು, ನೋಡಾ !
ಧೃತಿಗೆಟ್ಟು ಮನ ಧಾತುಗೆಟ್ಟರೆ ಅಪ್ಪುದು ತಪ್ಪದು, ಕೂಡಲಸಂಗಮದೇವಾ.

೧೬೧

ಕಾಯದ ಕಳವಳಕ್ಕಂಜಿ 'ಕಾಯಯ್ಯಾ' ಎನ್ನೆನು;
ಜೀವನೋಪಾಯಕ್ಕಂಜಿ 'ಈಯಯ್ಯಾ' ಎನ್ನೆನು.
'ಯದ್ಭಾವಂ ತದ್ಭವತಿ.'
ಉರಿ ಬರಲಿ, ಸಿರಿ ಬರಲಿ, 'ಬೇಕು ಬೇಡೆ'ನ್ನೆನಯ್ಯಾ.
ಆ ನಿಮ್ಮ ಹಾರೆನು, ಮಾನವರ ಬೇಡೆನು,
ಆಣೆ, ನಿಮ್ಮಾಣೆ, ಕೂಡಲಸಂಗಮದೇವಾ.

೧೬೨

ಧನದಲ್ಲಿ ಶುಚಿ, ಪ್ರಾಣದಲ್ಲಿ ನಿರ್ಭಯ, ಇದಾವಂಗಳವಡುವುದಯ್ಯಾ ?
ನಿಧಾನ ತಪ್ಪಿ ಬಂದರೆ ಒಲ್ಲೆನೆಂಬುವರಿಲ್ಲ;
ಪ್ರಮಾದವಶದಿಂ ಬಂದರೆ ಹುಸಿಯೆನೆಂಬುವರಿಲ್ಲ.
ನಿರಾಶೆ–ನಿರ್ಭಯ, ಕೂಡಲಸಂಗಮದೇವಾ, ನೀನೊಲಿದ ಶರಣಂಗಲ್ಲದಿಲ್ಲ !

೧೬೩

ಧನಕ್ಕೆ ಮನವನೊಡ್ಡಿದರೇನು ? ಮನಕ್ಕೆ ಧನವನೊಡ್ಡಿದರೇನು ?
ತನು–ಮನ–ಧನವ ಮೀಜಿ ಮಾತನಾಡಬಲ್ಲರೆ,
ಆತ ನಿಸ್ಸೀಮನು, ಆತ ನಿಜೈಕ್ಯನು !
ತನು-ಮನ–ಧನವನುವಾದರೆ ಕೂಡಲಸಂಗಮದೇವನೊಲಿವ.

೧೬೪

ನಾನಾ ಸ್ಥಾನಂಗಳಲ್ಲಿ ಬಂದು ಕುಳ್ಳಿರ್ದುದು ತೆರಳುವುದೇ, ಅಯ್ಯಾ?
ಉಭಯಕುಳಕ್ಕಲ್ಲದೆ ತೆರಳದು.
ಬೀದಿಯಲ್ಲಿ ಬಿದ್ದ ಶಿಶುವನು ಹೆತ್ತ ತಾಯಿ ಹತ್ತಿರ ಬಂದು ಎತ್ತುವಂತೆ!
ಎನ್ನನಾಱು ಜನ್ಮಕ್ಕೆ ತಂದು ಅಘೋರ ನರಕದಲ್ಲಿಕ್ಕಿದುದ ನಾ ಬಲ್ಲೆ:
ಕೂಡಲಸಂಗಮದೇವಾ, ನಿಮ್ಮ ಹಂಗೇನು, ಹಱಿಯೇನು?
ಆನುಭಯಲಿಂಗಜಂಗಮದ ಮಱೆಹೊಕ್ಕು ಬದುಕಿದೆನು.

೧೬೫

ಅಟ್ಟಾಟಿಕೆಯ ಮಾತನಾಡಲದೇಕೋ?
ಮುಟ್ಟಿ ಬಂದುದಕ್ಕಂಜಲದೇಕೋ?
ಕಾದಿದಲ್ಲದೆ ಮಾಣೆನು: ಓಡಿದರೆ ಭಂಗ ಹಿಂಗದಾಗಿ,
ಕೂಡಲಸಂಗಮದೇವಾ, ಎನ್ನ ಭಂಗ ನಿಮ್ಮದಾಗಿ.

೧೬೬

ಆರು ಮುನಿದು ನಮ್ಮನೇನ ಮಾಡುವರು?
ಊರು ಮುನಿದು ನಮ್ಮನೆಂತು ಮಾಡುವುದು?
ನಮ್ಮ ಕುನ್ನಿಗೆ ಕೂಸ ಕೊಡಬೇಡ,
ನಮ್ಮ ಸೊಣಕಂಗೆ ತಳಿಗೆಯನಿಕ್ಕಬೇಡ.
ಆನೆಯ ಮೇಲೆ ಹೋಹನ ಶ್ವಾನ ಕಚ್ಚಬಲ್ಲುದೆ,
ನಮಗೆ ನಮ್ಮ ಕೂಡಲಸಂಗಯ್ಯನುಳ್ಳನ್ನಕ್ಕ?

೧೬೭

ನಾಳೆ ಬಪ್ಪುದು ನಮಗಿಂದೇ ಬರಲಿ,
ಇಂದು ಬಪ್ಪುದು ನಮಗೀಗಲೆ ಬರಲಿ:
ಇದಕಾರಂಜುವರು, ಇದಕಾರಳುಕುವರು ?
'ಜಾತಸ್ಯ ಮರಣಂ ಧ್ರುವಂ' ಎಂದುದಾಗಿ,
ನಮ್ಮ ಕೂಡಲಸಂಗಮದೇವರು ಬರೆದ ಬರೆಹವನು ತಪ್ಪಿಸುವರೆ
ಹರಿಬ್ರಹ್ಮಾದಿಗಳಿಗಳವಲ್ಲಾ !

೬

ಪರಿಶುದ್ಧ ನಡೆ-ನುಡಿ

೧೬೮

ಕೆಡೆ ನಡೆಯದೆ, ಕೆಡೆ ನುಡಿಯದೆ, ಅನ್ಯರ ಪ್ರತಿಪಾದಿಸದಿದ್ದರೆ
ಏನ ಮಾಡನಯ್ಯಾ ಲಿಂಗವು? ಏನ ಕೊಡನಯ್ಯಾ ತಾನು?
ಏನ ಬೇಡಿದುದನೀವನಾಗಿ, ನಂಬಿಗೆಯುಳ್ಳ ಶಿವಭಕ್ತಂಗೆ
ಇದೇ ದಿಬ್ಯ, ಕೂಡಲಸಂಗಮದೇವಾ.

೧೬೯

ಭಕ್ತಿಸುಭಾಷೆಯ ನುಡಿಯ ನುಡಿವೆ, ನುಡಿದಂತೆ ನಡೆವೆ,
ನಡೆಯೊಳಗೆ ನುಡಿಯ ಪೂರೈಸುವೆ—
ಮೇಲೆ ತೂಗುವ ತ್ರಾಸು ಕಟ್ಟಳೆ ನಿಮ್ಮ ಕೈಯಲ್ಲಿ;
ಒಂದು ಜವೆ ಕೊಱತೆಯಾದರೆ
ಎನ್ನನದ್ದಿ ನೀನೆದ್ದು ಹೋಗು,
ಕೂಡಲಸಂಗಮದೇವಾ.

೧೭೦

ಸದಾಚಾರ–ಸದ್ಭಕ್ತಿಯಿಲ್ಲದವರನೊಲ್ಲನಯ್ಯಾ: ಅವರಾರಾಧನೆ ದಂಡ!
ನಿಚ್ಚ ನಿಚ್ಚ ಪ್ರಾಯಶ್ಚಿತ್ತರನೊಲ್ಲ: ಕೂಡಲಸಂಗಮದೇವ ಭೂಭಾರಕರ!

೧೭೧

ಆರತವಡಗದು, ಕ್ರೋಧ ತೊಲಗದು:
ಕ್ರೂರ ಕುಭಾಷೆ ಕುಹಕ ಬಿಡದನ್ನಕ್ಕ,
ನೀನೆತ್ತ ಶಿವನೆತ್ತ ಹೋಗಯ್ಯಾ ಮರುಳೆ!
ಭವರೋಗವೆಂಬ ತಿಮಿರ ತಿಳಿಯದನ್ನಕ್ಕ
ಕೂಡಲಸಂಗಯ್ಯನೆತ್ತ ನೀನೆತ್ತ ಮರುಳೆ!

೧೭೨

ಕಾಮವೇಕೋ ಲಿಂಗಪ್ರೇಮಿಯೆನಿಸುವಂಗೆ?
ಕ್ರೋಧವೇಕೋ ಶರಣವೇದ್ಯನೆನಿಸುವಂಗೆ?
ಲೋಭವೇಕೋ ಭಕ್ತಿಲಾಭವ ಬಯಸುವಂಗೆ?
ಮೋಹವೇಕೋ ಪ್ರಸಾದವೇದ್ಯನೆನಿಸುವಂಗೆ?
ಮದಮತ್ಸರವುಳ್ಳವಂಗೆ ಹೃದಯಶುದ್ಧವೆಲ್ಲಿಯದೋ?
ಹದುಳಿಗರಾದಲ್ಲಿಪ್ಪ ನಮ್ಮ ಕೂಡಲಸಂಗಮದೇವ.

೧೭೩

ಅತ್ತಲಿತ್ತಲು ಹೋಗದಂತೆ ಹೆಳವನ ಮಾಡಯ್ಯಾ, ತಂದೆ;
ಸುತ್ತಿಸುಳಿದು ನೋಡದಂತೆ ಅಂಧಕನ ಮಾಡಯ್ಯಾ, ತಂದೆ;
ಮತ್ತೊಂದ ಕೇಳದಂತೆ ಕಿವುಡನ ಮಾಡಯ್ಯಾ, ತಂದೆ!
ನಿಮ್ಮ ಶರಣರ ಪಾದವಲ್ಲದೆ ಅನ್ಯವಿಷಯಕ್ಕೆಳಸದಂತೆ ಇರಿಸು
ಕೂಡಲಸಂಗಮದೇವಾ.

೧೭೪

ದಯವಿಲ್ಲದ ಧರ್ಮವದೇವುದಯ್ಯಾ?
ದಯವೇ ಬೇಕು, ಸಕಲಪ್ರಾಣಿಗಳೆಲ್ಲಜಲ್ಲಿಯೂ.
ದಯವೇ ಧರ್ಮದ ಮೂಲವಯ್ಯಾ:
ಕೂಡಲಸಂಗಯ್ಯನಂತಲ್ಲದೊಲ್ಲನಯ್ಯಾ.

೧೭೫

ಹರಿವ ಹಾವಿಂಗಂಜೆ, ಉರಿಯ ನಾಲಗೆಗಂಜೆ, ಸುರಗಿಯ ಮೊನೆಗಂಜೆ!
ಒಂದಕ್ಕಂಜುವೆ, ಒಂದಕ್ಕಳುಕುವೆ:
ಪರಸ್ತ್ರೀ–ಪರಧನವೆಂಬೀ ಜೂಬಿಂಗಂಜುವೆ!
ಮುನ್ನಂಜದ ರಾವಣನೇವಿಧಿಯಾದ?
ಅಂಜುವೆನಯ್ಯಾ, ಕೂಡಲಸಂಗಮದೇವಾ.

೧೭೬

ಬಾರದು, ಬಾರದು, ಭಕ್ತಂಗೆ ಪರಧನ, ಪರಸ್ತ್ರೀ.
ಬಾರದು, ಬಾರದು, ವಿಷಯಿಗೆ ಪಶುಪತಿಯ ಬ್ರತವು.
ಬಾರದು, ಬಾರದು:
ಭವಭಾರಿಗೆ ಕೂಡಲಸಂಗಮದೇವನ ಒಕ್ಕುದ ಕೊಳ್ಳಬಾರದು.

೧೭೭

ತೊಱೆಯ ಮೂವಣ್ಣಗಳಿರಾ, ತೊಱೆಯ ಮೂವ ಸ್ವಾಮಿಗಳಿರಾ,
ತೊಱೆಯಿಂ ಭೋ, ತೊಱೆಯಿಂ ಭೋ:
ಪರನಾರಿಯ ಸಂಗವ ತೊಱೆಯಿಂ ಭೋ!
ಪರಧನದಾಮಿಷವ ತೊಱೆಯಿಂ ಭೋ!
ಇವ ತೊಱೆಯದೆ ಹೋಗಿ ತೊಱೆಯ ಮಿಂದರೆ
ಬಱುದೊಱೆ ಹೋಹುದು ಕೂಡಲಸಂಗಮದೇವಾ.

೧೭೮

ಲಿಂಗ ಜಂಗಮ ಒಂದೆ ಎಂದು ನಂಬಿದ ಬಳಿಕ
ಅವರಂಗನೆಯರು ಲಿಂಗದ ರಾಣಿವಾಸ:
ಅಲ್ಲಿಯೂ ಮೇಳ, ಇಲ್ಲಿಯೂ ಮೇಳ, ಚೌಡೇಶ್ವರಿಯಲ್ಲಿಯೂ ಮೇಳ.
ಮಾತೆಯೆಂಬ ಭಾವ ತಪ್ಪಿ ಅಪ್ಪಿದವರ ತಲೆಯ ಕೊಂಬ
ಕೂಡಲಸಂಗಮದೇವ.

೧೭೯

ಆಡಿ ಅಳುಪದಿರಾ, ಲೇಸ ಮಾಡಿ ಮಱುಗದಿರಾ,
ಎಲೆ ಮನವೇ, ಕೂಡಿ ತಪ್ಪದಿರಾ.
ಬೇಡಿದವರಿಗಿಲ್ಲೆನ್ನದಿರು, ಕಂಡಾ, ಮನವೇ,
ನಾಡ ಮಾತು ಬೇಡ, ಸೆಱಗೊಡ್ಡಿ ಬೇಡು ಕೂಡಲಸಂಗನ ಶರಣರ.

೧೮೦

ಕೊಲ್ಲೆನಯ್ಯಾ ಪ್ರಾಣಿಗಳ, ಮೆಲ್ಲೆನಯ್ಯಾ ಬಾಯಿಚ್ಛೆಗೆ,
ಒಲ್ಲೆನಯ್ಯಾ, ಪರಸತಿಯರ ಸಂಗವ :
ಬಲ್ಲೆನಯ್ಯಾ, ಮುಂದೆ ತೊಡಕುಂಟೆಂಬುದ.
ಬಳ್ಳದ ಬಾಯಂತೆ ಒಂದೇ ಮನವ ಮಾಡಿ,
ನಿಲ್ಲೆಂದು ನಿಲ್ಲಿಸಯ್ಯಾ, ಕೂಡಲಸಂಗಮದೇವಾ

೧೮೧

ಕೃಷಿಕೃತ್ಯ ಕಾಯಕದಿಂದಾದಡೇನು ?
ತನುಮನ ಬಳಲಿಸಿ ತಂದು ದಾಸೋಹವ ಮಾಡುವ
ಪರಮ ಸದ್ಭಕ್ತನ ಪಾದವ ತೋಱಯ್ಯಾ ಎನಗೆ.
ಅದೆಂತೆನೆ : ಆತನ ತನು ಶುದ್ಧ, ಆತನ ಮನ ಶುದ್ಧ,
ಆತನ ನಡೆ ಶುದ್ಧ, ನುಡಿಯೆಲ್ಲ ಪಾವನವು !
ಆತಂಗೆ ಉಪದೇಶವ ಮಾಡಿದಾತನೆ ಪರಮ ಸದ್ಗುರು.
ಅಂತಪ್ಪ ಸದ್ಭಕ್ತನ ಮನೆಯು ಕೈಲಾಸವೆಂದು ಹೊಕ್ಕು
ಲಿಂಗಾರ್ಚನೆಯ ಮಾಡುವ ಜಂಗಮವೇ ಜಗತ್ಪಾವನ.
ಇಂತಪ್ಪವರ ನಾನು ನೆಱೆನಂಬಿ 'ನಮೋ ನಮಃ' ಎಂಬೆನಯ್ಯಾ,
ಕೂಡಲಸಂಗಮದೇವಾ.

೧೮೨

ಹೊತ್ತಾರೆ ಎದ್ದು ಕಣ್ಣ ಹೊಸೆಯುತ್ತ
ಎನ್ನೊಡಲಿಂಗೆ, ಎನ್ನೊಡವೆಗೆ, ಎನ್ನ ಮಡದಿಮಕ್ಕಳಿಗೆಂದು
ಕುದಿದೆನಾದರೆ—ಎನ್ನ ಮನವೇ ಸಾಕ್ಷಿ!
“ ‘ಆಸನೇ ಶಯನೇ ಯಾನೇ ಸಂಪರ್ಕೇ ಸಹಭೋಜನೇ।
ಸಂಚರಂತಿ ಮಹಾಘೋರೇ ನರಕೇ ಕಾಲಮಕ್ಷಯಂ॥’
ಎಂಬ ಶ್ರುತಿಯ ಬಸವಣ್ಣನೋದುವನು” ಎಂಬರು;
“ಭವಿ ಬಿಜ್ಜಳನ ಗದ್ದುಗೆಯ ಕೆಳಗೆ ಕುಳ್ಳಿರ್ದು
ಓಲೈಸಿಹನೆ”ಂದು ನುಡಿವರಯ್ಯಾ ಪ್ರಮಥರು.
ಕೊಡುವೆನುತ್ತರವನವರಿಗೆ ಕೊಡಲಮ್ಮುವೆ:
ಹೊಲೆಯಹೊಲೆಯರ ಮನೆಯ ಹೊಕ್ಕು,
ಸಲೆ ಕೈಕೂಲಿಯ ಮಾಡಿಯಾದರೆಯೂ
ನಿಮ್ಮ ನಿಲವಿಂಗೆ ಕುದಿವೆನಲ್ಲದೆ,
ಎನ್ನೊಡಲವಸರಕ್ಕೆ ಕುದಿದೆನಾದರೆ ತಲೆದಂಡ,
ಕೂಡಲಸಂಗಮದೇವಾ.

೧೮೩

ನಾನು ಆರಂಬವ ಮಾಡುವೆನಯ್ಯಾ ಗುರುಪೂಜೆಗೆಂದು,
ನಾನು ಬೆವಹಾರವ ಮಾಡುವೆನಯ್ಯಾ ಲಿಂಗಾರ್ಚನೆಗೆಂದು,
ನಾನು ಪರಸೇವೆಯ ಮಾಡುವೆನಯ್ಯಾ ಜಂಗಮ ದಾಸೋಹಕ್ಕೆಂದು.
ನಾನಾವಾವ ಕರ್ಮಂಗಳ ಮಾಡಿದರೆಯೂ
ಆ ಕರ್ಮಫಲಭೋಗವ ನೀ ಕೊಡುವೆಯೆಂಬುದ ನಾನು ಬಲ್ಲೆನು.
ನೀ ಕೊಟ್ಟ ದ್ರವ್ಯವ ನಿಮಗಲ್ಲದೆ ಮತ್ತೊಂದು ಕ್ರೀಯ ಮಾಡೆನು.
ನಿಮ್ಮ ಸೊಮ್ಮಿಂಗೆ ಸಲಿಸುವೆನು, ನಿಮ್ಮಾಣೆ!
ಕೂಡಲಸಂಗಮದೇವಾ.

೧೮೪

ಮಾಡುವ ನೀಡುವ ಭಕ್ತನ ಕಂಡರೆ,
ನಿಧಿನಿಧಾನವ ಕಂಡಂತಾಯಿತ್ತು.
ಪಾದೋದಕ ಪ್ರಸಾದಜೀವಿಯ ಕಂಡರೆ,
ಹೋದ ಪ್ರಾಣ ಬಂದಂತಾಯಿತ್ತು.
ಅನ್ಯರ ಮನೆಗೆ ಹೋಗಿ ತನ್ನುದರವ ಹೊರೆಯದ
ಅಚ್ಚ ಶರಣರ ಕಂಡರೆ,
ನಿಶ್ಚಯವಾಗಿ ಕೂಡಲಸಂಗಯ್ಯನೆಂಬೆನು.

೧೮೫

ನುಡಿಯಲ್ಲಿ ಎಚ್ಚತ್ತು ನಡೆಯಲ್ಲಿ ತಪ್ಪಿದರೆ
ಹಿಡಿದಿರ್ದ ಲಿಂಗವು ಘಟಸರ್ಪನಂತೆ!
ನುಡಿಯಲು ಬಾರದು, ನಡೆಯಲು ಬಾರದು,
ಲಿಂಗದೇವನೆ ದಿಬ್ಯವೊ !
ಅಯ್ಯಾ, ಬಡವನ ಕೋಪ ಅವುಡಿಗೆ ಮೃತ್ಯುವಾದಂತೆ
ಕಡೆದಾಂಟದು, ಕಾಣಾ, ಕೂಡಲಸಂಗಮದೇವಾ.

೧೮೬

ನುಡಿದರೆ ಮುತ್ತಿನ ಹಾರದಂತಿರಬೇಕು;
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು;
ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು;
ನುಡಿದರೆ ಲಿಂಗ ಮೆಚ್ಚಿ 'ಅಹುದಹುದೆ'ನಬೇಕು.
ನುಡಿಯೊಳಗಾಗಿ ನಡೆಯದಿದ್ದರೆ
ಕೂಡಲಸಂಗಮದೇವನೆಂತೊಲಿಹನಯ್ಯಾ?

೧೮೭

ಮಾರಿ–ಮಸಣಿಯೆಂಬುವು ಬೇಱಿಲ್ಲ ಕಾಣಿರೋ !
ಮಾರಿಯೆಂಬುದೇನು ?
ಕಂಗಳು ತಪ್ಪಿ ನೋಡಿದರೆ ಮಾರಿ, ನಾಲಗೆ ತಪ್ಪಿ ನುಡಿದರೆ ಮಾರಿ,
ನಮ್ಮ ಕೂಡಲಸಂಗಮದೇವರ ನೆನಹ ಮಱೆದರೆ ಮಾರಿ !

೧೮೮

ಸ್ವಾಮಿ–ಭೃತ್ಯ ಸಂಬಂಧಕ್ಕೆ ಆವುದು ಪದವೆಂದರೆ :
ದಿಟವ ನುಡಿವುದು, ನುಡಿದಂತೆ ನಡೆವುದು.
ನುಡಿದು ಹುಸಿವ, ನಡೆದು ತಪ್ಪುವ ಪ್ರಪಂಚಿಯನೊಲ್ಲ,
ಕೂಡಲಸಂಗಮದೇವ.

೧೮೯

ಮಾತಿಲ್ಲ, ನುಡಿಯಿಲ್ಲ, ಏತಕ್ಕೆ ಮುನಿವಿರಿ ?
ಮಾತಾಡಿದರೆ ಕೆಯ್ಯ ಬೆಳಸೆಂಬುದನಱಿಯಿರೆ, ಅಯ್ಯಾ ?
ಮಾತು ಕೆಟ್ಟಲ್ಲದೆ ತಾನಾಗಬಾರದು.
ಕೂಡಲಸಂಗಮದೇವಯ್ಯಾ, ಮಾತಿಂದ ಬರ್ಕು ಭವಭಾರ ಘೋರ !

೧೯೦

ಸಂಚುವಿಲ್ಲದ ಭಕ್ತಿ, ವಂಚನೆಯಿಲ್ಲದ ಮಹಂತನ ತೋಱಾ !
ತನುಶುಚಿಗಳ ಮನಶುಚಿಗಳ ತೋಱಾ !
ಇಂತಪ್ಪ ಶಿವಲಿಂಗೈಕ್ಯರ ತೋಱಿ ಬದುಕಿಸು,
ಕೂಡಲಸಂಗಮದೇವಾ.

೧೯೧

ಮಾಡುವಲ್ಲಿ ಎನ್ನ ನಾನಱಿದು ಮಾಡಿದೆನಾದಡೆ,
ನೀಡುವಲ್ಲಿ ಎನ್ನ ನಾನಱಿದು ನೀಡಿದೆನಾದಡೆ,
ನೀಡುವಲ್ಲಿ ರುಚಿಗೆ ಮನವೆಳಸಿ ಹಾರೈಸಿದೆನಾದಡೆ,
ನಿಮಗಂದೇ ದ್ರೋಹವಯ್ಯಾ.
ಮಾಡುವಲ್ಲಿ ನೀಡುವಲ್ಲಿ ಶುದ್ಧನಿಲ್ಲದಿರ್ದಡೆ
ನೀನಂದೆ ಮೂಗ ಕೊಯಿ, ಕೂಡಲಸಂಗಮದೇವಾ.

೧೯೨

ಭಕ್ತನು ಶಾಂತನಾಗಿರಬೇಕು :
ತನ್ನ ಕುರಿತು ಬಂದ ಠಾವಿನಲಿ ಸತ್ಯನಾಗಿರಬೇಕು;
ಭೂತಹಿತವಚನವ ನುಡಿಯಬೇಕು;
ಲಿಂಗಜಂಗಮದಲ್ಲಿ ಕುಂದುನಿಂದೆಗಳಿಲ್ಲದಿರಬೇಕು;
ಸಕಲಪ್ರಾಣಿಗಳ ತನ್ನಂತೆ ಭಾವಿಸಬೇಕು;
ತನು–ಮನ–ಧನ ಗುರುಲಿಂಗಜಂಗಮಕ್ಕೆ ಸಮರ್ಪಿಸಬೇಕು;
ಅಪಾತ್ರದಾನ ಗೆಯ್ಯದಿರಬೇಕು;
ಸಕಲ ಇಂದ್ರಿಯಂಗಳೂ ತನ್ನ ವಶಗತವಾಗಿರಬೇಕು :
ಇದೇ ಮೊದಲಲ್ಲಿ ಬೇಹ ಶೌಚ, ನೋಡಾ :
ಲಿಂಗವ ಪೂಜಿಸಿ ಪ್ರಸಾದವ ಪಡೆವಡೆ ಎನಗಿದೆ ಸಾಧನವು ನೋಡಾ,
ಕೂಡಲಸಂಗಮದೇವಾ.

೧೯೩

ದೇವಲೋಕ ಮರ್ತ್ಯಲೋಕವೆಂಬುದು ಬೇಱೆ ಮತ್ತುಂಟೆ ?
ಈ ಲೋಕದೊಳಗೇ ಮತ್ತೆ ಅನಂತಲೋಕ :
ಶಿವಲೋಕ ಶಿವಾಚಾರವಯ್ಯಾ,
ಭಕ್ತನಿರ್ದ ಟಾವೇ ದೇವಲೋಕ,
ಭಕ್ತನಂಗಳವೇ ವಾರಣಾಸಿ, ಕಾಯಕವೇ ಕೈಲಾಸ !
ಇದು ಸತ್ಯ, ಕೂಡಲಸಂಗಮದೇವಾ.

೧೯೪

ದೇವಲೋಕ ಮರ್ತ್ಯಲೋಕವೆಂಬುದು ಬೇಱಿಲ್ಲ ಕಾಣಿಭೋ !
ಸತ್ಯವ ನುಡಿವುದೇ ದೇವಲೋಕ, ಮಿಥ್ಯವ ನುಡಿವುದೇ ಮರ್ತ್ಯಲೋಕ !
ಆಚಾರವೇ ಸ್ವರ್ಗ, ಅನಾಚಾರವೇ ನರಕ—
ಕೂಡಲಸಂಗಮದೇವಾ, ನೀವೇ ಪ್ರಮಾಣು.

೧೯೫

ನಡೆ ಚೆನ್ನ, ನುಡಿ ಚೆನ್ನ, ಎಲ್ಲಿ ನೋಡಿದಡೆ ಚೆನ್ನ !
ಪ್ರಮಥರೊಳಗೆ ಚೆನ್ನ, ಪುರಾತರೊಳಗೆ ಚೆನ್ನ !
ಸವಿನೋಡಿ ಅಂಬಲಿಯ, ರುಚಿಯಾಯಿತ್ತೆಂದು,
ಕೂಡಲಸಂಗಮದೇವಂಗೆ ಬೇಕೆಂದು ಕೈದೆಗೆದ ನಮ್ಮ ಚೆನ್ನ !

೭

ಕುಲ–ಶೀಲ

೧೯೬

ಕೊಲುವನೇ ಮಾದಿಗ, ಹೊಲಸ ತಿಂಬವನೇ ಹೊಲೆಯ!
ಕುಲವೇನೋ, ಅವಂದಿರ ಕುಲವೇನೋ?
ಸಕಲಜೀವಾತ್ಮರಿಗೆ ಲೇಸನೇ ಬಯಸುವ
ನಮ್ಮ ಕೂಡಲಸಂಗನ ಶರಣರೇ ಕುಲಜರು.

೧೯೭

ಅಪ್ಪನು ನಮ್ಮ ಮಾದರ ಚೆನ್ನಯ್ಯ;
ಬೊಪ್ಪನು ನಮ್ಮ ಡೋಹರ ಕಕ್ಕಯ್ಯ;
ಚಿಕ್ಕಯ್ಯನೆಮ್ಮಯ್ಯ, ಕಾಣಯ್ಯಾ;
ಅಣ್ಣನು ನಮ್ಮ ಕಿನ್ನರ ಬೊಮ್ಮಯ್ಯ:
ಎನ್ನನೇತಕ್ಕಱಿಯರಿ, ಕೂಡಲಸಂಗಯ್ಯಾ?

೧೯೮

ಹೊಲೆಯುಂಟೇ ಲಿಂಗವಿದ್ದೆಡೆಯಲ್ಲಿ?
ಕುಲವುಂಟೇ ಜಂಗಮವಿದ್ದೆಡೆಯಲ್ಲಿ?
ಎಂಜಲುಂಟೇ ಪ್ರಸಾದವಿದ್ದೆಡೆಯಲ್ಲಿ?
ಅಪವಿತ್ರ ನುಡಿಯ ನುಡಿವ ಸೂತಕವೇ ಪಾತಕ!
ನಿಷ್ಕಳ, ನಿಜೈಕ್ಯ, ತ್ರಿವಿಧನಿರ್ಣಯ,
ಕೂಡಲಸಂಗಮದೇವಾ, ನಿಮ್ಮ ಶರಣರಿಗಲ್ಲದಿಲ್ಲ.

೧೯೯

ಶ್ವಪಚನಾದರೇನು ಲಿಂಗಭಕ್ತನೇ ಕುಲಜನು.
ನಂಬಿ ನಂಬದಿದ್ದರೆ ಸಂದೇಹಿ ನೋಡಾ!
ಕಟ್ಟಿದರೇನು, ಮುಟ್ಟಿದರೇನು, ಹೂಸಿದರೇನು ಮನಮುಟ್ಟದನ್ನಕ್ಕ?
ಭಾವಶುದ್ಧವಿಲ್ಲದನಂಗೆ ಭಕ್ತಿ ನೆಲೆಗೊಳ್ಳದು,
ಕೂಡಲಸಂಗಯ್ಯನೊಲಿದಂಗಲ್ಲದೆ.

೨೦೦

ದೇವಸಹಿತ ಭಕ್ತ ಮನೆಗೆ ಬಂದರೆ 'ಕಾಯಕವಾವುದೆ'ಂದು
ಬೆಸಗೊಂಡೆನಾದರೆ, ನಿಮ್ಮಾಣೆ, ನಿಮ್ಮ ಪುರಾತರಾಣೆ!
ತಲೆದಂಡ, ತಲೆದಂಡ! ಕೂಡಲಸಂಗಮದೇವಾ,
ಭಕ್ತರ ಕುಲವನಱಿಸಿದರೆ ನಿಮ್ಮ ರಾಣಿವಾಸದಾಣೆ!

೨೦೧

ದಾಸೀಪುತ್ರನಾಗಲಿ, ವೇಶ್ಯಾಪುತ್ರನಾಗಲಿ:
ಶಿವದೀಕ್ಷೆಯಾದ ಬಳಿಕ ಸಾಕ್ಷಾತು ಶಿವನೆಂದು ವಂದಿಸಿ, ಪೂಜಿಸಿ,
ಪಾದೋದಕ ಪ್ರಸಾದವ ಕೊಂಬುದೆ ಯೋಗ್ಯ.
ಹೀಗಲ್ಲದೆ ಉದಾಸೀನವ ಮಾಡಿ ಬಿಡುವವರಿಗೆ
ಪಂಚಮಹಾಪಾತಕ ನರಕ, ಕಾಣಾ, ಕೂಡಲಸಂಗಮದೇವಾ.

೨೦೨

ಗಂಡ ಶಿವಲಿಂಗದೇವರ ಭಕ್ತ; ಹೆಂಡಿತಿ ಮಾರಿ-ಮಸಣಿಯ ಭಕ್ತೆ!
ಗಂಡ ಕೊಂಬುದು ಪಾದೋದಕಪ್ರಸಾದ; ಹೆಂಡಿತಿ ಕೊಂಬುದು ಸುರೆ-ಮಾಂಸ!
ಭಾಂಡಭಾಜನಶುದ್ಧವಿಲ್ಲದವರ ಭಕ್ತಿ
ಹೆಂಡದ ಮಡಿಕೆಯ ಹೊಱಗೆ ತೊಳೆದಂತೆ, ಕೂಡಲಸಂಗಮದೇವಾ.

೨೦೩

ಒಡೆಯರಿಲ್ಲದ ಮನೆಯ ತುಡುಗುಣಿನಾಯಿ ಹೊಗುವಂತೆ
ನೀವಿಲ್ಲದವರ ಮನೆಯ ಹೊಗೆನು, ಸಂಗಯ್ಯಾ.
ಶ್ವಪಚೋಪಿಗಳಾಗಲಿ, ಕೂಡಲಸಂಗಯ್ಯಾ, ನೀವಿದ್ದವನೇ ಕುಲಜನು.

೨೦೪

ಉಂಬಲ್ಲಿ ಉಡುವಲ್ಲಿ ಕ್ರೀಯಳಿಯಿತೆಂಬರು :
ಕೊಂಬಲ್ಲಿ, ಕೊಳುವಲ್ಲಿ ಕುಲವನಱಸುವರು.
ಎಂತಯ್ಯಾ, ಅವರ ಭಕ್ತರೆಂಬೆ ?
ಕೂಡಲಸಂಗಮದೇವಾ, ಕೇಳಯ್ಯಾ,
ಹೊಲತಿ ಶುದ್ಧನೀರ ಮಿಂದಂತಾಯಿತ್ತಯ್ಯಾ.

೨೦೫

ಉತ್ತಮಕುಲದಲ್ಲಿ ಹುಟ್ಟಿದೆನೆಂಬ ಕಷ್ಟತನದ ಹೊಱೆಯ ಹೊಱಿಸದಿರಯ್ಯಾ:
ಕಕ್ಕಯ್ಯನೊಕ್ಕುದನಿಕ್ಕ, ನೋಡಯ್ಯಾ;
ದಾಸಯ್ಯ ಶಿವದಾನವನೆಱೆಯ, ನೋಡಯ್ಯಾ;
ಮನ್ನಣೆಯ ಚೆನ್ನಯ್ಯನೆನ್ನುವನು ಮನ್ನಿಸ.
ಉನ್ನತಮಹಿಮಾ, ಕೂಡಲಸಂಗಮದೇವಾ, ಶಿವಧೋ! ಶಿವಧೋ!

೨೦೬

ಅಪ್ಪನು ಡೋಹರ ಕಕ್ಕಯ್ಯನಾಗಿ, ಮುತ್ತಯ್ಯ ಚೆನ್ನಯ್ಯನಾದರೆ,
ಆನು ಬದುಕೆನೆ ? ಮತ್ತಾ ಶ್ವಪಚಯ್ಯನ ಸನ್ನಿಧಿಯಿಂದೆ
ಭಕ್ತಿಯ ಸದ್ಗುಣವನಾನಱವೆನಯ್ಯಾ.
ಕಷ್ಟಜಾತಿಯ ಜನ್ಮದಲಿ ಜನಿಸಿದೆ,
ಎನಗಿದು ವಿಧಿಯೇ ಕೂಡಲಶಂಗಮದೇವಾ ?

೨೦೭

ಹೊಲೆಯ ಹೊಲಬಿಗನಾದರೆ, ಅವನ ಹೊರೆಯಲಿಪ್ಪುದು ಲೇಸು ಕಂಡಯ್ಯಾ.
ಹೊಲಬುಗೆಡದೆ ‘ ಲಿಂಗ ಶರಣೆ ’ನ್ನಿರಯ್ಯಾ;
ಹೊಲಬುಗೆಡಬೇಡ : ‘ ಲಿಂಗ ಶರಣೆ ’ನ್ನಿರಯ್ಯಾ. ’
ನಮ್ಮ ಕೂಡಲಸಂಗನ ಮಹಾಮನೆಯಲು
ಮಾದರ ಚೆನ್ನಯ್ಯ ಹೊಲಬಿಗನಯ್ಯಾ.

೮

ಕರ್ಮಠತನ - ಡಂಭಾಚಾರ

೨೦೮

ನೀರ ಕಂಡಲ್ಲಿ ಮುಳುಗುವರಯ್ಯಾ,
ಮರನ ಕಂಡಲ್ಲಿ ಸುತ್ತುವರಯ್ಯಾ:
ಬತ್ತುವ ಜಲವನೊಣಗುವ ಮರನ
ನಚ್ಚಿದವರು ನಿಮ್ಮನೆತ್ತ ಬಲ್ಲರು,
ಕೂಡಲಸಂಗಮದೇವಾ ?

೨೦೯

ಮೊಂಬುಲಿಗನ ಹಕ್ಕಿಯಂತೆ ನೀರ ತಡಿಯಲ್ಲಿದ್ದು
ಮೂಗ ಹಿಡಿದು ಧ್ಯಾನವ ಮಾಡುವರಯ್ಯಾ;
ಬಿಟ್ಟ ಮಂಡೆವೆರಸಿ ಬಾಯ ಮಿಡುಕಿಸುತ
ಕಣ್ಣ ಮುಚ್ಚಿ ಬೆರಳನೆಣಿಸುವರಯ್ಯಾ—
ನಿಮ್ಮ ಕೈಯಲ್ಲಿ ಕಟ್ಟಿದ ದರ್ಭೆಯ ಹುಲ್ಲು
ಕೂಡಲಸಂಗನನಱಿಯದೆ ನೊಱೆಯಿಡುವಂತೆ !

೨೧೦

ಹೇಡಿ ಬಿರುದ ಕಟ್ಟಿದರೆ ಕಲಿಯಪ್ಪನೆ ?
ಒರೆಯ ಬಿಚ್ಚಿಱಿಯದಿರ್ದೊಡೆ ಲೋಕ ಮೆಚ್ಚುವುದೆ ?
ಚಲ್ಲಣವನುಟ್ಟು, ಗರುಡಿಯ ಕಟ್ಟಿ, ಸಾಧನೆಯ ಮಾಡುವನಂತೆ
ತನ್ನ ತಪ್ಪಿಸಿಕೊಂಡೊಡೆ ಶಿವನು ಮೆಚ್ಚುವನೆ ?
ಅಱಿಯದವರಿಗೆ ಒಳ್ಳೆ ಹೆಡೆಯೆತ್ತಿ ತೋಱಿದಂತೆ
ಬೊಳ್ಳೆಗನ ಭಕ್ತಿ ಕೂಡಲಸಂಗಮದೇವಾ.

೨೧೧

ಹಲವು ಕಾಲ ಹಂಸನ ಸಂಗವಿದ್ದರೇನೋ,
ಬಕ ಶುಚಿಯಾಗಬಲ್ಲುದೆ?
ಕಲ್ಪತರುವಿನ ಸಂಗವಿದ್ದರೇನೋ,
ಕೊರಡು ಕೊನರಾಗಿ ಫಲಿಸಬಲ್ಲುದೆ?
ಗಂಗಾನದಿಯೊಳಗೆ ಪಾಷಾಣವಿದ್ದರೇನೋ,
ಮೃದುವಾಗಬಲ್ಲುದೆ?
ಕಾಶೀಕ್ಷೇತ್ರದಲ್ಲಿ ಶುನಕವಿದ್ದರೇನೋ,
ಅದಱ ಕ್ಷೀರ ಪಂಚಾಮೃತಕ್ಕೆ ಸಲುವುದೆ?
ತೀರ್ಥದಲ್ಲಿ ಗಾರ್ದಭವಿದ್ದರೇನೋ,
ಕಾರಣಿಕನಾಗಬಲ್ಲುದೆ?
ಖಂಡುಗ ಹಾಲೊಳಗೆ ಒಂದು ಇದ್ದಲಿ ಇದ್ದರೇನೋ,
ಬಿಳುಪಾಗಬಲ್ಲುದೆ?
ಕೂಡಲಸಂಗಮದೇವಾ, ನಿಮ್ಮ ಶರಣರ ಸಂಗವಿದ್ದರೇನೋ,
ಅಸಜ್ಜನನು ಸದ್ಭಕ್ತನಾಗಬಲ್ಲನೆ?

೨೧೨

ಮಾತಿನ ಮಾತಿಂಗೆ ನಿನ್ನ ಕೊಂದಹರೆಂದು
ಎಲೆ ಹೋತೇ, ಅಳು, ಕಂಡಾ!
ವೇದವನೋದಿದವರ ಮುಂದೆ ಅಳು, ಕಂಡಾ!
ಶಾಸ್ತ್ರವ ಕೇಳಿದವರ ಮುಂದೆ ಅಳು, ಕಂಡಾ!
ನೀನತ್ತುದಕ್ಕೆ ತಕ್ಕುದ ಮಾಡುವ,
ಕೂಡಲಸಂಗಮದೇವ.

೨೧೩

ಹಲವು ಮಣಿಯ ಕಟ್ಟಿ ಕುಣಿಕುಣಿದಾಡಿ,
ಹಲವು ಪರಿಯಲಿ ವಿಭೂತಿಯು ಹೂಸಿ,
ಗಣಾಡಂಬರದ ನಡುವೆ ನಲಿನಲಿದಾಡಿ,
ಉಂಡು, ತಾಂಬೂಲಗೊಂಡು, ಹೋಹುದಲ್ಲಾ !
ತನು–ಮನ–ಧನವ ಸಮರ್ಪಿಸದವರ
ಕೂಡಲಸಂಗಮದೇವರೆಂತೊಲಿವನಯ್ಯಾ ?

೨೧೪

ಹತ್ತು ಸಾವಿರ ಗೀತವ ಹಾಡಿ ಅರ್ಥವಿಟ್ಟಲ್ಲಿ ಫಲವೇನು,
ಮುಟ್ಟುವ ತೆಱನನಱಿಯದನ್ನಕ್ಕ ?
ಕಟ್ಟಿದರೇನು ಬಿಟ್ಟರೇನು, ಮನವು ಲಿಂಗದಲ್ಲಿ ಮುಟ್ಟದನ್ನಕ್ಕ ?
ಮಾತಿನ ಮಾತಿನಲೆ ಒಲಿಸಿ, ಮಹತ್ತಪ್ಪ ಲಿಂಗವ ಕಂಡಹೆನೆಂಬ
ಪಾತಕರ ಮೆಚ್ಚ, ನಮ್ಮ ಕೂಡಲಸಂಗಮದೇವ.

೨೧೫

ನಾಲಗೆ ತಾಗಿದ ರುಚಿಗೆ ಮನವೇ ಸಾಕ್ಷಿ, ಸಾಲದೇ ಅಯ್ಯಾ ?
ನಾಲೆಗಾಱನ ಕೇಳಿ ನನೆ ಅರಳುವುದೆ ?
ಆಗಮುವನಿದಿರಿಂಗೆ ತೋಱುವುದು ಆಚಾರವೇ, ಅಯ್ಯಾ ?
ನಮ್ಮ ಕೂಡಲಸಂಗನ ಕೂಡಿದ ಕೂಟದ ಕರುಳ ಕಲೆಯನು
ಇದಿರಿಂಗೆ ತೋಱುವುದು ಆಚಾರವೇ, ಅಯ್ಯಾ ?

೨೧೬

ದ್ವೈತಾದ್ವೈತವನೋದಿ ಏನು ಮಾಡುವಿರಯ್ಯಾ,
ನಮ್ಮ ಶರಣರಿಗುರಿಗರಗಾಗಿ ಕರಗದನ್ನಕ್ಕ ?
ಸ್ಥಾವರ–ಜಂಗಮವೊಂದೆ ಎಂದು ನಂಬದನ್ನಕ್ಕ ?
ಕೂಡಲಸಂಗಮದೇವಾ,
ಬಱಿಯ ಮಾತಿನ ಮಾಲೆಯಲೇನಹುದು ?

೨೧೭

ಕಲ್ಲ ನಾಗರ ಕಂಡರೆ ಹಾಲನೆಱೆಯೆಂಬರು,
ದಿಟದ ನಾಗರ ಕಂಡರೆ ಕೊಲ್ಲೆಂಬರಯ್ಯಾ !
ಉಂಬ ಜಂಗಮ ಬಂದರೆ ನಡೆಯೆಂಬರು,
ಉಣ್ಣದ ಲಿಂಗಕ್ಕೆ ಬೋನವ ಹಿಡಿಯೆಂಬರಯ್ಯಾ !
ನಮ್ಮ ಕೂಡಲಸಂಗನ ಶರಣರ ಕಂಡುದಾಸೀನವ ಮಾಡಿದರೆ
ಕಲ್ಲು ತಾಗಿದ ಮಿಟ್ಟೆಯಂತಪ್ಪರಯ್ಯಾ.

೨೧೮

ಕಣ್ಣ ಮುಚ್ಚಿ ಕನ್ನಡಿಯ ತೋಱುವಂತೆ,
ಇರುಳುಹಗಲಿನ ನಿದ್ರೆ ಸಾಲದೆ
ಬೆರಳನೆಣಿಸಿ ಪರಮಾರ್ಥವ ಹಡೆವರೆ, ಚೋದ್ಯವಲ್ಲವೆ ? ಹೇಳಾ.
ಮೂಗ ಮುಚ್ಚಿ ಮುಕ್ತಿಯ ಬಯಸುವ
ನಾಚಿಕೆಯಿಲ್ಲದವರ ನಾನೇನೆಂಬೆ,
ಕೂಡಲಸಂಗಮದೇವಾ ?

೨೧೯

ಒಡೆತ್ತ ಬಲ್ಲುದು ಅವಲಕ್ಕಿಯ ಸವಿಯ ?
ಕೋಡಗ ಬಲ್ಲುದೆ ಸೆಳೆಮಂಚದ ಸುಖವ ?
ಕಾಗೆ ನಂದನಬನದೊಳಗಿರ್ದರೇನು, ಕೋಗಿಲೆಯಾಗಬಲ್ಲುದೇ ? ಹೇಳಾ.
ಕೊಳನ ತಡಿಯಲ್ಲೊಂದು ಹೊಱಸು ಕುಳ್ಳಿರ್ದರೇನು,
ಗಳಹಂಸೆಯಾಗಬಲ್ಲುದೆ, ಕೂಡಲಸಂಗಮದೇವಾ ?

೨೨೦

ಆಡಿದರೇನೊ, ಹಾಡಿದರೇನೊ, ಓದಿದರೇನೊ—
ತ್ರಿವಿಧ ದಾಸೋಹವಿಲ್ಲದನ್ನಕ್ಕ ?
ಆಡದೆ ನವಿಲು ? ಹಾಡದೆ ತಂತಿ ? ಓದದೆ ಗಿಳಿ ?
ಭಕ್ತಿಯಿಲ್ಲದವರನೊಲ್ಲ ಕೂಡಲಸಂಗಮದೇವ.

೨೨೧

ಅಳಿಯುತ್ತ ಅಳಿಯುತ್ತ ಬಳಲುವರಲ್ಲದೆ, ಕೊಳಗ ಬಳಲುವುದೆ ?
ನಡೆಯುತ್ತ ನಡೆಯುತ್ತ ಬಳಲುವರಲ್ಲದೆ, ಬಟ್ಟೆ ಬಳಲುವುದೆ ?
ಶ್ರವವ ಮಾಡುತ್ತ ಮಾಡುತ್ತ ಬಳಲುವರಲ್ಲದೆ, ಕೋಲು ಬಳಲುವುದೆ ?
ನಿಜವನಱಿಯದ ಭಕ್ತ ಬಳಲುವನಲ್ಲದೆ, ಲಿಂಗ ಬಳಲುವುದೆ ?
ಕೂಡಲಸಂಗಮದೇವಾ, ಅರಸಱಿಯದ ಬಿಟ್ಟಿಯೊ !

೨೨೨

ತನುವ ನೋಯಿಸಿ, ಮನವ ನೋಯಿಸಿ,
ನಿಮ್ಮ ಪಾದವಿಡಿದವರೊಳರೆ ?
ಈ ನುಡಿ ಸುಡದಿಹುದೇ ? ಕೂಡಲಸಂಗಮದೇವಾ,
ಶಿವಭಕ್ತರ ನೋವೇ ಅದು ಲಿಂಗದ ನೋವು !

೨೨೩

ಆಯುಧವಿಕ್ಕಿದವಂಗೆ ವೀರದ ಮಾತೇಕೆ ?
ಲಿಂಗವನಂತರಿಸಿದವಂಗೆ ಒಳನುಡಿಯೇಕೆ ?
ಅಯಿದೆ-ಅಣಚೆಯಿಲ್ಲದವಳಿಗೆ ಸೌಭಾಗ್ಯದ ಹೂವಿನ ಬೊಟ್ಟೇಕೆ ?
ಸತ್ಯನಲ್ಲದವಂಗೆ ನಿತ್ಯನೇಮವೇಕೆ ?
ಕರ್ತಾರ, ನಿಮ್ಮ ಒಲವಿಲ್ಲದವಂಗೆ ಶಂಭುವಿನ ಬಂಧುಗಳೇಕೆ ?
ಕೂಡಲಸಂಗಮದೇವಯ್ಯಾ,
ನೀವಿಲ್ಲದವಂಗೆ ಶಿವಾಚಾರದ ಮಾತೇಕೆ ?

೨೨೪

ತನು–ಮನ–ಧನವ ಹಿಂದಿಕ್ಕಿಕೊಂಡು, ಮಾತಿನ ಬಣಬೆಯ,
ಒಳಲೊಟ್ಟೆಯ ನುಡಿವರೂ ನೀವೆಲ್ಲಾ ಕೇಳಿರೇ :
ತಲಹಿಲ್ಲದ ಕೋಲು ಹೊಳ್ಳು ಹಾರುವುದಲ್ಲದೆ ಗುರಿಯ ತಾಗಬಲ್ಲುದೆ ?
ಮಾಯಾಪಾಶ ಹಿಂಗಿ ಮನದ ಗಂಟು ಬಿಡದನ್ನಕ್ಕ
ಕೂಡಲಸಂಗಮದೇವನೆಂತೊಲಿವನಯ್ಯಾ ?

೨೨೫

ಆನೆಯನೇಱಿಕೊಂಡು ಹೋದಿರೆ ನೀವು,
ಕುದುರೆಯನೇಱಿಕೊಂಡು ಹೋದಿರೆ ನೀವು,
ಕುಂಕುಮ ಕಸ್ತೂರಿಯ ಪೂಸಿಕೊಂಡು ಹೋದಿರೆ, ಅಣ್ಣಾ !
ಸತ್ಯದ ನಿಲವನಱಿಯದೆ ಹೋದಿರಲ್ಲಾ !
ಸದ್ಗುಣವೆಂಬ ಫಲವ ಬಿತ್ತಿ ಬೆಳೆಯದೆ ಹೋದಿರಲ್ಲಾ !
ಅಹಂಕಾರವೆಂಬಸದ ಮದಗಜವೇಱಿ
ವಿಧಿಗೆ ಗುಱಿಯಾಗಿ ನೀವು ಹೋದಿರಲ್ಲಾ !
ನಮ್ಮ ಕೂಡಲಸಂಗಮದೇವರನಱಿಯದೆ ನರಕಕ್ಕೆ ಭಾಜನವಾದಿರಲ್ಲಾ !

೧೧೬

ಉಟ್ಟು ತೊಟ್ಟು ಪೂಜ್ಯನಾಗಿ ಬಂದ ಜಂಗಮ ವಿಶೇಷವೆಂದು,
ಕಂತೆಬೊಂತೆಯ ಜಂಗಮ ಬಂದರೆ ಹೀನವೆಂದು
ಕಂಡೆನಾದರೆ ಪಂಚಮಹಾಪಾತಕ.
ಇದುಕಾರಣ : ಅನ್ನ–ವಸ್ತ್ರ–ಧನವಾಟದಲ್ಲಿ
ಎರಡಾಗಿ ಕಂಡರೆ ನರಕದಲ್ಲಿಕ್ಕುವ
ಕೂಡಲಸಂಗಮದೇವ.

೧೧೭

ಕುದುರೆ–ಸತ್ತಿಗೆಯವರ ಕಂಡರೆ ಹೊರಳಿ ಬಿದ್ದು ಕಾಲ ಹಿಡಿವರು;
ಬಡಭಕ್ತರು ಬಂದರೆ ‘ ಎಡೆಯಿಲ್ಲ, ಅತ್ತ ಸನ್ನಿ ’ ಎಂಬರು !
ಎನ್ನೊಡೆಯ ಕೂಡಲಸಂಗಯ್ಯನವರ ತಡಗೆಡಹಿ
ಮೂಗ ಕೊಯ್ಯದೆ ಮಾಣ್ಬನೆ ?

೬

ಲೋಕಾಚಾರವಿಡಂಬನೆ

೨೨೮

ಗಿಳಿಯೋದಿ ಫಲವೇನು? ಬೆಕ್ಕು ಬಹುದ ಹೇಳಲಱಿಯದು!
ಜಗವೆಲ್ಲ ಕಾಂಬ ಕಣ್ಣು ತನ್ನ ಕೊಂಬ ಕೊಯಿಲೆಯ ಕಾಣಲಱಿಯದು!
ಇದಿರ ಗುಣವ ಬಲ್ಲೆವೆಂಬರು :
ತಮ್ಮ ಗುಣವನಱಿಯರು,
ಕೂಡಲಸಂಗಮದೇವಾ.

೨೨೯

ಮಡಕೆ ದೈವ, ಮೊರ ದೈವ, ಬೀದಿಯ ಕಲ್ಲು ದೈವ,
ಹಣಿಗೆ ದೈವ, ಬಿಲ್ಲ ನಾರಿ ದೈವ, ಕಾಣಿರೋ!
ಕೊಳಗ ದೈವ, ಗಿಣ್ಣಿಲು ದೈವ, ಕಾಣಿರೋ!
ದೈವ, ದೈವವೆಂದು ಕಾಲಿಡಲಿಂಬಿಲ್ಲಾ!!
ದೈವನೊಬ್ಬನೆ ಕೂಡಲಸಂಗಮದೇವ.

೨೩೦

ಆವಾಗಲೂ ಲೋಗರ ಮನೆಯ ಬಾಗಿಲ ಕಾಯ್ದುಕೊಂಡಿಪ್ಪವು
ಕೆಲವು ದೈವಂಗಳು.
ಹೋಗೆಂದರೆ ಹೋಗವು, ನಾಯಿಯಿಂದ ಕರಕಷ್ಟ,
ಕೆಲವು ದೈವಂಗಳು.
ಲೋಗರ ಬೇಡಿಕೊಂಡುಂಬ ದೈವಂಗಳು ತಾವೇನ ಕೊಡುವವೋ,
ಕೂಡಲಸಂಗಮದೇವಾ.

೨೩೧

ಅರಗು ತಿಂದು ಕರಗುವ ದೈವವ,
ಉರಿಯ ಕಂಡರೆ ಮುರುಟುವ ದೈವವನೆಂತು ಸರಿಯೆಂಬೆನಯ್ಯಾ ?
ಅವಸರ ಬಂದರೆ ಮಾಱುವ ದೈವವನೆಂತು ಸರಿಯೆಂಬೆನಯ್ಯಾ ?
ಅಂಜಿಕೆಯಾದರೆ ಹೂಳುವ ದೈವವನೆಂತು ಸರಿಯೆಂಬೆನಯ್ಯಾ ?
ಸಹಜಭಾವ ನಿಜೈಕ್ಯ ಕೂಡಲಸಂಗಮದೇವನೊಬ್ಬನೇ ದೇವ.

೨೩೨

ಹಾವು ತಿಂದವರ ನುಡಿಸಬಹುದು,
ಗರ ಹೊಡೆದವರ ನುಡಿಸಬಹುದು :
ಸಿರಿಗರ ಹೊಡೆದವರ ನುಡಿಸಲು ಬಾರದು ನೋಡಯ್ಯಾ ;
ಬಡತನವೆಂಬ ಮಂತ್ರವಾದಿ ಹೊಗಲು ಒಡನೆ ನುಡಿವರು,
ಕೂಡಲಸಂಗಮದೇವಾ.

೨೩೩

ಜಂಗಮವಿಲ್ಲದ ಮಾಟ, ಕಂಗಳಿಲ್ಲದ ನೋಟ !
ಹಿಂಗಿತ್ತು ಶಿವಲೋಕ, ಇನ್ನೆಲ್ಲಿಯದಯ್ಯಾ ?
ಲಿಂಗಕ್ಕೆ ಮಾಡಿದ ಬೋನವ ಸಿಂಬಕ ತಿಂಬಂತೆ,
ಸಮಯೋಚಿತವನಱಿಯದೆ ಉದರವ ಹೊರೆವವರ
ನರಕದಲ್ಲಿಕ್ಕದೆ ಮಾಣ್ಬನೆ,
ಕೂಡಲಸಂಗಮದೇವ ?

೨೩೪

ಉಂಬಾಗಳಿಲ್ಲೆನ್ನ, ಉಡುವಾಗಳಿಲ್ಲೆನ್ನ,
ಬಂಧುಗಳು ಬಂದಾಗಳಿಲ್ಲೆನ್ನ;
ಲಿಂಗಕ್ಕೆ ಇಲ್ಲೆಂಬ, ಜಂಗಮಕ್ಕೆ ಇಲ್ಲೆಂಬ,
ಬಂದ ಪುರಾತರಿಗೆ ಇಲ್ಲೆಂಬ!
ಸಾವಾಗ ದೇಹವ ದೇಗುಲಕ್ಕೊಯ್ಯೆಂಬ:
ದೇವರಿಗೆ ಹೆಣ ಬಿಟ್ಟಿ ಹೇಳಿತ್ತೆ,
ಕೂಡಲಸಂಗಮದೇವಾ?

೨೩೫

ಹೊತ್ತಾಱೆ ಎದ್ದು ಲಿಂಗದೇವನ ದೃಷ್ಟಿಯಾರೆ ನೋಡದವನ
ಸಂಸಾರವೇನವನ?
ಬಾಳುವೆಣನ ಬೀಳುವೆಣನ ಸಂಸಾರವೇನವನ?
ನಡೆವೆಣನ ನುಡಿವೆಣನ ಸಂಸಾರವೇನವನ?
ಕರ್ತೃ ಕೂಡಲಸಂಗಮದೇವಾ,
ನಿಮ್ಮ ತೊತ್ತುಗೆಲಸವ ಮಾಡದವನ ಸಂಸಾರವೇನವನ?

೨೩೬

ಉಂಡುದು ಬಂದಿತ್ತೆಂಬ ಸಂದೇಹಿ ಮಾನವಾ, ನೀ ಕೇಳಾ,
ಉಂಡುದೇನಾಯಿತ್ತೆಂಬುದ ನಿನ್ನ ನೀ ತಿಳಿದು ನೋಡಾ:
ಉಂಡುದು ಆಗಳೆ ಆಪ್ಯಾಯನವಾಯಿತ್ತು.
ಆವುಂಡುದನುಣಬಂದ ಹಂದಿಯ ಬಾಳುವೆಯವರ ಕಂಡು
ಆನು ಮಱುಗುವೆನಯ್ಯಾ, ಕೂಡಲಸಂಗಮದೇವಾ.

೨೩೭

ಏತ ತಲೆವಾಗಿದರೇನು, ಗುರುಭಕ್ತನಾಗಬಲ್ಲುದೆ?
ಇಕ್ಕುಳ ಕೈಮುಗಿದರೇನು, ಭೃತ್ಯಾಚಾರಿಯಾಗಬಲ್ಲುದೆ?
ಗಿಳಿಯೋದಿದರೇನು, ಲಿಂಗವೇದಿಯಾಗಬಲ್ಲುದೆ?
ಕೂಡಲಸಂಗನ ಶರಣರು ಬಂದ ಬರವ, ನಿಂದ ನಿಲವ
ಅನಂಗಸಂಗಿಗಳೆತ್ತ ಬಲ್ಲರು?

೨೩೮

ಆಯುಷ್ಯವುಂಟು, ಪ್ರಳಯವಿಲ್ಲೆಂದು ಅರ್ಥವ ಮಡುಗುವಿರಿ :
ಆಯುಷ್ಯವು ತೀರಿ, ಪ್ರಳಯವು ಬಂದರೆ ಅರ್ಥವನುಂಬವರಿಲ್ಲಾ.
ನೆಲನನಗಿದು ಮಡುಗದಿರಾ! ನೆಲ ನುಂಗಿದೊಡುಗುಳುವುದೆ?
ಕಣ್ಣಿನಲ್ಲಿ ನೋಡಿ, ಮಣ್ಣಿನಲ್ಲಿ ನೆರಹಿ, ಉಣ್ಣದೆ ಹೋಗದಿರಾ!
ನಿನ್ನ ಮಡದಿಗಿರಲೆಂದರೆ, ಮಡದಿಯ ಕೃತಕ ಬೇಱೆ:
ನಿನ್ನೊಡಲು ಕೆಡೆಯಲು ಮತ್ತೊಬ್ಬನಲ್ಲಿಗಡಕದೆ ಮಾಣ್ಬಳೆ?
ಹೆಱರಿಗಿಕ್ಕಿ ಹೆಗ್ಗುಱಿಯಾಗಿ ಕೆಡಬೇಡಾ!
ಕೂಡಲಸಂಗನ ಶರಣರಿಗೊಡನೆ ಸವೆಸುವುದು.

೨೩೯

ತಾಳಮರದ ಕೆಳಗೆ ಒಂದು ಹಾಲ ಹರವಿಯಿರ್ದೊಡೆ
ಅದ ಹಾಲ ಹರವಿಯೆನ್ನರು, ಸುರೆಯ ಹರವಿಯೆಂಬರು.
ಈ ಭಾವನಿಂದೆಯ ಮಾಣಿಸಾ, ಕೂಡಲಸಂಗಮದೇವಾ.

೨೪೦

ಎಲವದ ಮರ ಹೂತು ಫಲವಾದ ತೆಱನಂತೆ—
ಸಿರಿಯಾದರೇನು, ಶಿವಭಕ್ತಿಯಿಲ್ಲದನ್ನಕ್ಕ ?
ಫಲವಾದರೇನು, ಹಾವುಮೆಕ್ಕೆಯ ಕಾಯಿ ?
ಕುಲವಿಲ್ಲದ ರೂಹು ಎಲ್ಲಿದ್ದರೇನು ?
ಬಚ್ಚಲ ನೀರು ತಿಳಿದಲ್ಲಿ ಫಲವೇನು ?
ಅವಗುಣಿಗಳ ಮೆಚ್ಚ ಕೂಡಲಸಂಗಮದೇವ.

೨೪೧

ಮೊಱನ ಗೋಟಿಗೆ ಬರ್ಪ ಕಿರುಕುಳ ದೈವಕ್ಕೆ
ಕುಱಿಯನಿಕ್ಕಿಹೆವೆಂದು ನಲಿನಲಿದಾಡುವರು :
ಕುಱಿ ಸತ್ತು ಕಾವುದೆ ಹರ ಮುಳಿದವರ ?
ಕುಱಿ ಬೇಡ, ಮಱಿ ಬೇಡ :
ಬಱಿಯ ಪತ್ರೆಯ ತಂದು ಮಱೆಯದೆ ಪೂಜಿಸು
ನಮ್ಮ ಕೂಡಲಸಂಗಮದೇವನ.

೨೪೨

ಹರಸಿ ಮಾಡುವುದು ಹರಕೆಯ ದಂಡ ;
ನೆರಹಿ ಮಾಡುವುದು ಡಂಭಿನ ಭಕ್ತಿ.
ಹರಸಬೇಡ, ನೆರಹಬೇಡ,
ಬಂದ ಭರವನಱಿದರೆ ಕೂಡಿಕೊಂಡಿಪ್ಪ
ಕೂಡಲಸಂಗಮದೇವ.

೨೪೩

ಹೊಱಗೆ ಹೂಸಿ ಏವೆನಯ್ಯಾ, ಒಳಗೆ ಶುದ್ಧವಾಗದನ್ನಕ್ಕ?
ಮಣಿಯ ಕಟ್ಟಿ ಏವೆನಯ್ಯಾ, ಮನ ಮುಟ್ಟದನ್ನಕ್ಕ?
ನೂಱಸೋದಿ ಏವೆನಯ್ಯಾ,
ಕೂಡಲಸಂಗಮದೇವರ
ಮನಮುಟ್ಟಿ ನೆನೆಯದನ್ನಕ್ಕ?

೨೪೪

ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೆ ಸತ್‌ಪಾತ್ರಕ್ಕೆ ಸಲ್ಲದಯ್ಯಾ!
ನಾಯ ಹಾಲು ನಾಯಿಗಲ್ಲದೆ ಪಂಚಾಮೃತಕ್ಕೆ ಸಲ್ಲದಯ್ಯಾ!
ನಮ್ಮ ಕೂಡಲಸಂಗನ ಶರಣರಿಗಲ್ಲದೆ
ಮಾಡುವ ಅರ್ಥ ವ್ಯರ್ಥ ಕಂಡಯ್ಯಾ!

೨೪೫

ಮರನ ಹೂವ ಕೊಯಿದು ಮರಕ್ಕೇಱಿಸಿ,
ನದಿಯುದಕವ ನದಿಗರ್ಪಿತವ ಮಾಡಿ,
ಕಱುವನಗಲಿಸಿ ತಾಯ ಮಱುಗಿಸಿ
ಮೊಲೆವಾಲ ಕಱೆದುಣಬೇಡವೊ!
ಕೂಡಲಸಂಗಮದೇವಾ,
ನೀ ಮಾಡಿದ ಮಾಯೆ:
ಹಲಬರ ಬಾಯ ಟೊಣೆದೇ ಹೋಯಿತ್ತು!

೨೪೬

ಲೋಕದ ಡೊಂಕ ನೀವೇಕೆ ತಿದ್ದುವಿರಿ ?
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ ;
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ.
ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ
ಕೂಡಲಸಂಗಮದೇವ.

೧೦

ಅಂತರಂಗಶುದ್ಧಿ

೨೪೭

ಹುತ್ತವ ಬಡಿದೊಡೆ ಹಾವು ಸಾಯಬಲ್ಲುದೆ, ಅಯ್ಯಾ ?
ಅಘೋರ ತಪವ ಮಾಡಿದಡೇನು ?
ಅಂತರಂಗ–ಆತ್ಮಶುದ್ಧಿಯಿಲ್ಲದವರನೆಂತು ನಂಬುವನಯ್ಯಾ,
ಕೂಡಲಸಂಗಮದೇವ ?

೨೪೮

ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೊ ?
ಹೊಸ್ತಿಲಲ್ಲಿ ಹುಲ್ಲು ತುಂಬಿ, ಮನೆಯೊಳಗೆ ರಜ ತುಂಬಿ,
ಮನೆಯೊಳಗೆ ಮನೆಯೊಡೆಯಸಿದ್ದಾನೊ ಇಲ್ಲವೊ ?
ತನುವಿನೊಳಗೆ ಹುಸಿ ತುಂಬಿ, ಮನದೊಳಗೆ ವಿಷಯ ತುಂಬಿ,
ಮನೆಯೊಳಗೆ ಮನೆಯೊಡೆಯನಿಲ್ಲಾ,
ಕೂಡಲಸಂಗಮದೇವ.

೨೪೯

ಆಸೆ–ರೋಷ–ಹರುಷಾದಿಗಳೆಂಬ ಕರಣೇಂದ್ರಿಯವ ಮುಟ್ಟಲೀಯದೆ
ಆಚಾರವ ಶಿವಾಚಾರವ ಮಾಡುವೆ;
ಭಯಭಕ್ತಿಯಿಂದ ತೋಱುವೆ, ಮನದಲ್ಲಿ ವಂಚನೆಯಿಲ್ಲದೆ;
ಭಾವಶುದ್ಧ ಪೂಜೆಯ ಮಾಡುವೆ,
ಎನ್ನ ಪ್ರಾಣಶಕ್ತಿಯಿಂದ ಕೂಡಲಸಂಗಮದೇವರ.

೨೫೦

ಸಾರ! ಸಜ್ಜನರ ಸಂಗವ ಮಾಡುವುದು;
ದೂರ! ದುರ್ಜನರ ಸಂಗ ಬೇಡವಯ್ಯಾ.
ಆವ ಹಾವಾದರೇನು? ವಿಷವೊಂದೇ:
ಅಂತವರ ಸಂಗ ಬೇಡವಯ್ಯಾ.
ಅಂತರಂಗಶುದ್ಧವಿಲ್ಲದವರ ಸಂಗ
ಸಿಂಗಿ, ಕಾಳಕೂಟ ವಿಷವೊ, ಕೂಡಲಸಂಗಮದೇವಾ.

೨೫೧

ಒಳಗೆ ಕುಟಿಲ, ಹೊಱಗೆ ವಿನಯವಾಗಿ
ಭಕ್ತರೆನಿಸಿಕೊಂಬವರ ಒಲ್ಲನೊಲ್ಲನಯ್ಯಾ, ಲಿಂಗವು!
ಅವರು ಸತ್ಪಥಕ್ಕೆ ಸಲ್ಲರು ಸಲ್ಲರಯ್ಯಾ.
ಒಳಹೊಱಗೊಂದಾಗದವರಿಗೆ ಅಳಿಯಾಸೆದೋಱಿ
ಬೀಸಾಡುವನವರ ಜಗದೀಶ ಕೂಡಲಸಂಗಮದೇವ!

೨೫೨

ಅವರ ನಡೆಯೊಂದು ನುಡಿಯೊಂದಾದರೆ
ಶಿವಾಚಾರಕ್ಕವರು ಸಲ್ಲರಯ್ಯಾ:
ಬಲ್ಲನು, ಸಾತ್ವಿಕರಲ್ಲದವರನೊಲ್ಲನು;
ಶಿವಾಚಾರವ ಬಲ್ಲನು, ಅಲ್ಲಿ ನಿಲ್ಲನು.
ಪ್ರಪಂಚಿಯ ಮನವನೊಲ್ಲನು
ಕೂಡಲಸಂಗಮದೇವನು.

೨೫೩

ಕರಗಿಸಿ ಎನ್ನ ಮನದ ಕಾಳಿಕೆಯ ಕಳೆಯಯ್ಯಾ,
ಒರೆಬಣ್ಣಕ್ಕೆ ತಂದೆನ್ನ ಪುಟವಿಕ್ಕಿ ನೋಡಯ್ಯಾ.
ಕಡಿಹಕ್ಕೆ ಬಡಿಹಕ್ಕೆ ತಂದೆನ್ನ ಕಡೆಯಾಣಿಯ ಮಾಡಿ,
ನಿಮ್ಮ ಶರಣರ ಪಾದಕ್ಕೆ ತೊಡಿಗೆಯ ಮಾಡಿ ಸಲಹು,
ಕೂಡಲಸಂಗಮದೇವಾ.

೨೫೪

ಒಳ್ಳಿಹ ವೈಲಾರನವೊಳಗೆಲ್ಲ ಸಣಬು :
ಹೊಱಗಣ ಬಣ್ಣ ಕರ ಲೇಸಾಯಿತ್ತಯ್ಯಾ !
ಶ್ವಾನನ ನಿದ್ರೆ, ಅಜ್ಞಾನಿಯ ತಪದಂತೆ ಆಯಿತ್ತಯ್ಯಾ ಎನ್ನ ಮತಿ,
ಕೂಡಲಸಂಗಮದೇವಾ !

೨೫೫

ಕುದುರನೇಸು ತೊಳೆದರೆಯೂ ಕೆಸಱು ಮಾಣ್ಬುದೆ ?
ಎನ್ನ ಕಾಯದೊಳುಳ್ಳವಗುಣಂಗಳ ಕಳೆದು
ಕೃಪೆಯ ಮಾಡಯ್ಯಾ.
ಕಂಬಳಿಯಲ್ಲಿ ಕಣಕವ ನಾದಿದಂತೆ,
ಕಾಣಿರೇ, ಎನ್ನ ಮನ !
ಕೂಡಲಸಂಗಮದೇವಾ,
ನಿಮಗೆ ಶರಣೆಂದು ಶುದ್ಧ ಕಾಣಯ್ಯಾ.

೨೫೬

ಎಂತೋ, ಶಿವಭಕ್ತಿಯನಾನುಪಮಿಸುವೆನಯ್ಯಾ ?
ಎಂತೋ, ಶಿವಾಚಾರವೆನಗೆ ವೇದ್ಯವಪ್ಪುದಯ್ಯಾ ?
ಕಾಮ–ಕ್ರೋಧ–ಲೋಭ–ಮೋಹದಿಂದ ಕಟ್ಟುವಡೆದೆನು ;
ಹಸಿವು–ತೃಷೆ–ವ್ಯಸನದಿಂದ ಕುದಿಯುತಿದ್ದೇನೆ ;
ಪಂಚೇಂದ್ರಿಯ, ಸಪ್ತಧಾತು ಹಂಚುಹಱಿಮಾಡಿ ಕಾಡಿಹವಯ್ಯಾ,
ಅಯ್ಯಾ, ಅಯ್ಯಾ ! ಎನ್ನ ಹುಯ್ಯಲ ಕೇಳಯ್ಯಾ—
ಕೂಡಲಸಂಗಮದೇವಾ, ನಾನೇವೆನೇವೆನಯ್ಯಾ !

೨೫೭

ಕಳಬೇಡ, ಕೊಲಬೇಡ, ಹುಸಿಯ ನುಡಿಯಲುಬೇಡ ;
ಮುನಿಯಬೇಡ, ಅನ್ಯರಿಗೆ ಅಸಹ್ಯಬಡಬೇಡ ;
ತನ್ನ ಬಣ್ಣಿಸಬೇಡ, ಇದಿರ ಹಳಿಯಲುಬೇಡ :
ಇದೇ ಅಂತರಂಗಶುದ್ಧಿ, ಇದೇ ಬಹಿರಂಗಶುದ್ಧಿ,
ಇದೇ ನಮ್ಮ ಕೂಡಲಸಂಗಮದೇವರನೊಲಿಸುವ ಪರಿ.

೨೫೮

ಸಗಣಿಯ ಬೆನಕಂಗೆ ಸಂಪಿಗೆಯರಳಲ್ಲಿ ಪೂಜಿಸಿದರೆ,
ರಂಜನೆಯಲ್ಲದೆ, ಅದಱ ಗಂಜಳ ಬಿಡದಣ್ಣಾ !
ಮಣ್ಣ ಪುತ್ಥಳಿಯ ಮಾಣದೆ ಜಲದಲ್ಲಿ ತೊಳೆದರೆ,
ನಿಚ್ಚನಿಚ್ಚಕ್ಕೆ ಕೆಸಱಹುದಲ್ಲದೆ, ಅದಱಚ್ಚುಗ ಬಿಡದಣ್ಣಾ !
ಲೋಕದ ಮಾನವಂಗೆ ಶಿವದೀಕ್ಷೆಯ ಕೊಟ್ಟರೆ,
ಕೆಟ್ಟವನೇಕೆ ಶಿವಭಕ್ತನಹನು, ಕೂಡಲಸಂಗಮದೇವಾ ?

೨೫೯

ಆಸೆಯಾಮಿಷ, ತಾಮಸ, ಹುಸಿ, ವಿಷಯ,
ಕುಟಿಲ, ಕುಹಕ, ಕ್ರೋಧ, ಕ್ಷುದ್ರ, ಮಿಥ್ಯೆ—
ಇವನೆನ್ನ ನಾಲಗೆಯ ಮೇಲಿಂದತ್ತ ತೆಗೆದುಕಳೆಯಯ್ಯಾ.
ಅದೇಕೆಂದೊಡೆ: ನಿಮ್ಮತ್ತಲೆನ್ನ ಬರಲೀಯವು.
ಇದುಕಾರಣ, ಇವೆಲ್ಲವ ಕಳೆದು,
ಎನ್ನ ಪಂಚಯ್ವರ ಭಕ್ತನ ಮಾಡು,
ಕೂಡಲಸಂಗಮದೇವಾ.

೨೬೦

ಹೃದಯದ ಕತ್ತರಿ: ತುದಿನಾಲಗೆಯ ಬೆಲ್ಲೀಂ ಬೋ!
ಆಡಿಹೆನೇಂಬೋ, ಹಾಡಿಹೆನೇಂಬೋ,
ನಿಚ್ಚನಿಚ್ಚ ಶಿವರಾತ್ರಿಯ ಮಾಡಿಹೆನೇಂಬೋ!
ಆನು ಎನ್ನಂತೆ, ಮನ ಮನದಂತೆ,
ಕೂಡಲಸಂಗಮದೇವ ತಾನು ತನ್ನಂತೆ!

೨೬೧

ನೂಱನೋದಿ ನೂಱ ಕೇಳಿದರೇನು?
ಆಸೆ ಹಱಿಯದು, ರೋಷ ಬಿಡದು,
ಮಜ್ಜನಕ್ಕೆಱೆದು ಫಲವೇನು?
ಮಾತಿನಂತೆ ಮನವಿಲ್ಲದ ಜಾತಿಡೊಂಬರ ನೋಡಿ
ನಗುವ ನಮ್ಮ ಕೂಡಲಸಂಗಮದೇವ.

೧೧

ಮಾಯೆ : ಸಂಸಾರ

೨೬೨

ತುಪ್ಪದ ಸವಿಗೆ ಅಲಗ ನೆಕ್ಕುವ ಸೊಣಗನಂತೆ, ಎನ್ನ ಬಾಳುವೆ !
ಸಂಸಾರಸಂಗವ ಬಿಡದು ನೋಡೆನ್ನ ಮನವು.
ಈ ನಾಯಿತನವ ಮಾಣಿಸು :
ಕೂಡಲಸಂಗಮದೇವಾ, ನಿಮ್ಮ ಧರ್ಮ !

೨೬೩

ಹಾವಿನ ಬಾಯ ಕಪ್ಪೆ ಹಸಿದು, ಹಾಱುವ ನೊಣಕ್ಕೆ ಆಸೆ ಮಾಡುವಂತೆ,
ಸೂಲವನೇಱುವ ಕಳ್ಳನು ಹಾಲು-ತುಪ್ಪವ ಕುಡಿದು
ಮೇಲೇಸು ಕಾಲ ಬದುಕುವನೊ !
ಕೆಡುವೊಡಲ ನಚ್ಚಿ, ಕಡುಹುಸಿಯನೆ ಹುಸಿದು, ಒಡಲ ಹೊರೆವರ—
ಕೂಡಲಸಂಗಮದೇವನವರನೊಲ್ಲ, ಕಾಣಿರಣ್ಣಾ.

೨೬೪

ಊರ ಸೀಱೆಗೆ ಅಗಸ ತಡಬಡಿಹಡೆದಂತೆ,
ಹೊನ್ನೆನ್ನದು, ಹೆಣ್ಣೆನ್ನದು, ಮಣ್ಣೆನ್ನದೆಂದು ಮರುಳಾದೆ :
ನಿಮ್ಮನಱಿಯದ ಕಾರಣ ಕೆಮ್ಮನೆ ಕೆಟ್ಟೆ, ಕೂಡಲಸಂಗಮದೇವಾ !

೨೬೫

ಹಬ್ಬಕ್ಕೆ ತಂದ ಹರಕೆಯ ಕುಱಿ
ತೋರಣಕ್ಕೆ ತಂದ ತಳಿರ ಮೇಯಿತ್ತು :
ಕೊಂದಹರೆಂಬುದನಱಿಯದೆ
ಬೆಂದ ಒಡಲ ಹೊರೆಯಹೋಯಿತ್ತಲ್ಲದೆ !
ಅದಂದೆ ಹುಟ್ಟಿತ್ತು, ಅದಂದೆ ಹೊಂದಿತ್ತು :
ಕೊಂದವರುಳಿದರೇ, ಕೂಡಲಸಂಗಮದೇವಾ ?

೨೬೬

ಶೂಲದ ಮೇಲಣ ವಿಭೋಗವೇನಾದೊಡೇನೊ,
ನಾನಾ ವರ್ಣದ ಸಂಸಾರ ಹಾವು-ಹಾವಾಡಿಗನ ಸ್ನೇಹದಂತೆ!
ತನ್ನಾತ್ಮ ತನಗೆ ಹಗೆಯಾದ ಬಳಿಕ ಬಿನ್ನಾಣವುಂಟೆ?
ಮಹಾದಾನಿ ಕೂಡಲಸಂಗಮದೇವಾ?

೨೬೭

ಇಂದಿಗೆಂತು, ನಾಳಿಗೆಂತು ಎಂದು—
ಬೆಂದೊಡಲ ಹೊರೆಯಹೋಯಿತ್ತೆನ್ನ ಸಂಸಾರ.
ಹಿಂದೆ ನಾನಾ ಯೋನಿಯಲ್ಲಿ ಬಂದೆನೆಂಬ ಹೇಯವಿಲ್ಲ;
ಮುಂದೆ ಮುಕ್ತಿಯಾಗಬೇಕೆಂಬ ಯುಕ್ತಿಯಿಲ್ಲ.
ಎಂದೆಂದಿಗೂ ಸದಾಶಿವನ ಕುಂದದೆ ನೆನೆಯಲೀಯದೆ
ಕೊಂದುದಯ್ಯಾ ಈ ಮಾಯೆ, ಕೂಡಲಸಂಗಮದೇವಾ.

೨೬೮

ಎಂದೋ, ಸಂಸಾರದ ದಂದುಗ ಹಿಂಗುವುದು?
ಎಂದೋ, ಮನದಲ್ಲಿ ಪರಿಣಾಮವಹುದೆನಗೆಂದೋ, ಎಂದೋ!
ಕೂಡಲಸಂಗಮದೇವಾ,
ಇನ್ನೆಂದೋ, ಪರಮ ಸಂತೋಷದಲ್ಲಿಹುದೆನಗೆಂದೋ?

೨೬೯

ಆನೊಬ್ಬನು : ಸುಡುವರೈವರು!
ಮೇಲೆ ಕಿಚ್ಚು ಘನ : ನಿಲಲು ಬಾರದು!
ಕಾಡಬಸವನ ಹುಲಿ ಕೊಂಡೊಯ್ವಲ್ಲಿ ಆರಯ್ಯಲಾಗದೆ,
ಕೂಡಲಸಂಗಮದೇವಾ?

೨೭೦

ಸೀರಿನ ಬೊಬ್ಬುಳಿಕೆಗೆ ಕಬ್ಬುನದ ಕಟ್ಟ ಕೊಟ್ಟು
ಸುರಕ್ಷಿತವ ಮಾಡುವ ಭರವ ನೋಡಾ :
ಮಹಾದಾನಿ ಕೂಡಲಸಂಗಯ್ಯನ ಪೂಜಿಸಿ ಬದುಕುವೋ,
ಕಾಯವ ನಿಶ್ಚಯಿಸದೆ !

೨೭೧

ಸಂಸಾರಸಾಗರದ ತೆರೆ ಕೊಬ್ಬಿ
ಮುಖದ ಮೇಲೆ ಅಲೆಯುತ್ತಿದ್ದುದೇ ನೋಡಾ !
ಸಂಸಾರಸಾಗರ ಉರದುದ್ದವೇ ? ಹೇಳಾ ;
ಸಂಸಾರಸಾಗರ ಕೊರಲುದ್ದವೇ ? ಹೇಳಾ.
ಸಂಸಾರಸಾಗರ ಶಿರದುದ್ದವಾದ ಬಳಿಕ
ಏನ ಹೇಳುವೆನಯ್ಯಾ ?
ಅಯ್ಯಾ, ಅಯ್ಯಾ, ಎನ್ನ ಹುಯ್ಯಲ ಕೇಳಯ್ಯಾ.
ಕೂಡಲಸಂಗಮದೇವಾ, ನಾನೇವೆನೇವೆನಯ್ಯಾ ?

೨೭೨

ಉದಯಾಸ್ತಮಾನವೆನ್ನ ಬೆಂದ ಬಸುಱಿಂಗೆ ಕುದಿಯಲಲ್ಲದೆ,
ನಿಮ್ಮ ನೆನೆಯಲು ತೆಱಹಿಲ್ಲಯ್ಯಾ :
ಎಂತೊ ! ಲಿಂಗ ತಂದೆ, ಎಂತಯ್ಯಾ ? ಎನ್ನ ಪೂರ್ವಲಿಖಿತ !
ಬೆರಣಿಯನಾಯಲಲ್ಲದೆ ಅಟ್ಟುಣ್ಣ ತೆಱಹಿಲ್ಲವೆನಗೆ !
ನೀ ಕರುಣಿಸು, ಕೂಡಲಸಂಗಮದೇವಾ.

೨೭೩

ಚಂದ್ರಮನಂತೆ ಕಳೆ ಸಮನಿಸಿತ್ತೆನಗೆ :
ಸಂಸಾರವೆಂಬ ರಾಹು ಸರ್ವಗ್ರಾಸಿಯಾಗಿ ನುಂಗಿತ್ತಯ್ಯಾ !
ಇಂದೆನ್ನ ದೇಹಕ್ಕೆ ಗ್ರಹಣವಾಯಿತ್ತು :
ಇನ್ನೆಂದಿಗೆ ಮೋಕ್ಷವಹುದೋ, ಕೂಡಲಸಂಗಮದೇವಾ ?

೨೭೪

ಹೆಣವನಿಕ್ಕಿ ನೆಲಗಟ್ಟ ಕಟ್ಟಿದಂತೆ ಆಯಿತ್ತೆನ್ನ ಕಾಯಗುಣ !
ಅಹಂಕಾರ–ಪ್ರಬೋಧೆಗಳೇಕಯ್ಯಾ ?
ಕಾಮ–ಕ್ರೋಧ–ಲೋಭ–ಮೋಹ–ಮದ–ಮತ್ಸರಂಗಳನಿಕ್ಕಿ
ಎನ್ನ ಮಾಡಿದಿರಿ, ಎನ್ನ ಬಾಧಿಸಲೆಂದು, ಲಿಂಗಯ್ಯ ತಂದೆ.
ಆಧಿವ್ಯಾಧಿಗಳಿಲ್ಲವ ಕಳೆದು ನಿರ್ವಾಣವಪ್ಪ ಪದವ ಕರುಣಿಸಯ್ಯಾ,
ಕೂಡಲಸಂಗಮದೇವಾ.

೨೭೫

ವಿಷಯವೆಂಬ ಹಸುರನೆನ್ನ ಮುಂದೆ ತಂದು ಪಸರಿಸಿದೆಯಯ್ಯಾ :
ಹಸುವೇನ ಬಲ್ಲುದು ? ಹಸುರೆಂದೆಳಸುವುದು.
ವಿಷಯರಹಿತನ ಮಾಡಿ, ಭಕ್ತಿರಸವ ದಣಿಯೆ ಮೇಯಿಸಿ,
ಸುಬುದ್ಧಿಯೆಂಬುದಕವನೆಱೆದು, ನೋಡಿ ಸಲಹಯ್ಯಾ
ಕೂಡಲಸಂಗಮದೇವಾ.

೨೭೬

ಸಂಸಾರವೆಂಬ ಬಲೆಯಲ್ಲಿ ಸಿಲುಕಿದೆನಯ್ಯಾ !
ಎನ್ನುವನು ಕಾಯಯ್ಯಾ, ಕಾಯಯ್ಯಾ, ಹುರುಳಿಲ್ಲ, ಹುರುಳಿಲ್ಲ !
ಕೂಡಲಸಂಗಮದೇವಾ, ಶಿವಧೋ, ಶಿವಧೋ !

೩೭೭

ಒಂದು ಮೊಲಕ್ಕೆ ನಾಯನೊಂಬತ್ತ ಬಿಟ್ಟಂತೆ,
'ಎನ್ನ ಬಿಡು', 'ತನ್ನ ಬಿಡೆ'ಂಬುದು ಕಾಯವಿಕಾರ;
'ಎನ್ನ ಬಿಡು', 'ತನ್ನ ಬಿಡೆ'ಂಬುದು ಮನೋವಿಕಾರ.
ಕರಣೇಂದ್ರಿಯಂಗಳೆಂಬ ಸೊಣಗ ಮುಟ್ಟದ ಮುನ್ನ,
ಮನ ನಿಮ್ಮನೆಯ್ದುವುದೇ, ಕೂಡಲಸಂಗಮದೇವಾ ?

೨೭೮

ಬೆಟ್ಟಕ್ಕೆ ಬೆಳ್ಳಾರ ಸುತ್ತಿತ್ತಯ್ಯಾ :
ಪಾಪದ ಬಲೆಯ ತಂದು ಮುಂದೊಡ್ಡಿದರಯ್ಯಾ ;
ಬೇಟೆಕಾಱನು ಮೃಗವನಟ್ಟೆ,
ಮೃಗ ಗೋರಿಗೊಳಗಾಗದಯ್ಯಾ !
ಹರನೊಡ್ಡಿದ ಬಲೆಯಲ್ಲಿ ಸಿಲುಕಿದ ಮೃಗವು
ಕೂಡಲಸಂಗಮಂಗೆ ಓಗರವಾಯಿತ್ತಯ್ಯಾ.

೨೭೯

ಕಾಂಚನವೆಂಬ ನಾಯ ನಚ್ಚಿ, ನಿಮ್ಮ ನಾನು ಮಱೆದೆನಯ್ಯಾ !
ಕಾಂಚನಕ್ಕೆ ವೇಳೆಯಲ್ಲದೆ, ಲಿಂಗಕ್ಕೆ ವೇಳೆಯಿಲ್ಲಾ !
ಹಡಿಕೆಗೆ ಮೆಚ್ಚಿದ ಸೊಣಗ ಅಮೃತದ ಸವಿಯ ಬಲ್ಲುದೆ,
ಕೂಡಲಸಂಗಮದೇವಾ ?

೨೮೦

ಗುಬ್ಬಿ ಹೆಱರ ಮನೆಯ ತನ್ನ ಮನೆಯೆಂಬಂತೆ,
ಧರೆ, ಧನ, ವನಿತೆಯರು ಎನ್ನವರು ತನ್ನವರೆಂದು
ಹೋರಿ ಹೋರಿ ಸಾವುತ್ತಿದೆ ಜೀವ !
ಸರ್ವಕರ್ತೃ ಕೂಡಲಸಂಗಯ್ಯನೊಬ್ಬನೆ ಎಂದಱಯದೆ ಕೆಟ್ಟರು !

೨೮೧

ಕಣ್ಣೊಳಗೆ ಕಣ್ಣಿದ್ದೂ ಕಾಣಲೇಕಱಯರಯ್ಯಾ ?
ಕಿವಿಯೊಳಗೆ ಕಿವಿಯಿದ್ದೂ ಕೇಳಲೇಕಱಯರಯ್ಯಾ ?
ಘ್ರಾಣದೊಳಗೆ ಘ್ರಾಣವಿದ್ದೂ ವಾಸಿಸಲೇಕಱಯರಯ್ಯಾ ?
ಜಿಹ್ವೆಯೊಳಗೆ ಜಿಹ್ವೆಯಿದ್ದೂ ರುಚಿಸಲೇಕಱಯರಯ್ಯಾ ?
ಸ್ಪರ್ಶನದೊಳಗೆ ಸ್ಪರ್ಶನವಿದ್ದೂ ಮುಟ್ಟಲೇಕಱಯರಯ್ಯಾ ?
ಪ್ರಾಣದೊಳಗೆ ಪ್ರಾಣವಿದ್ದೂ ನೆನೆಯಲೇಕಱಯರಯ್ಯಾ ?
ಕಾಯದೊಳಗೆ ಕಾಯವಿದ್ದು ಬಿಡದು, ಬೇಱಾಗದು !
ನೀನಿಕ್ಕಿದ ಆಣಕದ ಭೇದವ ಭೇದಿಸಬಾರದಯ್ಯಾ,
ಕೂಡಲಸಂಗಮದೇವಾ.

೨೮೨

ಹಂಜರ ಬಲ್ಲಿತ್ತೆಂದು ಅಂಜದೆ ಓದುವ ಗಿಳಿಯೆ,
ಎಂದೆಂದೂ ಅಳಿಯೆನೆಂದು ಗುಡಿಗಟ್ಟಿದೆಯಲ್ಲಾ,
—ನಿನ್ನ ಮನದಲ್ಲಿ !
ಮಾಯಾಮಂಜರ ಕೊಲುವರೆ ನಿನ್ನ ಹಂಜರ ಕಾವುದೆ,
ಕೂಡಲಸಂಗಮದೇವನಲ್ಲದೆ ?

೨೮೩

ಜಗವ ಸುತ್ತಿಪ್ಪುದು ನಿನ್ನ ಮಾಯೆಯಯ್ಯಾ :
ನಿನ್ನ ಸುತ್ತಿಪ್ಪುದು ಎನ್ನ ಮನ ನೋಡಯ್ಯಾ !
ನೀನು ಜಗಕ್ಕೆ ಬಲ್ಲಿದನು; ಆನು ನಿನಗೆ ಬಲ್ಲಿದನು, ಕಂಡಯ್ಯಾ !
ಕರಿಯು ಕನ್ನಡಿಯೊಳಗಡಗಿದಂತಯ್ಯಾ :
ಎನ್ನೊಳಗೆ ನೀನಡಗಿದೆ, ಕೂಡಲಸಂಗಮದೇವಾ.

೨೮೪

ಅಯ್ಯಾ, ನೀ ಮಾಡಲಾದ ಜಗತ್ತು; ಅಯ್ಯಾ, ನೀ ಮಾಡಲಾದ ಸಂಸಾರ;
ಅಯ್ಯಾ, ನೀ ಮಾಡಲಾದ ಮರವೆ; ಅಯ್ಯಾ, ನೀ ಮಾಡಲಾದ ದುಃಖ :
ಅಯ್ಯಾ, ನೀ ಬಿಡಿಸಿದರೆ ಬಿಟ್ಟಿತ್ತು, ತಾಮಸವಯ್ಯಾ !
ನಾನೀ ಮಾಯೆಯ ಗೆದ್ದೆನೆಂಬ ಹಮ್ಮಿದೇಕೆ
ಕೂಡಲಸಂಗಮದೇವಾ ?

೨೮೫

ಇಂದ್ರಿಯ ನಿಗ್ರಹವ ಮಾಡಿದರೆ, ಹೊಂದುವುವು ದೋಷಂಗಳು :
ಮುಂದೆ ಬಂದು ಕಾಡುವುವು ಪಂಚೇಂದ್ರಿಯಂಗಳು !
ಸತಿಪತಿ–ರತಿಸುಖವ ಬಿಟ್ಟರೇ ಸಿರಿಯಾಳ ಚಂಗಳೆಯರು ?
ಸತಿಪತಿ–ರತಿಸುಖ–ಭೋಗೋಪಭೋಗವಿಳಾಸವ
ಬಿಟ್ಟನೇ ಸಿಂಧುಬಲ್ಲಾಳನು ?
ನಿಮ್ಮ ಮುಟ್ಟಿ ಪರಧನ–ಪರಸತಿಗಳುಪಿದರೆ
ನಿಮ್ಮ ಚರಣಕ್ಕೆ ದೂರ, ಕೂಡಲಸಂಗಮದೇವಾ.

೨೮೬

ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯಾ :
ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯಾ ;
ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯಾ,
ಕೂಡಲಸಂಗಮದೇವಾ.

೧೨

ಮನದ ಮರ್ಕಟತನ-ಶುದ್ಧೀಕರಣ

೨೮೭

ಕೊಂಬಿನ ಮೇಲಣ ಮರ್ಕಟನಂತೆ ಲಂಘಿಸುವುದೆನ್ನ ಮನವು;
ನಿಂದಲ್ಲಿ ನಿಲ್ಲಲೀಯದೆನ್ನ ಮನವು;
ಹೊಂದಿದಲ್ಲಿ ಹೊಂದಲೀಯದೆನ್ನ ಮನವು.
ಕೂಡಲಸಂಗಮದೇವಾ,
ನಿಮ್ಮ ಚರಣಕಮಲದಲ್ಲಿ ಭ್ರಮರನಾಗಿರಿಸು, ನಿಮ್ಮ ಧರ್ಮ!

೨೮೮

ಮರನನೇಱಿದ ಮರ್ಕಟನಂತೆ
ಹಲವು ಕೊಂಬೆಗೆ ಹಾಯುತಲಿದೆ;
ಬೆಂದ ಮನವ ನಾನೆಂತು ನಂಬುವೆನಯ್ಯಾ?
ಎಂತು ನಚ್ಚುವೆನಯ್ಯಾ?
ಎನ್ನ ತಂದೆ ಕೂಡಲಸಂಗಮದೇವನಲ್ಲಿಗೆ ಹೋಗಲೀಯದಯ್ಯಾ!

೨೮೯

ಅಂದಣವನೇಱಿದ ಸೊಣಗನಂತೆ—
ಕಂಡೊಡೆ ಬಿಡದು ಮುನ್ನಿನ ಸ್ವಭಾವವನು.
ಸುಡು! ಸುಡು!! ಮನವಿದು ವಿಷಯಕ್ಕೆ ಹರಿವುದು;
ಮೃಡ, ನಿಮ್ಮನನುದಿನ ನೆನೆಯಲೀಯದು.
ಎನ್ನೊಡೆಯ ಕೂಡಲಸಂಗಮದೇವಾ,
ನಿಮ್ಮ ಚರಣವ ನೆನೆವಂತೆ ಕರುಣಿಸು,
ಸೆಱಗೊಡ್ಡಿ ಬೇಡುವೆ, ನಿಮ್ಮ ಧರ್ಮ!

೨೯೦

ಮುಂಗಯ್ಯ ಕಂಕಣಕೆ ಕನ್ನಡಿಯ ತೋಱುವಂತೆ--
ಎನ್ನ ಮನವು ನಿಧಾನವನೊಲ್ಲದೆ ಜಲಗ ಮಚ್ಚಿತ್ತು ನೋಡಾ!
ನಾಯಿಗೆ ನಾರಿವಾಣವಕ್ಕುವುದೆ, ಕೂಡಲಸಂಗಮದೇವಾ?

೨೯೧

ನಾನೊಂದು ನೆನೆದೊಡೆ ತಾನೊಂದ ನೆನೆವುದು;
ನಾನಿತ್ತಲೆಳೆದೊಡೆ ತಾನತ್ತಲೆಳೆವುದು;
ತಾ ಬೇಱೆಯೆನ್ನನಳಲಿಸಿ ಕಾಡಿತ್ತು;
ತಾ ಬೇಱೆಯೆನ್ನ ಬಳಲಿಸಿ ಕಾಡಿತ್ತು;
ಕೂಡಲಸಂಗನ ಕೂಡಿಹೆನೆಂಡೊಡೆ
ತಾನೆನ್ನ ಮುಂದುಗೆಡಿಸಿತ್ತು ಮಾಯೆ!

೨೯೨

ತನ್ನಿಚ್ಛೆಯ ನುಡಿದರೆ ನಚ್ಚುವುದೀ ಮನವು.
ಇದಿರಿಚ್ಛೆಯ ನುಡಿದರೆ ಮೆಚ್ಚದೀ ಮನವು.
ಕೂಡಲಸಂಗನ ಶರಣರ ನಚ್ಚದ ಮನವ ಕಿಚ್ಚಿನೊಳಗಿಕ್ಕುವೆ!

೨೯೩

ತನ್ನ ವಿಚಾರಿಸಲೊಲ್ಲದು: ಇದಿರ ವಿಚಾರಿಸಹೋಹುದೀ ಮನವು.
ಏನು ಮಾಡುವೆನೀ ಮನವನು? ಎಂತು ಮಾಡುವೆನೀ ಮನವನು?
ಕೂಡಲಸಂಗಮದೇವರ ಶರಣರ
ನಚ್ಚದ, ಮಚ್ಚದ, ಬೆಂದ ಮನವನು?

೨೯೪

ಅಱಿದುದನಱಿಯಲೊಲ್ಲದು : ಅದೆಂತಯ್ಯಾ ?
ಮಱೆದುದ ಮಱೆಯಲೊಲ್ಲದು : ಅದೆಂತಯ್ಯಾ ?
ಅಱಿದು ಮಱೆದ ಮನವ ಕೂಡಲಸಂಗಯ್ಯ ಬಲ್ಲ.

೨೯೫

ಸುಡಲೀ ಮನವೆನ್ನನುಡುಹನ ಮಾಡಿತ್ತು !
ನಡೆವಲ್ಲಿ ನುಡಿವಲ್ಲಿ ಅಧಿಕನೆಂದೆನಿಸಿತ್ತು !
ಬೆಡಗಿನ ಕೀಲು ಕಳೆದು ಕೆಡೆದ ಬಳಿಕ
ಕಡುಗೂರ್ಪ ಮಡದಿ ತಾ ಮುಟ್ಟಲಮ್ಮಳು.
ಒಡಲನುರಿ ಕೊಂಬುದು; ಒಡವೆಯನರಸ ಕೊಂಬ;
ಕಡುಗೂರ್ಪ ಮಡದಿಯ ಮತ್ತೊಬ್ಬ ಚೆನ್ನಿಗ ಕೊಂಬ !
ಮುನ್ನ ಮಾಡಿದುಹು ತನ್ನ ಬೆನ್ನ ಬಿಡದನ್ನಕ್ಕ
ಇನ್ನು ಮಾಡಿದೊಡೊಳವೆ, ಕೂಡಲಸಂಗಮದೇವಾ ?

೨೯೬

ಓತಿ ಬೇಲಿವರಿದಂತೆ ಎನ್ನ ಮನವಯ್ಯಾ;
ಹೊತ್ತಿಂಗೊಂದು ಪರಿಯಪ್ಪ ಗೋಸುಂಬೆಯಂತೆನ್ನ ಮನವು;
ಬಾವುಲ ಬಾಳುವೆಯಂತೆನ್ನ ಮನವು !
ನಡುವಿರುಳೊಳಿದ್ದ ಕುರುಡಂಗೆ ಅಗಸೆಯಲ್ಲಿ ಬೆಳಗಾದಂತೆ—
ನಾನಿಲ್ಲದ ಭಕ್ತಿಯ ಬಯಸಿದರುಂಟೆ, ಕೂಡಲಸಂಗಮದೇವಾ ?

೨೯೭

ಇನ್ನೇವೆನಿನ್ನೇವೆನಯ್ಯಾ?
ಎನ್ನ ಮನವೆಂಬ ಮರ್ಕಟನ ದಾಳಿ ಘನವಾಯಿತ್ತು :
ಎನ್ನ ನಿಂದಲ್ಲಿ ನಿಲ್ಲಲೀಯದು, ಎನ್ನ ಕುಳಿತಲ್ಲಿ ಕುಳ್ಳಿರಲೀಯದು;
ಕ್ಷಣದಲ್ಲಿ ಪಾತಾಳಕ್ಕೈದುತಿದೆ, ಕ್ಷಣದಲ್ಲಿ ಆಕಾಶಕ್ಕೈದುತಿದೆ,
ಕ್ಷಣದಲ್ಲಿ ದಿಗ್ದೇಶಕ್ಕೈದುತಿದೆ, ಕೂಡಲಸಂಗಮದೇವಾ,
ಈ ಮನವೆಂಬ ಮರ್ಕಟನ ದಾಳಿಯನೆಂದಿಗೆ ನೀಗಿ,
ಎಂದು ನಿಮ್ಮೊಡಗೂಡುವೆನಯ್ಯಾ ?

೨೯೮

ಚೇಳಿಂಗೆ ಬಸುಱಾಯಿತ್ತೇ ಕಡೆ, ಬಾಳೆಗೆ ಫಲವಾಯಿತ್ತೇ ಕಡೆ, ನೋಡಾ.
ರಣರಂಗದಲ್ಲಿ ಕಾದುವ ಓಲೆಕಾಱಂಗೆ ಓಸರಿಸಿತ್ತೇ ಕಡೆ.
ಮಾಡುವ ಭಕ್ತಂಗೆ ಮನ ಹೀನವಾದರೆ,
ಅದೇ ಕಡೆ, ಕೂಡಲಸಂಗಮದೇವಾ.

೨೯೯

ವಚನದ ಹುಸಿ–ನುಸುಳೆಂತು ಮಾಣ್ಬುದೆನ್ನಾ ?
ಮನದ ಮರ್ಕಟತನವೆಂತು ಮಾಣ್ಬುದೆನ್ನಾ ?
ಹೃದಯದ ಕಲ್ಮಷವೆಂತು ಮಾಣ್ಬುದೆನ್ನಾ ?
ಕಾಯವಿಕಾರಕ್ಕೆ ತಱಿಸಲುವೋದೆನು :
ಎನಗಿದು ವಿಧಿಯೆ, ಕೂಡಲಸಂಗಮದೇವಾ ?

೨೦೦

ಸುಚಿತ್ತದಿಂದೆನ್ನ ಮನವು ನಿಮ್ಮ ನೆನೆಯಲೊಲ್ಲದು :
ಎಂತಯ್ಯಾ ? ಎನಗಿನ್ನಾವುದು ಗತಿ ? ಎಂತಯ್ಯಾ ?
ಎನಗಿನ್ನಾವುದು ಮತಿ ? ಎಂತಯ್ಯಾ ?
ಹರಹರಾ, ಕೂಡಲಸಂಗಮದೇವಾ, ಮನವ ಸಂತೈಸೆನ್ನಾ.

೨೦೧

ತನುಶುಚಿಯಲ್ಲದವನ ದೇಹಾರವೇಕೆ ?
ದೇವರು ಕೊಡನೆಂಬ ಭ್ರಾಂತದೇಕೆ ?
ಮನಕ್ಕೆ ಮನವೇ ಸಾಕ್ಷಿ : ಸಾಲದೆ, ಲಿಂಗ ತಂದೆ ?
ಹೇಂಗೆ ಮನ ಹಾಂಗೆ ನಿಮ್ಮ ಘನ, ತಪ್ಪದು, ಕೂಡಲಸಂಗಮದೇವಾ.

೨೦೨

ಬೆಲ್ಲವ ತಿಂದ ಕೋಡಗನಂತೆ ಸಿಹಿಯ ನೆನೆಯದಿರಾ, ಮನವೆ.
ಕಬ್ಬ ತಿಂದ ನರಿಯಂತೆ ಹಿಂದಕ್ಕೆಳಸದಿರಾ, ಮನವೆ.
ಗಗನವನಡರಿದ ಕಾಗೆಯಂತೆ ದೆಸೆದೆಸೆಗೆ ಹಂಬಲಿಸದಿರಾ, ಮನವೆ.
ಕೂಡಲಸಂಗನ ಶರಣರ ಕಂಡು ಲಿಂಗವೆಂದೇ ನಂಬು, ಮನವೆ.

೨೦೩

ಮನವೇ ಸರ್ಪ, ತನುವೇ ಹೇಳಿಗೆ :
ಹಾವಿನೊಡತಣ ಹುದುವಾಳಿಗೆ !
ಇನ್ನಾವಾಗ ಕೊಂದಹುದೆಂದಱಿಯೆ,
ಇನ್ನಾವಾಗ ತಿಂದಹುದೆಂದಱಿಯೆ !
ನಿಚ್ಚಕ್ಕೆ ನಿಮ್ಮ ಪೂಜಿಸಬಲ್ಲೊಡೆ, ಅದೇ ಗಾರುಡ,
ಕೂಡಲಸಂಗಮದೇವಾ.

೧೩

ಸಮರ್ಪಣಭಾವ

೩೦೪

ತಂದೆ ನೀನು, ತಾಯಿ ನೀನು, ಬಂಧು ನೀನು ಬಳಗ ನೀನು :
ನೀನಲ್ಲದೆ ಮತ್ತಾರೂ ಇಲ್ಲವಯ್ಯಾ, ಕೂಡಲಸಂಗಮದೇವಾ.
ಹಾಲಲದ್ದು, ನೀರಲದ್ದು !

೩೦೫

ನೀ ಹುಟ್ಟಿಸಿದಲ್ಲಿ ಹುಟ್ಟದೆ, ನೀ ಕೊಂದಲ್ಲಿ ಸಾಯದೆ,
ಎನ್ನ ವಶವೇ ಅಯ್ಯಾ ?
ನೀವಿರಿಸಿದಲ್ಲಿರದೆ ಎನ್ನ ವಶವೇ ಅಯ್ಯಾ ?
ಅಕಟಕಟಾ ! 'ಎನ್ನವನೆನ್ನವನೆ'ನ್ನಯ್ಯಾ, ಕೂಡಲಸಂಗಮದೇವಯ್ಯಾ.

೩೦೬

ಅಧರ ತಾಗುವ ರುಚಿಯು, ಉದರ ತಾಗುವ ಸುಖವ,
ಲಿಂಗಾರ್ಪಿತವಿಲ್ಲದೆ ಕೊಂಡರೆ ಕಿಲ್ಬಿಷ, ನೋಡಾ !
ನೇತ್ರ, ಶ್ರೋತ್ರ, ಜಿಹ್ವೆ, ಘ್ರಾಣ, ತ್ವಕ್ಕು ಮೊದಲಾದ
ಸರ್ವೇಂದ್ರಿಯಂಗಳಲ್ಲಿ ಮುಟ್ಟಿದ ಸಕಲ ಪದಾರ್ಥಂಗಳನು
ಲಿಂಗಕ್ಕೆ ಕೊಟ್ಟು ಕೊಂಡರೆ, ಅದು ಮಹಾಪ್ರಸಾದವಯ್ಯಾ,
ಕೂಡಲಸಂಗಮದೇವಾ.

೩೦೭

ತನುವ ಬೇಡಿದಡೀವೆ, ಮನವ ಬೇಡಿದಡೀವೆ, ಧನವ ಬೇಡಿದಡೀವೆ :
ಬೇಡು ! ಬೇಡೆಲೆ ಹಂದೇ !
ಕಣ್ಣ ಬೇಡಿದಡೀವೆ, ತಲೆಯ ಬೇಡಿದಡೀವೆ, ಕೂಡಲಸಂಗಮದೇವಾ.
ನಿಮಗಿತ್ತು ಶುದ್ಧನಾಗಿಪ್ಪೆ, ನಿಮ್ಮ ಪುರಾತರ ಮನೆಯಲ್ಲಿ.

೩೦೮

ಸಂಸಾರವೆಂಬ ಶ್ವಾನನಟ್ಟಿ ಮೊಸಲ ಬೀಸರ ಮಾಡಯ್ಯಾ.
ಎನ್ನ ಚಿತ್ತವು ನಿಮ್ಮ ಧ್ಯಾನವಯ್ಯಾ:
ನೀವಲ್ಲದೆ ಮತ್ತೇನನೂ ಅಱಿಯೆನು.
ಕನ್ನೆಯಲ್ಲಿ ಕೈಪಿಡಿದೆನು, ನಿಮ್ಮಲ್ಲಿ ನೆರೆದೆನು,
ಮನ್ನಿಸು ಕಂಡಾ, ಮಹಾಲಿಂಗವೇ.
ಸತಿಯಾನು, ಪತಿ ನೀನು ಅಯ್ಯಾ:
ಮನೆಯೊಡೆಯ ಮನೆಯ ಕಾಯ್ದಿಪ್ಪಂತೆ
ನೀನೆನ್ನ ಮನವ ಕಾಯ್ದಿಪ್ಪ ಗಂಡನು!
ನಿಮಗೋತ ಮನವನನ್ಯಕ್ಕೆ ಹರಿಸಿದರೆ ನಿನ್ನಭಿಮಾನ ಹಾನಿ,
ಕೂಡಲಸಂಗಮದೇವಾ.

೩೦೯

ತನು ನಿಮ್ಮದೆಂದ ಬಳಿಕ ಎನಗೆ ಬೇಱೆ ತನುವಿಲ್ಲ;
ಮನ ನಿಮ್ಮದೆಂದ ಬಳಿಕ ಎನಗೆ ಬೇಱೆ ಮನವಿಲ್ಲ;
ಧನ ನಿಮ್ಮದೆಂದ ಬಳಿಕ ಎನಗೆ ಬೇಱೆ ಧನವಿಲ್ಲ.
ಇಂತೀ ತ್ರಿವಿಧವೂ ನಿಮ್ಮದೆಂದಱಿದ ಬಳಿಕ
ಎನಗೆ ಬೇಱೆ ವಿಚಾರವುಂಟೆ, ಕೂಡಲಸಂಗಮದೇವಾ?

೩೧೦

ಧನ ಸವೆದರೆ ತನುವನರ್ಪಿಸುವೆ,
ತನು ಸವೆದರೆ ಮನವನರ್ಪಿಸುವೆ,
ಮನ ಸವೆದರೆ ನಿರ್ಭಾವವನರ್ಪಿಸುವೆ!
ಕೂಡಲಸಂಗಮದೇವಯ್ಯಾ,
ಚೆನ್ನಬಸವಣ್ಣನ ತೆತ್ತಿಗನಾದ ಬಳಿಕ
ನಾನು ನಿಮ್ಮಲ್ಲಿ ಕೂಡಿ ಅರ್ಪಿಸಿ ಶುದ್ಧನಪ್ಪೆನಯ್ಯಾ!

೩೧೧

‘ ಒಡೆಯರೊಡವೆಯ ಕೊಂಡರೆ ಕಳ್ಳಂಗಳಲಾಯಿತ್ತೆ ’ಂಬ
ಗಾದೆ ಎನಗಿಲ್ಲಯ್ಯಾ.
ಇಂದೆನ್ನ ವಧುವ, ನಾಳೆನ್ನ ಧನವ, ನಾಳಿದ್ದೆನ್ನ ತನುವ
ಬೇಡರೇಕಯ್ಯಾ ?
ಕೂಡಲಸಂಗಮದೇವಾ, ಆನು ಮಾಡಿದುದಲ್ಲದೆ
ಬಯಸಿದ ಬಯಕೆ ಸಲುವುದೆ, ಅಯ್ಯಾ ?

೩೧೨

ಎಲ್ಲವ ಬೇಡಿದರೆಮ್ಮವರು : ಒಂದ ಬೇಡಮುಱಿದರಯ್ಯಾ :
ಮರ್ತ್ಯಲೋಕದ ಗಣಂಗಳು ಒಂದ ಬೇಡಮುಱಿದರು :
ಕೂಡಲಸಂಗಮದೇವಾ, ಎನ್ನ ಬೇಡಮುಱಿದರು !

೩೧೩

ಆಕಳ ಕಳ್ಳರು ಕೊಂಡೊಯ್ದರೆನ್ನದಿರಿಂ ಭೋ, ನಿಮ್ಮ ಧರ್ಮ !
ಬೊಬ್ಬಿಡದಿರಿಂ ಭೋ, ನಿಮ್ಮ ಧರ್ಮ !
ಆಱಿಡದಿರಿಂ ಭೋ, ನಿಮ್ಮ ಧರ್ಮ !
ಅಲ್ಲಿ ಉಂಬರೆ ಸಂಗ, ಇಲ್ಲಿ ಉಂಬರೆ ಸಂಗ !
ಕೂಡಲಸಂಗಮದೇವ ಏಕೋಭಾವ.

೩೧೪

ಅರ್ಥಪ್ರಾಣಾಭಿಮಾನವನೊಪ್ಪಿಸಿದಲ್ಲಿ ಭಕ್ತನಪ್ಪನೆ? ಅಲ್ಲ.
ಆದಿರುದ್ರನ ಮಗಳು ಆದಿಶಕ್ತಿ; ಆದಿಶಕ್ತಿಯ ಮಗ ವಿಷ್ಣು;
ವಿಷ್ಣುವಿನ ಅರ್ಧಾಂಗಿ ಲಕ್ಷ್ಮಿ;
ಈ ತೊತ್ತಿನ ತೊತ್ತಿನ ಪಡಿದೊತ್ತನೊಪ್ಪಿಸಿದಲ್ಲಿ
ಭಕ್ತನಪ್ಪನೆ? ಅಲ್ಲ.
ಎನ್ನ ಮನದೊಡೆಯ ಕೂಡಲಸಂಗಮದೇವಾ,
ನಿಮ್ಮ ಮನವ ನಿಮಗೊಪ್ಪಿಸಿ, ನಾ ಶುದ್ಧ ಕಾಣಾ !

೩೧೫

ಅರ್ಥಪ್ರಾಣಾಭಿಮಾನವ ಕೊಟ್ಟೆನೆಂಬವರಲ್ಲದೆ,
ಕೊಟ್ಟ ಭಕ್ತರನಾರನೂ ಕಂಡುದಿಲ್ಲ.
ದಾಸ ತನ್ನ ವಸ್ತ್ರ ಕೊಟ್ಟನಲ್ಲದೆ ತನ್ನ ಕೊಟ್ಟುದಿಲ್ಲ;
ಬಲ್ಲಾಳ ತನ್ನ ವಧುವ ಕೊಟ್ಟನಲ್ಲದೆ ತನ್ನ ಕೊಟ್ಟುದಿಲ್ಲ;
ಸಿರಿಯಾಳ ತನ್ನ ಮಗನ ಕೊಟ್ಟನಲ್ಲದೆ ತನ್ನ ಕೊಟ್ಟುದಿಲ್ಲ.
ಇವೆಲ್ಲ ಹೊಱಗಣ ಮಾತು :
ಕೂಡಲಸಂಗಮದೇವರಲ್ಲಿ ತನ್ನ ಕೊಟ್ಟ ಸಿಂಧುಮರಾಳ !

೩೧೬

ಅಂಕ ಕಂಡಾ : ಕೋಲಾಸೆ ಮತ್ತೇಕಯ್ಯಾ ?
ಲೆಂಕ ಕಂಡಾ : ಪ್ರಾಣದಾಸೆ ಮತ್ತೇಕಯ್ಯಾ ?
ಭಕ್ತ ಕಂಡಾ : ತನು ಮನ ಧನದಾಸೆ ಮತ್ತೇಕಯ್ಯಾ ?
ನಿಮ್ಮಂಕೆಗೆ ಝುಂಕೆಗೆ ಶಂಕಿಸಿದೆನಾದರೆ,
ಎನ್ನ ಲೆಂಕತನಕ್ಕೆ ಹಾನಿ, ಕೂಡಲಸಂಗಮದೇವಾ !

೩೧೭

ಪಂಡಿತನಾಗಲಿ, ಮೂರ್ಖನಾಗಲಿ, ಸಂಚಿತಕರ್ಮ ಉಂಡಲ್ಲದೆ ಬಿಡದು;
ಪ್ರಾರಬ್ಧ ಕರ್ಮ ಭೋಗಿಸಿದಲ್ಲದೆ ಹೋಗದೆಂದು
ಶ್ರುತಿ ಸಾಜುತ್ತೈದಾವೆ, ನೋಡಾ:
ತಾನಾವ ಲೋಕದೊಳಗಿದ್ದರೆಯೂ ಬಿಡದು.
ಕರ್ಮಫಲಗೂಡಿ ಕೂಡಲಸಂಗಮದೇವಂಗೆ
ಆತ್ಮನೈವೇದ್ಯವ ಮಾಡಿದವನೆ ಧನ್ಯ.

೩೧೮

ಬಂದುದ ಕೈಕೊಳ್ಳಬಲ್ಲರೆ ನೇಮ;
ಇದ್ದುದ ವಂಚನೆ ಮಾಡದಿದ್ದರೆ, ಅದು ನೇಮ;
ನಡೆದು ತಪ್ಪದಿದ್ದರೆ ನೇಮ;
ನುಡಿದು ಹುಸಿಯದಿದ್ದರೆ ನೇಮ;
ನಮ್ಮ ಕೂಡಲಸಂಗನ ಶರಣರು ಬಂದರೆ
ಒಡೆಯರಿಗೊಡವೆಯನೊಪ್ಪಿಸುವುದೇ ನೇಮ.

೩೧೯

ನಡೆವರಯ್ಯಾ ಒಡೆಯರು ತನು–ಮನ–ಧನದ ಮೇಲೆ;
ನುಡಿವರಯ್ಯಾ ಒಂದು ನಿಮಿಷ ಬಾರದಿರ್ದೊಡೆ;
ಜಱಿವರಯ್ಯಾ ಒಡೆಯರು ಮನಬಂದ ಪರಿಯಲಿ;
ಶಿವ ಶಿವಾ! ಅಣೆವರಯ್ಯಾ ಮಂಡೆಯನೂಱಿ.
ಪ್ರಾಣದೊಡೆಯರಯ್ಯಾ, ಕೂಡಲಸಂಗಮದೇವಾ, ನಿಮ್ಮ ಶರಣರು.

೩೨೦

ಬತ್ತೀಸಾಯುಧದಲ್ಲಿ ಅಭ್ಯಾಸವ ಮಾಡಿದರೇನು ?
ಹಗೆಯ ಕೊಲುವರೆ ಒಂದಲಗು ಸಾಲದೆ ?
ಲಿಂಗವ ಗೆಲುವರೆ 'ಶರಣಸತಿ ಲಿಂಗಪತಿ' ಎಂಬುದೊಂದಲಗು ಸಾಲದೆ ?
ಎನಗೆ ನಿನಗೆ ಜಂಗಮಪ್ರಸಾದವೆಂಬಲಗು ಸಾಲದೆ,
ಕೂಡಲಸಂಗಮದೇವಾ ?

೩೨೧

ಪರಿಯಾಣವೆ ಭಾಜನವೆಂಬರು : ಪರಿಯಾಣ ಭಾಜನವಲ್ಲ :
ಲಿಂಗಕ್ಕೆ ತನ್ನ ಮನವೆ ಭಾಜನ.
ಪ್ರಾಣವನು ಬೀಸರವೋಗದೆ ಮೀಸಲಾಗರ್ಪಿಸಬಲ್ಲರೆ
ಕೂಡಿಕೊಂಡಿರ್ಪ ನಮ್ಮ ಕೂಡಲಸಂಗಮದೇವ.

೩೨೨

ನಾ ನಿಮ್ಮ ನೆನೆವೆನು : ನೀವೆನ್ನನಱಿಯರಿ ;
ನಾ ನಿಮ್ಮನೋಲೈಸುವೆನು : ನೀವೆನ್ನ ಕಾಣರಿ.
ನಾನೆಂತು ಬದುಕುವೆನೆಂತು ಜೀವಿಸುವೆನಯ್ಯಾ ?
ಕೂಡಲಸಂಗಮದೇವಾ,
ಎನಗೆ ನೀವೇ ಪ್ರಾಣ ಗತಿ ಮತಿ ನೋಡಯ್ಯಾ !

೩೨೩

ಕಲಿಯ ಕೈಯ ಕೈದುವಿನಂತಿರಬೇಕು, ಅಯ್ಯಾ ;
ಎಲುದೋಱಿ ಸರಸವಾಡಿದರೆ ಸೈರಿಸಬೇಕಯ್ಯಾ.
ರಣದಲ್ಲಿ ತಲೆಹಱಿದು ಅಟ್ಟೆ ನೆಲಕ್ಕೆ ಬಿದ್ದು
ಬೊಬ್ಬಿಡಲದಕ್ಕೆ ಒಲಿವ ಕೂಡಲಸಂಗಮದೇವ.

೩೨೪

ಬಲ್ಲಿದರೊಡನೆ ಬವರವಾದರೆ ಗೆಲಲುಂಟು, ಸೋಲಲುಂಟು :
ಕಳ್ಳನೊಡನೆ ಭಾಷೆ ಪೂರಾಯವೇ ಅಯ್ಯಾ ?
ನಮ್ಮ ಕೂಡಲಸಂಗನ ಶರಣರಿಗೆ
ಮಾಡಿ ಮಾಡಿ ಧನ ಸವೆದು ಬಡವಾದರೆ
ಆ ಭಕ್ತನು ಆ ಲಿಂಗಕ್ಕೆ ಪೂಜೆಯಹನು.

೩೨೫

ಮಾಡುವಾತ ನಾನಲ್ಲಯ್ಯಾ, ನೀಡುವಾತ ನಾನಲ್ಲಯ್ಯಾ,
ಬೇಡುವಾತ ನಾನಲ್ಲಯ್ಯಾ, ನಿಮ್ಮ ಕಾರುಣ್ಯವಲ್ಲದೆ, ಎಲೆ ದೇವಾ !
ಮನೆಯ ತೊತ್ತಲಸಿದರೆ ಒಡತಿ ಮಾಡಿಕೊಂಬಂತೆ
ನಿನಗೆ ನೀ ಮಾಡಿಕೊ, ಕೂಡಲಸಂಗಮದೇವಾ.

೩೨೬

ಎನ್ನ ವಾಮ-ಕ್ಷೇಮ ನಿಮ್ಮದಯ್ಯಾ;
ಎನ್ನ ಹಾನಿ-ವೃದ್ಧಿ ನಿಮ್ಮದಯ್ಯಾ;
ಎನ್ನ ಮಾನಾಪಮಾನ ನಿಮ್ಮದಯ್ಯಾ;—
ಬಳ್ಳಿಗೆ ಕಾಯಿ ದಿಮ್ಮಿತ್ತೆ,
ಕೂಡಲಸಂಗಮದೇವಾ ?

೩೨೭

ಲಿಂಗಮುಖದಿಂದ ಬಂದ ಪ್ರಸಾದವಲ್ಲದೆ ಕೊಂಡೆನಾದರೆ,
ನಿಮ್ಮಾಣೆ, ನಿಮ್ಮ ಪ್ರಮಥರಾಣೆ!
ಲಿಂಗಾರ್ಪಿತವಲ್ಲದೆ ಉದಕವ ಮುಕ್ಕುಳಿಸಿದೆನಾದರೆ,
ಸಲ್ಲೆನು ನಿಮ್ಮ ಗಣಾಚಾರಕ್ಕಯ್ಯಾ!
ಲಿಂಗಾರ್ಪಿತವಲ್ಲದೆ ಹುಲ್ಲುಕಡ್ಡಿಯ ಕೊಂಡೆನಾದರೆ,
ಬಲ್ಲೆ, ಮುಂದೆ ಭವಘೋರನರಕವೆಂಬುದ!
ನಿಮಗೆತ್ತಿದ ಕರದಲ್ಲಿ ಮತ್ತೊಂದಕ್ಕೆ ಕೈಯಾನೆನು:
ಆಳವಱಿಯದೆ ನುಡಿದೆನು—
ಕಡೆಮುಟ್ಟೆ ಸಲಿಸದಿದ್ದರೆ, ತಲೆದಂಡ!
ಕೂಡಲಸಂಗಮದೇವಾ.

೩೨೮

ಗುರುಲಿಂಗಜಂಗಮದಿಂದ ಪಾದೋದಕಪ್ರಸಾದವಾಯಿತ್ತು.
ಆ ಭಾವವೆ ಮಹಾಪ್ರಸಾದವಾಗಿ—
ಎನಗೆ ಬೇಱೆ ಪ್ರಸಾದವೆಂಬುದಿಲ್ಲ,
ಕೂಡಲಸಂಗಮದೇವಾ.

೩೨೯

ಅರ್ಪಿಸುವ ಸುಖ ತಪ್ಪದೆ ಇಂಬುಗೊಂಡಿತ್ತಾಗಿ
ಅಲ್ಲಿಯೆ ಅರ್ಪಿತವಾಯಿತ್ತಯ್ಯಾ!
ಅಂಗವೆಂಬ ಶಂಕೆ ತಾನೆತ್ತ ಹೋಯಿತ್ತೆಂದಱಿಯೆ!
ಕಾಯಸುಖವೇ ಲಿಂಗಸುಖಕ್ರೀಡಾಯಿತ್ತು!
ಅಂತಪ್ಪ ಅರ್ಪಿತದಷ್ಟ ತಲೆಗೇಱಿದಲ್ಲಿ
ನೀ ಮುಂತಾಗಿರ್ದೆ ಕೂಡಲಸಂಗಮದೇವಾ.

೩೩೦

ಗುರುವಿಂಗೆ ತನುವ ಕೊಟ್ಟು, ಲಿಂಗಕ್ಕೆ ಮನವ ಕೊಟ್ಟು,
ಜಂಗಮಕ್ಕೆ ಧನವ ಕೊಟ್ಟು : ಇಂತೀ ತ್ರಿವಿಧಕ್ಕೆ ತ್ರಿವಿಧವ ಕೊಟ್ಟು,
ನಾನು ಶುದ್ಧನಾದೆನು, ಕಾಣಾ, ಕೂಡಲಸಂಗಮದೇವಾ.

೩೩೧

ತನುವ ಕೊಟ್ಟು ತನು ಬಯಲಾಯಿತ್ತು,
ಮನವ ಕೊಟ್ಟು ಮನ ಬಯಲಾಯಿತ್ತು,
ಧನವ ಕೊಟ್ಟು ಧನ ಬಯಲಾಯಿತ್ತು.
ಇಂತೀ ತ್ರಿವಿಧವ ಕೊಟ್ಟಕಾರಣ
ಕೂಡಲಸಂಗಯ್ಯನಲ್ಲಿ ಬಸವಣ್ಣಂಗೆ
ಬಯಲ ಸಮಾಧಿಯಾಯಿತ್ತು !

೧೧

ಶರಣರು : ಶರಣವಾಣಿ

೩೩೨

ಸಮುದ್ರ ಘನವೆಂಬೆನೆ ? ಧರೆಯ ಮೇಲಡಗಿತ್ತು.
ಧರೆ ಘನವೆಂಬೆನೆ ? ನಾಗೇಂದ್ರನ ಫಣಾಮಣಿಯ ಮೇಲಡಗಿತ್ತು.
ನಾಗೇಂದ್ರ ಘನವೆಂಬೆನೆ? ಪಾರ್ವತಿಯ ಕಿಱುಕುಣಿಕೆಯ ಮುದ್ರಿಕೆಯಾಯಿತ್ತು.
ಅಂತಹ ಪಾರ್ವತಿ ಘನವೆಂಬೆನೆ ? ಪರಮೇಶ್ವರನ ಅರ್ಧಾಂಗಿಯಾದಳು.
ಅಂತಹ ಪರಮೇಶ್ವರ ಘನವೆಂಬೆನೆ ?
ನಮ್ಮ ಕೂಡಲಸಂಗನ ಶರಣರ
ಮನದ ಕೊನೆಯ ಮೊನೆಯ ಮೇಲಡಗಿದನು !

೩೩೩

ಸತ್ತು ಹುಟ್ಟುವನಲ್ಲ, ಸಂದೇಹಿ ಸೂತಕಿಯಲ್ಲ,
ಆಕಾರನಿರಾಕಾರನಲ್ಲ, ನೋಡಯ್ಯಾ.
ಕಾಯವಂಚಕನಲ್ಲ, ಜೀವವಂಚಕನಲ್ಲ,
ನಿರಂತರಸಹಜ, ನೋಡಯ್ಯಾ.
ಶಂಕೆಯಿಲ್ಲದ ಮಹಾಮಹಿಮನು ನೋಡಯ್ಯಾ,
ಕೂಡಲಸಂಗನ ಶರಣನುಪಮಾತೀತ ನೋಡಯ್ಯಾ !

೩೩೪

ಮನೆ ನೋಡಾ ಬಡವರು : ಮನ ನೋಡಾ ಘನ ;
ಸೋಂಕಿನಲ್ಲಿ ಸುಖಿ : ಸರ್ವಾಂಗಕಲಿಗಳು ;
ಪಸಾರಕ್ಕನುವಿಲ್ಲ : ಬಂದ ತತ್ಕಾಲಕ್ಕುಂಟು ;
ಕೂಡಲಸಂಗನ ಶರಣರು ಸ್ವತಂತ್ರಧೀರರು !

೩೩೫

ಕಟ್ಟಿ ಬಿಡುವನೆ ಶರಣನು ? ಬಿಟ್ಟು ಹಿಡಿವನೆ ಶರಣನು ?
ನಡೆದು ತಪ್ಪುವನೆ ಶರಣನು ? ನುಡಿದು ಹುಸಿವನೆ ಶರಣನು ?
ಸಹಜಸಜ್ಜನಿಕೆ ತಪ್ಪಿದರೆ,
ಕೂಡಲಸಂಗಯ್ಯ ಮೂಗ ಹಲುದೋಱಿ ಕೊಯ್ವ !

೩೩೬

ಪರಮತತ್ತ್ವದ ನಿಜಸಂಯುಕ್ತರ
ಆನು ನೀನೆಂಬ ಶಬ್ದಸುಖಿಗಳ ತೋಱಾ ಎನಗೆ.
ಮಹಾನುಭಾವರ ತೋಱಾ ಎನಗೆ.
ಲಿಂಗೈಕ್ಯರ, ಲಿಂಗಸುಖಿಗಳ, ಲಿಂಗಗೂಡಾಗಿಪ್ಪವರ,
ಲಿಂಗಾಭಿಮಾನಿಗಳ ತೋಱಾ ಎನಗೆ.
ಅಹೋರಾತ್ರಿಯಲ್ಲಿ ನಿಮ್ಮ ಶರಣರ ಸೇವೆಯಲ್ಲಿರಿಸು,
ಕೂಡಲಸಂಗಮದೇವಾ.

೩೩೭

ಶರಣಸನ್ಮತವಪ್ಪ ನಿಜಗುಣಭರಿತನಪ್ಪಡೆ
ಸತ್ತ್ವ ರಜ ತಮ ಕ್ರೋಧ ಬಿಡದನ್ನಕ್ಕ,
ಅನುಭಾವವೆಲ್ಲಿಯದೋ—
ಆತ್ಮಸ್ತುತಿ ಪರನಿಂದೆಯ ಬಿಡದನ್ನಕ್ಕ,
ಅರಿಷಡ್ವರ್ಗ ದಶವಾಯು ಬೆರಸಿರ್ಪ
ಕಳಂಕವಪ್ಪ ತನು ಬಿಡದನ್ನಕ್ಕ ?
ಸಂಸಾರ ಮಾಣ್ದಲ್ಲದೆ
ಶರಣಸಜ್ಜನಿಕೆ, ಸಮಯಾಚಾರ ನಿಜವ್ರತವು
ದುರಾಚಾರಿಗಳಿಗಳವಡದು,
ನಮ್ಮ ಕೂಡಲಸಂಗನ ಶರಣರಿಗಲ್ಲದೆ.

೩೩೮

ಶರಣ ನಿದ್ರೆಗೆಯ್ದರೆ ಜಪ, ಕಾಣಿರೊ,
ಶರಣನೆದ್ದು ಕುಳಿತರೆ ಶಿವರಾತ್ರಿ, ಕಾಣಿರೋ;
ಶರಣ ನಡೆದುದೆ ಪಾವನ, ಕಾಣಿರೊ,
ಶರಣ ನುಡಿದುದೆ ಶಿವತತ್ತ್ವ, ಕಾಣಿರೊ,
ಕೂಡಲಸಂಗನ ಶರಣರ ಕಾಯವೇ ಕೈಲಾಸ, ಕಾಣಿರೊ !

೩೩೯

ಮುನ್ನೂಱಱವತ್ತು ನಕ್ಷತ್ರಕ್ಕೆ ಬಾಯಿಬಿಟ್ಟುಕೊಂಡಿಪ್ಪುದೆ, ಸಿಂಪು ?
ಅದು ಸ್ವಾತಿಗಲ್ಲದೆ ಬಾಯ್ದೆಱೆಯದು ಕೇಳು ಕೇಳಾ, ತಂದೆ :
ಎಲ್ಲವಕ್ಕೆ ಬಾಯ್ಬಿಟ್ಟರೆ ತಾನೆಲ್ಲಿಯ ಮುತ್ತಪ್ಪುದೊ ?
ಪರಮಂಗಲ್ಲದೆ ಹರುಷತಿಕೆಯಿಲ್ಲೆಂದು ಕರಣಾದಿಗುಣಂಗಳ ಮಱೆದರು,
ಇದುಕಾರಣ, ಕೂಡಲಸಂಗನ ಶರಣರು ಸಪ್ತವ್ಯಸನಿಗಳಲ್ಲಾಗಿ.

೩೪೦

ಮುನ್ನಿನವರು ಹೋದ ದಾರಿ ಭಯ ಕಾಣಿರಣ್ಣಾ :
ಬಲ್ಲಾಳನ ವಧುವಿನೊಡನೆ ಸರಸವಾಡಿದಂದಿಂದ ಭಯ ಕಾಣಿರಣ್ಣಾ !
ಸಿರಿಯಾಳನ ಮಗನ ಬೇಡಿದಂದಿಂದ ಭಯ ಕಾಣಿರಣ್ಣಾ !
ದಾಸನ ವಸ್ತ್ರವ ಸೆಳೆದಂದಿಂದ ಭಯ ಕಾಣಿರಣ್ಣಾ !
ಅಘಟಿತಘಟಿತರು, ವಿಪರೀತ ಚರಿತರು :
ಕೂಡಲಸಂಗನ ಶರಣರು ನಡೆದ ದಾರಿ ಭಯ ಕಾಣಿರಣ್ಣಾ !

೩೪೧

ಮಡಕೆಯ ಮಾಡುವರೆ ಮಣ್ಣೇ ಮೊದಲು,
ತೊಡಗೆಯ ಮಾಡುವರೆ ಹೊನ್ನೇ ಮೊದಲು,
ಶಿವಪಥವನಱಿವರೆ ಗುರುಪಥವೇ ಮೊದಲು,
ಕೂಡಲಸಂಗಮದೇವರನಱಿವರೆ ಶರಣರ ಸಂಗವೆ ಮೊದಲು.

೩೪೨

ತಮತಮಗೆಲ್ಲ ನೊಸಲ ಕಣ್ಣವರು, ತಮತಮಗೆಲ್ಲ ನಂದಿವಾಹನರು,
ತಮತಮಗೆಲ್ಲಾ ಖಟ್ವಾಂಗಕಪಾಲತ್ರಿಶೂಲಧರರು :
ದೇವರಾರು, ಭಕ್ತರಾರು ಹೇಳಿರಯ್ಯಾ !
ಕೂಡಲಸಂಗಮದೇವಾ, ನಿಮ್ಮ ಶರಣರು ಸ್ವತಂತ್ರರು :
ಎನ್ನ ಬಚ್ಚಬಱಿಯ ಬಸವನೆನಿಸಯ್ಯಾ.

೩೪೩

ಗೀತವ ಬಲ್ಲಾತ ಜಾಣನಲ್ಲ, ಮಾತ ಬಲ್ಲಾತ ಜಾಣನಲ್ಲ :
ಜಾಣನು ಜಾಣನು, ಆತ ಜಾಣನು : ಲಿಂಗವ ನೆಱೆನಂಬಿದಾತ ;
ಜಾಣನು ಜಂಗಮಕ್ಕೆ ಸವೆಸುವಾತ.
ಆತ ಜಾಣನು :
ಜವನ ಬಾಯಲು ಬಾಲವ ಕೊಯ್ದು ಹೋದಾತ.
ಆತ ಜಾಣನು :
ನಮ್ಮ ಕೂಡಲಸಂಗನ ಶರಣನು !

೩೪೪

ಗಿರಿಗಳ ಮೇಲೆ ಹಲವು ತರುಮರಾದಿಗಳಿದ್ದು
ಸಿರಿಗಂಧದ ಸನ್ನಿಧಿಯಲು ಪರಿಮಳವಾಗವೆ ?
ಲಿಂಗವಂತನ ಸನ್ನಿಧಿಯಿಂದ ಹಿಂದಣ ದುಸ್ಸಂಗ ಕೆಡುವುದು.
ಕೂಡಲಸಂಗಮದೇವಯ್ಯಾ,
ಸಿರಿಯಾಳನ ಸಾರ್ದ ನರರೆಲ್ಲ ಸುರರಾಗರೆ ?

೩೪೫

ಅನಾಯಾಸದಿಂದ ಮನೆಯ ಮಾಡಿ,
ನಿರಾಯಾಸದಿಂದ ಪರಮ ಸುಖಿ !
ರೂಹಿಸುವಲ್ಲಿ ರೂಪಾಧಿಕ
ನೋಡುವಲ್ಲಿ ನೋಟ ಘನ !
ಇಂತಪ್ಪ ಸಹಜಸಂಗಿಯ ನಿಲವಿನ ಪರಿ :
ಉದಕದೊಳಗಣ ಬಿಂದು ಉದಯ ರತ್ನದಂತೆ,
ಕೂಡಲಸಂಗನ ಶರಣರ ನಿಲವು.

೩೪೬

ಕೆಱೆ ಹಳ್ಳ ಬಾವಿಗಳು ಮೈದೆಗೆವರೆ,
ಗುಳ್ಳೆ ಗೊರಜೆ ಚಿಪ್ಪುಗಳು ಕಾಣಬಹುದು ;
ವಾರಿಧಿ ಮೈದೆಗೆದರೆ ರತ್ನಂಗಳು ಕಾಣಬಹುದು.
ಕೂಡಲಸಂಗನ ಶರಣರು ಮನದೆಱೆದು ಮಾತಾಡಿದರೆ
ಲಿಂಗವೆ ಕಾಣಬಹುದು !

೩೪೭

ಕುಲಮದವಳಿಯದನ್ನಕ್ಕ ಶರಣನಾಗಲೇಕೆ ?
ವಿಧಿವಶ ಬಿಡದನ್ನಕ್ಕ ಭಕ್ತನಾಗಲೇಕೆ ?
ಹಮ್ಮಿನ ಸೊಮ್ಮಿನ ಸಂಬಂಧ ಬಿಟ್ಟು
ಕಿಂಕಿಲ ಕಿಂಕಿಲ ಕಿಂಕಿಲನಾಗಿರಬೇಕು !
ಹೆಪ್ಪನೆಱೆದ ಹಾಲು ಕೆಟ್ಟು ತುಪ್ಪವಪ್ಪಂತೆ ಇಪ್ಪರು,
ಕೂಡಲಸಂಗಮದೇವಾ, ನಿಮ್ಮ ಶರಣರು.

೩೪೮

ಕಾಣಿಯ ಲೋಭ ಕೋಟಿಯ ಲಾಭವ ಕೆಡಿಸಿದುದ ನಾನಱಿಯೆನಯ್ಯಾ.
ಭಕ್ತಿಯ ಕುಳವ ನಾನಱಿಯದೆ ಮತಿಗೆಟ್ಟ ಪರಿಯ ನೋಡಯ್ಯಾ.
ಕೂಡಲಸಂಗನ ಶರಣರ ಸಂಗದಿಂದಲಱಿದರೆ ನಾನು ಬದುಕುವೆನಯ್ಯಾ.

೩೪೯

ಕಾಣಬಹುದೆ ಪರುಷದ ಗಿರಿಯಂಥಕಂಗೆ ?
ಅಱಿಯಬಹುದೆ ರಸದ ಭಾವಿ ನಿರ್ಭಾಗ್ಯಂಗೆ ?
ತೆಗೆಯಬಹುದೆ ಕಡವರವು ದರಿದ್ರಂಗೆ ?
ಕಱೆಯಬಹುದೆ ಕಾಮಧೇನುವಶುದ್ಧಂಗೆ ?
ಹೊನ್ನಹುಳವ ಕಂಡು ನರಿ ತನ್ನ ಬಾಲವ
ಹುಣ್ಣ ಮಾಡಿಕೊಂಡರೆ ಹೋಲಬಹುದೆ ?
ಎನ್ನೊಡೆಯ ಕೂಡಲಸಂಗನ ಶರಣನು
ಪುಣ್ಯವಿಲ್ಲದೆ ಕಾಣಬಹುದೆ ?

೩೫೦

ಎನ್ನ ಕಾಯದ ಕರಸ್ಥಳದಲ್ಲಿ ಪ್ರಭುದೇವರ ಕಂಡೆನು;
ಎನ್ನ ಮನದ ಕರಸ್ಥಳದಲ್ಲಿ ಚೆನ್ನಬಸವಣ್ಣನ ಕಂಡೆನು;
ಎನ್ನಱುಹಿನ ಕರಸ್ಥಳದಲ್ಲಿ ಮಡಿವಾಳಯ್ಯನ ಕಂಡೆನು:
ಒಳಹೊಱಗು, ಹೊಱಗೊಳಗೆಂಬ ಭೇದವನಱಿಯದೆ ಇದ್ದೆನು.
ಕೂಡಲಸಂಗಮದೇವಯ್ಯಾ,
ನಿಮ್ಮ ಶರಣರು ಎನ್ನ ಪಾವನ ಮಾಡಿ
ಪರಿಣಾಮವ ಅಂತಿಂತೆನಲಮ್ಮದೆ 'ನಮೋ ನಮೋ' ಎನುತಿರ್ದೆನು.

೩೫೧

ಆರಾರ ಸಂಗವೇನೇನ ಮಾಡದಯ್ಯಾ? :
ಕೀಡಿ ಕುಂಡಲಿಗನಾಗದೆ ಅಯ್ಯಾ?
ಚಂದನದ ಸನ್ನಿಧಿಯಲಿ ಪರಿಮಳ ತಾಗಿ
ಬೇವು ಬೊಬ್ಬುಳಿ ತಱಿಯ ಗಂಧಂಗಳಾಗವೆ?
ನಮ್ಮ ಕೂಡಲಸಂಗನ ಶರಣರ ಸನ್ನಿಧಿಯಿಂದ
ಕರ್ಮ ನಿರ್ಮಳವಾಗದಿಹುದೆ?

೩೫೨

ಅರ್ಥರೇಖೆ ಇದ್ದಲ್ಲಿ ಫಲವೇನು, ಆಯುಷ್ಯರೇಖೆ ಇಲ್ಲದನ್ನಕ್ಕ?
ಹಂದೆಯ ಕೈಯಲ್ಲಿ ಚಂದ್ರಾಯುಧವಿರ್ದು ಫಲವೇನು?
ಅಂಧಕನ ಕೈಯಲ್ಲಿ ದರ್ಪಣವಿರ್ದು ಫಲವೇನು?
ಮರ್ಕಟನ ಕೈಯಲ್ಲಿ ಮಾಣಿಕವಿರ್ದು ಫಲವೇನು?
ನಮ್ಮ ಕೂಡಲಸಂಗನ ಶರಣರನಱಿಯದವರ ಕೈಯಲ್ಲಿ
ಲಿಂಗವಿರ್ದು ಫಲವೇನು, ಶಿವಪಥವನಱಿಯದನ್ನಕ್ಕ?

೩೫೩

ಅರಗಿನ ಪುತ್ಥಳಿಯನುರಿಯ ನಾಲಗೆ ಹೊಯ್ದು
ಮಾತಾಡುವ ಸರಸ ಬೇಡ.
ಬೆಣ್ಣೆಯ ಬೆನಕಂಗೆ ಕೆಂಡದುಂಡಲಿಗೆಯ ಮಾಡಿ
ಚೆಲ್ಲವಾಡಿದರೆ ಹಲ್ಲು ಹೋಹುದು !
ಕೂಡಲಸಂಗನ ಶರಣರೊಡನೆ ಸರಸವಾಡಿದರೆ,
ಅದು ವಿರಸ ಕಾಣಿರಯ್ಯಾ !

೩೫೪

ಎಮ್ಮವರಿಗೆ ಸಾವಿಲ್ಲ; ಎಮ್ಮವರು ಸಾವನಱಿಯರು;
ಸಾವೆಂಬುದು ಸ್ವಯವಲ್ಲ.
ಲಿಂಗದಲ್ಲಿ ಉದಯವಾದ ಲಿಂಗೈಕ್ಯಂಗೆ ಆ ಲಿಂಗದಲ್ಲಿಯಲ್ಲದೆ
ಬೇಱೆ ಮತ್ತೊಂದೆಡೆಯುಂಟೆ, ಕೂಡಲಸಂಗಮದೇವಾ ?

೩೫೫

ಈ ಲೋಕದ ಭೀತರು ಆ ಲೋಕದ ಕಲಿಗಳು.
ಸಾಲೋಕ್ಯ ಸಾಮೀಪ್ಯ ಸಾರೂಪ್ಯ ಸಾಯುಜ್ಯರೆಲ್ಲರೂ ಅಜಾತಂಗೆ ಸರಿಯೆ ?
ಮೂಜಗದಲ್ಲಿ ನಿರತರು, ಕೂಡಲಸಂಗನ ಶರಣರು :
ತ್ರಿವಿಧವನಱಿಯರು.

೩೫೬

ಕಾಯದ ಗಡಣ ಕೆಲಬರಿಗುಂಟು, ಜೀವದ ಗಡಣ ಕೆಲಬರಿಗುಂಟು,
ಭಾವದ ಗಡಣ ಕೆಲಬರಿಗುಂಟು, ವಚನದ ಗಡಣ ಕೆಲಬರಿಗುಂಟು :
ಪ್ರಾಣಲಿಂಗದ ಗಡಣ ಆರಿಗೂ ಇಲ್ಲ,
ಕೂಡಲಸಂಗನ ಶರಣರಲ್ಲಿ ತಂಗಟೂರ ಮಾರಯ್ಯಂಗಲ್ಲದೆ.

೩೫೭

ಕಾಮವ ತೊಱೆದಾತ, ಹೇಮವ ಜಱೆದಾತ,
ಭಾನುವಿನ ಉದಯಕ್ಕೆ ಒಳಗಾಗದ ಶರಣನು !
ಆಗಳೂ ನಿಮ್ಮ ವಾಣದೆ ನೆನೆವವರ ಮನೆಯಲು ಶ್ವಾನನಾಗಿರಿಸು,
ಮಹಾದಾನೀ, ಕೂಡಲಸಂಗಮದೇವಾ.

೩೫೮

ಅರ್ಥಕ್ಕೆ ತಪ್ಪಿದರೇನು, ಪ್ರಾಣಕ್ಕೆ ತಪ್ಪಿದರೇನು, ಅಭಿಮಾನಕ್ಕೆ ತಪ್ಪಿದರೇನು?
ಶರಣರು ಶರಣರಲ್ಲಿ ಗುಣವನಱಿಸುವರೆ ?
ಕೂಡಲಸಂಗನ ಶರಣರು ನೊಂದು ಸೈರಿಸಬೇಕು.

೩೫೯

ಹಾವಿನ ಡೊಂಕು ಹುತ್ತಕ್ಕೆ ಸಸಿನ;
ನದಿಯ ಡೊಂಕು ಸಮುದ್ರಕ್ಕೆ ಸಸಿನ :
ನಮ್ಮ ಕೂಡಲಸಂಗನ ಶರಣರ ಡೊಂಕು ಲಿಂಗಕ್ಕೆ ಸಸಿನ.

೩೬೦

ಹಾಲ ನೇಮ, ಹಾಲ ಕೆನೆಯ ನೇಮ;
ಕೆನೆ ತಪ್ಪಿದ ಬಳಿಕ ಕಿಚ್ಚಡಿಯ ನೇಮ;
ಬೆಣ್ಣೆಯ ನೇಮ, ಬೆಲ್ಲದ ನೇಮ !
ಅಂಬಲಿಯ ನೇಮದವರನಾರನೂ ಕಾಣೆ.
ಕೂಡಲಸಂಗನ ಶರಣರಲ್ಲಿ
ಅಂಬಲಿಯ ನೇಮದಾತ ಮಾದಾರ ಚೆನ್ನಯ್ಯ.

೩೬೧

ಹಾವಿನ ಹೆಡೆಗಳ ಕೊಂಡು ಕೆನ್ನೆಯ ತುರಿಸುವಂತೆ,
ಉರಿವ ಕೊಳ್ಳಿಯ ಕೊಂಡು ಮಂಡೆಯ ಸಿಕ್ಕ ಬಿಡಿಸುವಂತೆ,
ಹುಲಿಯ ಮೀಸೆಯ ಹಿಡಿದುಕೊಂಡು
ಒಲೆದು ಉಯ್ಯಲೆಯಾಡುವಂತೆ,
ಕೂಡಲಸಂಗನ ಶರಣರೊಡನೆ ಸರಸವಾಡಿದರೆ,
ಸುಣ್ಣದ ಕಲ್ಲ ಮಡಿಲಲ್ಲಿ ಕಟ್ಟಿಕೊಂಡು ಮಡುವ ಬಿದ್ದಂತೆ !

೩೬೨

ಕಂಡರೆ ಮನೋಹರವಯ್ಯಾ :
ಕಾಣದಿದ್ದರೆ ಅವಸ್ಥೆ ! ನೋಡಯ್ಯಾ !
ಹಗಲಿರುಳಹುದು : ಇರುಳು ಹಗಲಹುದು !
ಎಂತಯ್ಯಾ, ಆಳವಾಡಿ ಕಳೆವೆನು ? ಒಂದು ಜುಗ ಮೇಲೆ ಕೆಡೆದಂತೆ !
ಕೂಡಲಸಂಗನ ಸರಣರನಗಲುವ ದಾವತಿಯಿಂದ
ಮರಣವೇ ಲೇಸು, ಕಂಡಯ್ಯಾ !

೩೬೩

ಅಡವಿಯಲೊಬ್ಬ ಕಡುನೀರಡಿಸಿ, ಎಡೆಯಲ್ಲಿ ನೀರ ಕಂಡಂತಾಯಿತ್ತಯ್ಯಾ;
ಕುರುಡ ಕಣ್ಣ ಹಡೆದಂತೆ, ಬಡವ ನಿಧಾನವ ಕಂಡದಂತಾಯಿತ್ತಯ್ಯಾ;
ನಮ್ಮ ಕೂಡಲಸಂಗನ ಶರಣರ ಬರವೆನ್ನ ಪ್ರಾಣ, ಕಂಡಯ್ಯಾ !

೩೬೪

ಶಿವಚಿಂತೆ ಶಿವಜ್ಞಾನವಿಲ್ಲದ ಮನುಜರು—
ಸಗಣಕ್ಕೆ ಸಾಸಿರ ಹುಳು ಹುಟ್ಟವೇ, ದೇವಾ ?
ಕಾಡ ಮೃಗವೊಂದಾಗಿರಲಾಗದೇ, ದೇವಾ ?
ಊರ ಮೃಗವೊಂದಾಗಿರಲಾಗದೇ, ಹರನೇ ?
ನಮ್ಮ ಕೂಡಲಸಂಗನ ಶರಣರಿಲ್ಲದ ಊರು, ದೇಶ—
ವನವಾಸ, ನರವಿಂಧ್ಯ ಕಾಣಿರಣ್ಣಾ !

೩೬೫

ಸತ್ಯವುಳ್ಳ ಭಂಡವ ತುಂಬುವುದಯ್ಯಾ !
ಸುಯಿಧಾನ, ಸುಯಿಧಾನವಯ್ಯಾ !
—ಮನ ಧಾರೆವಟ್ಟಲು.
ಕೂಡಲಸಂಗನ ಶರಣರು ಹಿಡಿಯದ ಭಂಡವನು
ಆರಾದೊಡಾಗಲಿ, ಹೋಗಲೀಯರಯ್ಯಾ.

೩೬೬

ಸಾರ, ಸಜ್ಜನರ ಸಂಗ ಲೇಸು, ಕಂಡಯ್ಯಾ :
ದೂರ, ದುರ್ಜನರ ಸಂಗ ಭಂಗವಯ್ಯಾ.
ಸಂಗವೆರಡುಂಟು—ಒಂದ ಬಿಡು, ಒಂದ ಹಿಡಿ :
ಮಂಗಳಮೂರ್ತಿ ನಮ್ಮ ಕೂಡಲಸಂಗನ ಶರಣರ.

೩೬೭

ಸೋಲಬಲ್ಲರು ಅವರು, ಗೆಲಲಱಿಯರಯ್ಯಾ,
ತನುಮನಧನದಲ್ಲಿ ವಂಚನೆಯನಱಿಯರಯ್ಯಾ,
ದಾಸಿ–ಸಿರಿಯಾಳನವರು.
ಕೂಡಲಸಂಗನ ಶರಣರು
ಬಱಿಯ ಉಪಚಾರವನಱಿಯರಯ್ಯಾ.

೩೬೮

ಸಾಸವೆಯ ಮೇಲೆ ಸಾಗರವರಿದಂತಾಯಿತ್ತಯ್ಯಾ !
ಆನಂದದಿಂದ ನಲಿನಲಿದಾಡುವೆ,
ಆನಂದದಿಂದ ಕುಣಿಕುಣಿದಾಡುವೆ :
ಕೂಡಸಂಗನ ಶರಣರು ಬಂದರೆ,
ಉಬ್ಬಿ, ಕೊಬ್ಬಿ ಹರುಷದಲೋಲಾಡುವೆ !

೩೬೯

ಹಾಲ ತೊಱೆಗೆ ಬೆಲ್ಲದ ಕೆಸಱು, ಸಕ್ಕರೆಯ ಮಳಲು,
ತವರಾಜದ ನೊರೆ–ತೆರೆಯಂತೆ ಆದ್ಯರ ವಚನವಿರಲು,
ಬೇಱೆ ಬಾವಿಯ ತೋಡಿ ಉಪ್ಪುನೀರನುಂಬವನ ವಿಧಿಯಂತೆ
ಆಯಿತ್ತೆನ್ನ ಮತಿ, ಕೂಡಲಸಂಗಮದೇವಾ.

೩೭೦

ಅಯ್ಯಾ, ನಿಮ್ಮ ಶರಣರು ಪರಮಸುಖಿಗಳಯ್ಯಾ.
ಅಯ್ಯಾ, ನಿಮ್ಮ ಶರಣರು
ಕಾಯವೆಂಬ ಕರ್ಮಕ್ಕೆ ಹೊದ್ದದ ನಿಷ್ಕಾಮಿಗಳಯ್ಯಾ.
ಅಯ್ಯಾ, ನಿಮ್ಮ ಶರಣರು ಮನದಲ್ಲಿ ನಿರ್ಲೇಪಜ್ಞಾನಿಗಳಯ್ಯಾ.
ಕೂಡಲಸಂಗಮದೇವಯ್ಯಾ,
ನಿಮ್ಮ ಶರಣರ ಘನವೆನಗೆ ಹೇಳಲು, ನಾನು ಕೇಳಲಮ್ಮದೆ,
'ನಮೋ ನಮಃ' ಎನುತಿರ್ದೆನು ಕಾಣಾ, ಪ್ರಭುವೆ!

೩೭೧

ನಿಮ್ಮ ನೋಡಲೆನ್ನ ಹರಣವಿದ್ದುದು:
ನಿಮ್ಮನಗಲಿದೊಡನೆ ಎನ್ನ ಹರಣವೆಲ್ಲಿಯದೊ?
ಇರುಳಿಹುದು ಒಂದು ಜುಗ ಮೇಲೆ ಕೆಡೆದಂತೆ—
ಹಗಲನಾವ ಪರಿಯೊಳಾಳವಾಡುವೆನಯ್ಯಾ?
ಕೂಡಲಸಂಗನ ಶರಣರನಗಲುವ ದಾವತಿಗಿಂತ
ಮರಣವೇ ಲೇಸಯ್ಯಾ.

೧೫

ಪರಮಾತ್ಮಸ್ವರೂಪ

೩೭೨

ಎತ್ತೆತ್ತ ನೋಡಿದಡತತ್ತ ನೀನೇ ದೇವಾ;
ಸಕಲ ವಿಸ್ತಾರದ ರೂಹು ನೀನೇ, ದೇವಾ;
ವಿಶ್ವತಶ್ಚಕ್ಷು ನೀನೇ, ದೇವಾ;
ವಿಶ್ವತೋಮುಖ ನೀನೇ, ದೇವಾ;
ವಿಶ್ವತೋಬಾಹು ನೀನೇ, ದೇವಾ;
ವಿಶ್ವತಃಪಾದ ನೀನೇ, ದೇವಾ, ಕೂಡಲಸಂಗಮದೇವಾ.

೩೭೩

ಉದಕದೊಳಗೆ ಬಯ್ಚಿಟ್ಟ ಬಯ್ಕೆಯ ಕಿಚ್ಚಿನಂತಿದ್ದಿತ್ತು;
ಸಸಿಯೊಳಗಣ ರಸದ ರುಚಿಯಂತಿದ್ದಿತ್ತು;
ನನೆಯೊಳಗಣ ಪರಿಮಳದಂತಿದ್ದಿತ್ತು;
ಕೂಡಲಸಂಗಮದೇವಾ, ಕನ್ಯೆಯ ಸ್ನೇಹದಂತಿದ್ದಿತ್ತು.

೩೭೪

ಮರೀಚಿಯೊಳಗಡಗಿದ ಬಿಸಿಲಿನಂತೆ ಇದ್ದಿತ್ತು;
ಕ್ಷೀರದೊಳಗಣ ತುಪ್ಪದಂತೆ ಇದ್ದಿತ್ತು;
ಚಿತ್ರಿಕನೊಳಗಡಗಿದ ಚಿತ್ರದ ಪಟದಂತೆ ಇದ್ದಿತ್ತು;
ಆಲಿಯೊಳಗಣ ತೇಜದ ಗೋಪ್ಯದಂತೆ ಇದ್ದಿತ್ತು;
ನುಡಿಯೊಳಡಗಿದ ಅರ್ಥದಂತೆ ಇದ್ದಿತ್ತು—
ಕೂಡಲಸಂಗಯ್ಯಾ, ನಿಮ್ಮ ನಿಲವು.

೩೭೫

ಅಱಿದಿಹೆನೆಂದಡೆ ಅಱುಹಿಂಗಸಾಧ್ಯ,
ನೆನೆದಿಹೆನೆಂದಡೆ ನೆನಹಿಂಗಸಾಧ್ಯ,
ಭಾವಿಸಿಹೆನೆಂದಡೆ ಭಾವಕ್ಕಸಾಧ್ಯ :
ವಾಙ್ಮನಕ್ಕಗೋಚರವನಱಿವ ಪರಿಯೆಂತಯ್ಯಾ, ಗುರು ತೋಱದನ್ನಕ್ಕ ?
ಗುರುಶಿಷ್ಯರ ಮಧ್ಯದಲ್ಲಿ ಸ್ವಯಂಜ್ಯೋತಿಲಿಂಗ ಉದಯವಪ್ಪುದೆಂಬ
ಶ್ರುತಿ ಹುಸಿಯೇ, ಕೂಡಲಸಂಗಮದೇವಯ್ಯಾ ?
ನಿಮ್ಮ ಮಹಾನುಭಾವರ ಮಥನದಿಂದ
ಎನ್ನಲ್ಲಿ ನಿಜವ ನೆಲೆಗೊಳಿಸಾ, ಪ್ರಭುವೆ !

೩೭೬

ವೇದ ವೇಧಿಸಲಱಿಯದೆ ಅಭೇದ್ಯಲಿಂಗವೆಂದು ನಡನಡುಗಿತ್ತು.
ಶಾಸ್ತ್ರ ಸಾಧಿಸಲಱಿಯದೆ ಅಸಾಧ್ಯಲಿಂಗವೆಂದು ಸಾಱುತ್ತೈದಾವೆ.
ತರ್ಕ ತರ್ಕಿಸಲಱಿಯದೆ ಅತರ್ಕ್ಯಲಿಂಗವೆಂದು ಮನಂಗೊಳ್ಳವು.
ಆಗಮ ಅಗಮ್ಯಲಿಂಗವೆಂದು ಗಮಿಸಲಱಿಯದೆ ಹೋದುವು.
ನರರೂ ಸುರರೂ ಅಂತುವ ಕಾಣರು :
ನಮ್ಮ ಕೂಡಲಸಂಗನ ಪ್ರಮಾಣ ಶರಣ ಬಲ್ಲ !

೩೭೭

ಅಂತರಂಗದಲ್ಲಿ ಅಱಿವಾದಡೇನಯ್ಯಾ,
ಬಹಿರಂಗದಲ್ಲಿ ಕ್ರಿಯೆಯಿಲ್ಲದನ್ನಕ್ಕರ ?
ದೇಹವಿಲ್ಲದಿದ್ದಡೆ ಪ್ರಾಣಕ್ಕಾಶ್ರಯವುಂಟೆ ?
ಕನ್ನಡಿಯಿಲ್ಲದಿರ್ದಡೆ ತನ್ನ ಮುಖ ಕಾಣಬಹುದೆ ?
ಸಾಕಾರ ನಿರಾಕಾರ ಏಕೋದೇವ ನಮ್ಮ ಕೂಡಲಸಂಗಮದೇವ.

೩೭೮

ಭೂಮಿಯೊಳಗೆ ನಿಧಾನವಿದ್ದುದ ಅಂಜನವುಳ್ಳವರು ತೋಱರಯ್ಯಾ.
ಅಂಜಲುಬೇಡ ಕಂಡಾ; ಮನದಲ್ಲಿ ಸಂದೇಹವ ಮಾಡದಿರಾ.
ಜಂಗಮದೊಳಗೆ ಲಿಂಗಯ್ಯನಿದ್ದಾನೆಂದು ನಂಬಿಗೆಯುಳ್ಳರೆ
ತೋಱುವ ಕೂಡಲಸಂಗಯ್ಯ.

೩೭೯

ಭಿತ್ತಿಯಿಲ್ಲದೆ ಬರೆಯಬಹುದೆ ಚಿತ್ತಾರವ ?
ಬಿತ್ತಿ ಬೆಳೆಯಬಹುದೆ ಧರೆಯಿಲ್ಲದೆ ?
ಜಂಗಮವಿಲ್ಲದೆ ಮಾಡಬಹುದೆ ?
ರೂಢೀಶನ ಭೇದಿಸಬಹುದೆ ?
ಒಡಲಿಲ್ಲದ ನಿರಾಳಕರ್ತೃ ಕೂಡಲಸಂಗಮದೇವ
ಜಂಗಮುಖವಾದನಾಗಿ ಮತ್ತೊಂದನಱಿಯೆನಯ್ಯಾ.

೩೮೦

ಅಳವಿನಲ್ಲಿ ಉಳಿವನಲ್ಲ, ಪ್ರಳಯವೆಂಬುದ ಮುನ್ನಱಿಯನು;
ಕಳಾಕುಳರಹಿತನು, ಉಭಯಕುಳರಹಿತನು;
ಅಱಿವ ಬೈಚಿಟ್ಟು, ಮೆಱಿವ ಗಮನಿಯಲ್ಲ.
ನಿರ್ಗಮನ ಕೂಡಲಸಂಗಯ್ಯನೆಂಬ ಶಬ್ದಮುಗ್ಧನ
ಭಾವದ ಬಳಕೆಯಲ್ಲಿ ಗೆಲಬಹುದೆ? ಹೇಳಾ !

೩೮೧

“ಸ್ವಾಮಿ ನೀನು, ಶಾಶ್ವತ ನೀನು”:
ಎತ್ತಿದೆ ಬಿರುದ ಜಗವೆಲ್ಲಱಿಯಲು.
“ಮಹಾದೇವ, ಮಹಾದೇವ!”:
ಇಲ್ಲಿಂದ ಮುಂದೆ ಶಬ್ದವಿಲ್ಲ.
ಪಶುಪತಿ ಜಗಕ್ಕೆ ಏಕೋದೇವ:
ಸ್ವರ್ಗ–ಮರ್ತ್ಯ–ಪಾತಾಳದೊಳಗೆ
ಒಬ್ಬನೇ ದೇವ ಕೂಡಲಸಂಗಮದೇವ.

೩೮೨

ದೇವನೊಬ್ಬ, ನಾಮ ಹಲವು:
ಪರಮಪತಿವ್ರತೆಗೆ ಗಂಡನೊಬ್ಬ:
ಮತ್ತೊಂದಕ್ಕೆಱಗಿದರೆ ಕಿವಿಮೂಗ ಕೊಯ್ವನು!
ಹಲವು ದೈವದ ಎಂಜಲ ತಿಂಬವರನೇನೆಂಬೆ,
ಕೂಡಲಸಂಗಮದೇವಾ?

೩೮೩

ಇಬ್ಬರು ಮೂವರು ದೇವರೆಂದು ಉಬ್ಬಿ ಮಾತಾಡಬೇಡ:
ಒಬ್ಬನೇ ಕಾಣಿರೋ, ಇಬ್ಬರೆಂಬುದು ಹುಸಿ ನೋಡಾ.
ಕೂಡಲಸಂಗಮದೇವನಲ್ಲದೆ ಇಲ್ಲವೆಂದಿತ್ತು ವೇದ.

೩೮೪

ಬಿದಿರೆಲೆಯ ಮೆಲಿದರೆ ಮೆಲಿದಂತಲ್ಲದೆ,
ರಸವನು ಹಡೆಯಲು ಬಾರದು !
ಮಳಲ ಹೊಸೆದರೆ ಹೊಸೆದಂತಲ್ಲದೆ,
ಸರವಿಯ ಹಡೆಯಲು ಬಾರದು !
ನೀರ ಕಡೆದರೆ ಕಡೆದಂತಲ್ಲದೆ,
ಬೆಣ್ಣೆಯ ಹಡೆಯಲು ಬಾರದು !
ನಮ್ಮ ಕೂಡಲಸಂಗಮದೇವನಲ್ಲದೆ ಅನ್ಯದೈವಕ್ಕೆಱಗಿದರೆ
ಹೊಳ್ಳ ಕುಟ್ಟಿ ಕೈ ಹೊಟ್ಟೆಯಾದಂತಾಯಿತ್ತಯ್ಯಾ !

೩೮೫

ರಿಣ ತಪ್ಪಿದ ಹೆಂಡಿರಲ್ಲಿ, ಗುಣ ತಪ್ಪಿದ ನಂಟರಲ್ಲಿ,
ಜೀವವಿಲ್ಲದ ದೇಹದಲ್ಲಿ ಫಲವೇನೊ ?
ಆಳ್ದನೊಲ್ಲದ ಆಳಿನಲ್ಲಿ, ಸಿರಿ ತೊಲಗಿದ ಅರಸಿನಲ್ಲಿ,
ವರವಿಲ್ಲದ ದೈವದಲ್ಲಿ ಫಲವೇನೊ ?
ಕಳಿದ ಹೂವಿನಲ್ಲಿ ಕಂಪ, ನುಳಿದ ಸೂಳೆಯಲ್ಲಿ ಹೆಂಪ,
ಕೊಳಚೆಯ ನೀರಿನಲ್ಲಿ ಗುಂಪನಱಸುವಿರಿ, ಮರುಳೇ—
ವರಗುರು ವಿಶ್ವಕ್ಕೆಲ್ಲ ಗಿರಿಜಾಮನೋವಲ್ಲಭ
ಪರಮಕಾರಣಿಕ ನಮ್ಮ ಕೂಡಲಸಂಗಮದೇವ.

೩೮೬

ತೋಱುವನಯ್ಯಾ ಶಿವನು, ಅಡಗುವನಗಲುವನಯ್ಯಾ ಶಿವನು.
ಕಣ್ಗಳ ಮುಂದೆ ಕಾಯಗೊಂಡು, ಮನದ ಮುಂದೆ ಕನಸಾಗಿ,
ಕಾಡುವನಯ್ಯಾ ಶಿವನು.
ಒಲ್ಲದೊಡಲ್ಲಿಯೆ ಇದ್ದು ಹಲವೆಡೆಯಲ್ಲಿ ತೋಱುವನು ;
ಹಲವೆಡೆಯಲ್ಲೈದಿ ಒಂದೇ ರೂಪಾಗಿರ್ಪನು.
ಕೂಡಲಸಂಗಮದೇವನು ಚಿನ್ಮಯನಾಗಿ ಎನಗಸಾಧ್ಯನು !

೩೮೭

ಜಗದಗಲ, ಮುಗಿಲಗಲ, ಮಿಗೆಯಗಲ ನಿಮ್ಮಗಲ :
ಪಾತಾಳದಿಂದತ್ತತ್ತ ನಿಮ್ಮ ಶ್ರೀಚರಣ,
ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀಮುಕುಟ !
ಅಗಮ್ಯ ಅಗೋಚರ ಅಪ್ರತಿಮ ಲಿಂಗವೆ, ಕೂಡಲಸಂಗಯ್ಯಾ,
ಎನ್ನ ಕರಸ್ಥಳಕ್ಕೆ ಬಂದು ಚುಳುಕಾದಿರಯ್ಯಾ !

೧೬

ಧ್ಯಾನ – ಪೂಜೆ

೩೮೮

ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ;
ಅಂಬುಜಕೆ ಭಾನುವಿನುದಯದ ಚಿಂತೆ;
ಭ್ರಮರಂಗೆ ಪರಿಮಳದ ಬಂಡುಂಬ ಚಿಂತೆ;
ಎನಗೆ ನಮ್ಮ ಕೂಡಲಸಂಗಮದೇವರ ನೆನೆವುದೆ ಚಿಂತೆ.

೩೮೯

ಎದೆ ಬಿರಿವನ್ನಕ್ಕ, ಮನ ದಣಿವನ್ನಕ್ಕ, ನಾಲಗೆ ನಲಿದಾಡುವನ್ನಕ್ಕ
ನಿಮ್ಮ ನಾಮಾಮೃತವ ತಂದಿರಿಸು ಕಂಡಯ್ಯಾ, ಎನಗೆನ್ನ ತಂದೇ!
ಬಿರಿಮುಗುಳಂದದಿ ಎನ್ನ ಹೃದಯ
ನಿಮ್ಮ ಶ್ರೀಚರಣದ ಮೇಲೆ ಬಿದ್ದರಳುಗೆ, ಕೂಡಲಸಂಗಮದೇವಾ.

೩೯೦

ಅಕಟಕಟಾ! ಬೆಡಗುಬಿನ್ನಾಣವೆಂಬುದೇನೋ?
"ಓಂ ನಮಃ ಶಿವಾಯ" ಎಂಬುದೇ ಮಂತ್ರ;
"ಓಂ ನಮಃ ಶಿವಾಯ" ಎಂಬುದೇ ತಂತ್ರ;
ನಮ್ಮ ಕೂಡಲಸಂಗಮದೇವರ ನೆನೆವುದೇ ಮಂತ್ರ.

೩೯೧

ಸಂಸಾರವೆಂಬ ಸರ್ಪ ಮುಟ್ಟಲು, ಪಂಚೇಂದ್ರಿಯ ವಿಷಯವೆಂಬ ವಿಷದಿಂದೆ
ಆನು ಮುಂದುಗೆಟ್ಟೆನಯ್ಯಾ! ಆನು ಹೊರಳಿ ಬೀಳುತ್ತಿರ್ದೆನಯ್ಯಾ!
"ಓಂ ನಮಃ ಶಿವಾಯ" ಎಂಬ ಮಂತ್ರವ ಜಪಿಸುತ್ತಿರ್ದೆನಯ್ಯಾ,
ಕೂಡಲಸಂಗಮದೇವಾ.

೩೯೨

ಶರಣ ಲಿಂಗದಲ್ಲಿ ಕೂಡಲು ಮಹಾಪಥವಯ್ಯಾ !
ದೃಢದೃಢಾಂಗಮಧ್ಯಸ್ಥನಾಗಿ
ಕೂಡಲಸಂಗಮದೇವರ ನಾಮವತಿಸುಖವೆಂದುದು.

೩೯೩

ವಶ್ಯವ ಬಲ್ಲೆವೆಂದೆಂಬಿರಯ್ಯಾ—
ಬುದ್ಧಿಯನಱಿಯದ ಮನುಜರು ಕೇಳಿರಯ್ಯಾ :
ವಶ್ಯವಾವುದೆಂದಱಿಯದೆ ಮರುಳುಗೊಂಬಿರೆಲೆ ಗಾವಿಲ ಮನುಜರಿರಾ !
" ಓಂ ನಮಃ ಶಿವಾಯ " ಎಂಬ ಮಂತ್ರ ಸರ್ವಜನವಶ್ಯ
ಕೂಡಲಸಂಗಮದೇವಾ.

೩೯೪

ಮೌನದಲುಂಬುದು ಆಚಾರವಲ್ಲ ;
ಲಿಂಗಾರ್ಪಿತವ ಮಾಡಿದ ಬಳಿಕ
ತುತ್ತಿಗೊಮ್ಮೆ " ಶಿವ ಶರಣೆ "ನ್ನುತ್ತಿರಬೇಕು.
ಕರಣವೃತ್ತಿಗಳಡಗುವುವು
ಕೂಡಲಸಂಗನ ನೆನೆಯುತ್ತ ಉಂಡರೆ.

೩೯೫

ಭವಬಂಧನದುರಿತಂಗಳ ಗೆಲುವೊಡೆ,
" ಓಂ ನಮಶ್ಶಿವಾಯ ಶರಣೆ "ಂದರೆ ಸಾಲದೆ ?
" ಹರ ಹರ ಶಂಕರ, ಶಿವ ಶಿವ ಶಂಕರ,
" ಜಯ ಜಯ ಶಂಕರ, ಶರಣೆ "ನುತಿದ್ದೇನೆ :
ಎನ್ನ ಪಾತಕ ಪರಿಹಾರ !
" ಕೂಡಲಸಂಗಮದೇವಾ, ಶರಣೆ "ನುತಿದ್ದೇನೆ.

೩೯೬

ಪಾತಕಶತಕೋಟಿಯನೊರಸಲು, ಸಾಲದೇ ಒಂದು ಶಿವನಾಮ?
ಸಾಲದೇ ಒಂದು ಹರನ ನಾಮ? ಕೂಡಲಸಂಗಮದೇವಾ,
ನಿಮ್ಮ ಉಂಡಿಗೆಯ ಪಶುವ ಮಾಡಿದೆಯಾಗಿ.

೩೯೭

ಕರಿಯಂಜುವುದಂಕುಶಕ್ಕಯ್ಯಾ; ಗಿರಿಯಂಜುವುದು ಕುಲಿಶಕ್ಕಯ್ಯಾ;
ತಮಂಧವಂಜುವುದು ಜ್ಯೋತಿಗಯ್ಯಾ; ಕಾನನವಂಜುವುದು ಬೇಗೆಗಯ್ಯಾ;
ಪಂಚಮಹಾಪಾತಕವಂಜುವುದು ಕೂಡಲಸಂಗನ ನಾಮಕ್ಕಯ್ಯಾ.

೩೯೮

ಕರಿ ಘನ, ಅಂಕುಶ ಕಿಱಿದೆನ್ನಬಹುದೆ? ಬಾರದಯ್ಯಾ.
ಗಿರಿ ಘನ, ವಜ್ರ ಕಿಱಿದೆನ್ನಬಹುದೆ? ಬಾರದಯ್ಯಾ.
ತಮಂಧ ಘನ, ಜ್ಯೋತಿ ಕಿಱಿದೆನ್ನಬಹುದೆ? ಬಾರದಯ್ಯಾ.
ಮಱಹು ಘನ, ನಿಮ್ಮ ನೆನೆವ ಮನ ಕಿಱಿದೆನ್ನಬಹುದೆ?
ಬಾರದಯ್ಯಾ, ಕೂಡಲಸಂಗಮದೇವಾ.

೩೯೯

ಇಪ್ಪತ್ತನಾಲ್ಕು ತಿಥಿಯಿಂದ ವೆಗ್ಗಳ, ಗ್ರಹಣ–ಸಂಕ್ರಾಂತಿಯಿಂದ ವೆಗ್ಗಳ,
ಏಕಾದಶಿ–ವ್ಯತೀಪಾತದಿಂದ ವೆಗ್ಗಳ,
ಸೂಕ್ಷ್ಮಶಿವಪಥವನಱಿದವಂಗೆ
ಹೋಮ–ನೇಮ–ಜಪ–ತಪದಿಂದ ವೆಗ್ಗಳ,
ಕೂಡಲಸಂಗಮದೇವಾ, ನಿಮ್ಮ ಮಾಣದೆ ನೆನೆವವಂಗೆ.

೪೦೦

ಅಂಕ ಕಳನೇಱಿ ಕೈಮಱೆದಿರ್ದೊಡೆ,
ಮಾಱಂಕ ಬಂದಿಱಿವುದ ಮಾಣ್ಬನೆ?
ನಿಮ್ಮ ನೆನಹ ಮತಿ ಮಱೆದಿರ್ದೊಡೆ,
ಪಾಪ ತನುವನಂಡಲೆವುದ ಮಾಣ್ಬುದೆ?
ಕೂಡಲಸಂಗಯ್ಯನ ನೆನೆದರೆ,
ಪಾಪ ಉರಿಗೊಡ್ಡಿದರಗಿನಂತೆ ಕರಗುವುದಯ್ಯಾ.

೪೦೧

ಪೂರ್ವಜನ್ಮ ನಿವೃತ್ತಿಯಾಗಿ ಗುರುಕರುಣವಿಡಿದಂಗೆ ಬಂಧನವೆಲ್ಲಿಯದೊ?
ಭವಬಂಧವೆಲ್ಲಿಯದೊ,
ಸಂಕಲ್ಪವಿಕಲ್ಪವೆಂಬ ಸಂದೇಹ ಕಳೆದುಳಿದವಂಗೆ:
ಕೂಡಲಸಂಗಮದೇವನ ತ್ರಿಸಂಧ್ಯಾಕಾಲದಲ್ಲಿ
ಮಾಣದೆ ನೆನೆವಂಗೆ?

೪೦೨

ಜಾಗ್ರಸ್ವಪ್ನಸುಷುಪ್ತಿಯಲ್ಲಿ ಮತ್ತೊಂದ ನೆನೆದೊಡೆ
ತಲೆದಂಡ, ತಲೆದಂಡ!
ಹುಸಿಯಾದರೆ, ದೇವ, ತಲೆದಂಡ, ತಲೆದಂಡ!
ಕೂಡಲಸಂಗಮದೇವಾ, ನೀವಲ್ಲದೆ ಅನ್ಯವ ನೆನೆದೊಡೆ
ತಲೆದಂಡ, ತಲೆದಂಡ!

೪೦೩

ಎಲೆ ಎಲೆ ಮಾನವಾ, ಅಳಿಯಾಸೆ ಬೇಡವೋ ;
ಕಾಳಬೆಳದಿಂಗಳು ಸಿರಿ ಸ್ಥಿರವಲ್ಲ.
ಕೇಡಿಲ್ಲದ ಪದವಿ :
ಕೂಡಲಸಂಗಮದೇವನ ಮಱೆಯದೆ ಪೂಜಿಸು.

೪೦೪

ನೆರೆ ಕೆನ್ನೆಗೆ, ತೆರೆ ಗಲ್ಲಕೆ, ಶರೀರ ಗೂಡುವೋಗದ ಮುನ್ನ,
ಹಲ್ಲುಹೋಗಿ, ಬೆನ್ನುಬಾಗಿ, ಅನ್ಯರಿಗೆ ಹಂಗಾಗದ ಮುನ್ನ,
ಕಾಲ ಮೇಲೆ ಕೈಯನೂಱಿ ಕೋಲ ಹಿಡಿಯದ ಮುನ್ನ,
ಮುಪ್ಪಿಂದೊಪ್ಪವಳಿಯದ ಮುನ್ನ, ಮೃತ್ಯು ಮುಟ್ಟದ ಮುನ್ನ—
ಪೂಜಿಸು ನಮ್ಮ ಕೂಡಲಸಂಗಮದೇವನ.

೪೦೫

ಉಂಬ ಬಟ್ಟಲು ಬೇಱೆ ಕಂಚಲ್ಲ :
ನೋಡುವ ದರ್ಪಣ ಬೇಱೆ ಕಂಚಲ್ಲ ;
ಭಾಂಡ ಒಂದೆ, ಭಾಜನ ಒಂದೆ :
ಬೆಳಗೆ ಕನ್ನಡಿ ಎನಿಸಿತ್ತಯ್ಯಾ !
ಅಱಿದರೆ ಶರಣ, ಮಱೆದರೆ ಮಾನವ;
ಮಱೆಯದೆ ಪೂಜಿಸು ಕೂಡಲಸಂಗಯ್ಯನ.

೪೦೬

ಹೊಯ್ದರೆ ಹೊಯ್ಗಳು ಕಯ್ಯ ಮೇಲೆ;
ಬಯ್ದರೆ ಬಯ್ಗಳು ಕಯ್ಯ ಮೇಲೆ!
ಹಿಂದಣ ಜನನವೇನಾದೊಡಾಗಲಿ—
ಇಂದಿನ ಭೋಗವು ಕಯ್ಯ ಮೇಲೆ!
ಕೂಡಲಸಂಗಮದೇವಯ್ಯಾ,
ನಿಮ್ಮ ಪೂಜಿಸಿದ ಫಲ ಕಯ್ಯ ಮೇಲೆ!

೪೦೭

ಅಚ್ಚುಗವೇಕಯ್ಯಾ ಸಂಸಾರದೊಳಗೆ?
ನಿಚ್ಚ ನಿಚ್ಚ ಶಿವರಾತ್ರಿಯ ಮಾಡುವುದು!
ಅರ್ಚನೆ ಪೂಜನೆಯ ಮಾಡುವುದು!
ಬೇಗ ಬೇಗ ನಮ್ಮ ಕೂಡಲಸಂಗನ ಕೂಡುವುದು!

೪೦೮

ಆಡಿ ಕಾಲು ದಣಿಯವು, ನೋಡಿ ಕಣ್ಣು ದಣಿಯವು,
ಹಾಡಿ ನಾಲಗೆ ದಣಿಯದು: ಇನ್ನೇವೆನಿನ್ನೇವೆ?
ನಿಮ್ಮ ಕೈಯಾರೆ ಪೂಜಿಸಿ ಮನದಣಿಯಲೊಲ್ಲದಿನ್ನೇವೆನಿನ್ನೇವೆ?
ಕೂಡಲಸಂಗಮದೇವಾ, ಕೇಳಯ್ಯಾ,
ನಿಮ್ಮುದರವ ಬಗಿದಾನು ಹೊಗುವ ಭರವೆನಗೆ!

೪೮೯

ವಚನದಲ್ಲಿ ನಾಮಾಮೃತ ತುಂಬಿ, ನಯನದಲ್ಲಿ ಮೂರುತಿ ತುಂಬಿ,
ಮನದಲ್ಲಿ ನಿಮ್ಮ ನೆನಹು ತುಂಬಿ, ಕಿವಿಯಲ್ಲಿ ಕೀರುತಿ ತುಂಬಿ,
ಕೂಡಲಸಂಗಮದೇವಾ,
ನಿಮ್ಮ ಚರಣಕಮಲದಲಾನು ತುಂಬಿ !

೧೭

ಹರಕಾರುಣ್ಯ

೪೧೦

ನೀನೊಲಿದರೆ ಕೊಱಡು ಕೊನರುವುದಯ್ಯಾ;
ನೀನೊಲಿದರೆ ಬಱಡು ಹಯನಹುದಯ್ಯಾ;
ನೀನೊಲಿದರೆ ವಿಷವೆ ಅಮೃತವಹುದಯ್ಯಾ;
ನೀನೊಲಿದರೆ ಸಕಲ ಪಡಿಪದಾರ್ಥ ಇದಿರಲಿರ್ಪುವು,
ಕೂಡಲಸಂಗಮದೇವಾ !

೪೧೧

ಹರನೀವ ಕಾಲಕ್ಕೆ ಸಿರಿಯು ಬೆನ್ನಲಿ ಬರ್ಕು :
ಹರಿದು ಹೆದ್ದೊಱೆಯೆ ಕೆಱೆ ತುಂಬಿದಂತಯ್ಯಾ !
ನೆರೆಯದ ವಸ್ತು ನೆರೆವುದು ನೋಡಯ್ಯಾ :
ಅರಸು ಪರಿವಾರ ಕೈವಾರ ನೋಡಯ್ಯಾ !
ಪರಮನಿರಂಜನನೆ ಮಱೆದ ಕಾಲಕ್ಕೆ
ತುಂಬಿದ ಹರವಿಯ ಕಲ್ಲು ಕೊಂಡಂತೆ
ಕೂಡಲಸಂಗಮದೇವಾ !

೪೧೨

ಅಯ್ಯಾ, ಎಳಗಱು ತಾಯನಱಸಿ ಬಳಲುವಂತೆ,
ಅಯ್ಯಾ, ನಿಮ್ಮನಱಸಿ ಬಳಲುತ್ತಿದ್ದೇನೆ :
ಅಯ್ಯಾ, ನೀವೆನ್ನ ಮನಕ್ಕೆ ಪ್ರಸನ್ನವಮಾಡಿ, ಕಾರುಣ್ಯವ ಮಾಡಿರಯ್ಯಾ !
ನೀವೆನ್ನ ಮನಕ್ಕೆ ನೆಲೆವನೆಯಾಗಿ ಕಾರುಣ್ಯವ ಮಾಡಿರಯ್ಯಾ !
ಅಂಬೇ, ಅಂಬೇ, ಕೂಡಲಸಂಗಮದೇವಾ !

೪೧೩

ಪರಚಿಂತೆ ನಮಗೇಕಯ್ಯಾ, ನಮ್ಮ ಚಿಂತೆ ನಮಗೆ ಸಾಲದೆ?
'ಕೂಡಲಸಂಗಯ್ಯ ಒಲಿದಾನೊ, ಒಲಿಯನೊ' ಎಂಬ ಚಿಂತೆ
ಹಾಸಲುಂಟು ಹೊದೆಯಲುಂಟು!

೪೧೪

'ಇವನಾರವ, ಇವನಾರವ, ಇವನಾರವನೆ'ಂದೆನಿಸದಿರಯ್ಯಾ.
'ಇವ ನಮ್ಮವ, ಇವ ನಮ್ಮವ, ಇವ ನಮ್ಮವನೆ'ಂದೆನಿಸಯ್ಯಾ.
ಕೂಡಲಸಂಗಮದೇವಾ, ನಿಮ್ಮ ಮನೆಯ ಮಗನೆನಿಸಯ್ಯಾ.

೪೧೫

ಕೆಸರಬಿಲ್ಲಿ ಬಿದ್ದ ಪಶುವಿನಂತಾನು ದೆಸೆದೆಸೆಗೆ ಬಾಯ ಬಿಡುತಿದ್ದೇನಯ್ಯಾ.
ಅಯ್ಯಾ! ಆರಯ್ವರಿಲ್ಲ—ಅಕಟಕಟಾ!
ಪಶುವೆಂದೆನ್ನ ಕೂಡಲಸಂಗಮದೇವ ಕೊಂಬ ಹಿಡಿದೆತ್ತುವನ್ನಕ್ಕ!

೪೧೬

ಸಮುದ್ರದೊಳಗಣ ಸಿಂಪಿನಂತೆ ಬಾಯ ಬಿಡುತ್ತಿದ್ದೇನಯ್ಯಾ.
ನೀನಲ್ಲದೆ ಮತ್ತಾರೂ ಎನ್ನನಜೀವವರಿಲ್ಲ ನೋಡಯ್ಯಾ.
ಕೂಡಲಸಂಗಮದೇವಾ, ನೀವಲ್ಲದೊಳಕೊಂಬವರಿಲ್ಲಯ್ಯಾ.

೪೧೭

ಕೆಲಕ್ಕೆ ಶುದ್ಧನಾದೆನಲ್ಲದೆ, ಎನ್ನ ಮನಕ್ಕೆ ಶುದ್ಧನಾಗೆನೇಕಯ್ಯಾ?
ಕೈಯ ಮುಟ್ಟಿ ಪೂಜಿಸುವರೆ, ಎನ್ನ ಕೈ ಶುದ್ಧವಲ್ಲವಯ್ಯಾ.
ಮನ ಮುಟ್ಟಿ ಪೂಜಿಸುವರೆ, ಎನ್ನ ಮನ ಶುದ್ಧವಲ್ಲವಯ್ಯಾ.
ಭಾವಶುದ್ಧವಾದೊಡೆ ಕೂಡಲಸಂಗಯ್ಯನು
" ಇತ್ತ ಬಾ " ಎಂದೆತ್ತಿಕೊಳ್ಳನೇಕಯ್ಯಾ?

೪೧೮

ಉರಿಯೊಳಗಣ ಕರ್ಪೂರಕ್ಕೆ ಕರಿಯುಂಟೇ ಅಯ್ಯಾ?
ಬಯಲ ಮರೀಚಿಯ ಜಲಕ್ಕೆ ಕೆಸಱುಂಟೇ ಅಯ್ಯಾ?
ವಾಯುವನಪ್ಪಿದ ಪರಿಮಳಕ್ಕೆ ನಿರ್ಮಾಲ್ಯವುಂಟೇ ಅಯ್ಯಾ?
ನೀವು ನೆಱೆಯೊಲಿದ ಬಳಿಕ ಎನಗೆ ಭಯವುಂಟೆ?
ಕೂಡಲಸಂಗಮದೇವಾ,
ನಿಮ್ಮ ಚರಣಕಮಲದೊಳಗೆ ಇಂಬಿಟ್ಟುಕೊಳ್ಳಯ್ಯಾ.

೪೧೯

ಕಾಮಧೇನು ನಿಮ್ಮ ಸಾರಿರಲು ಪರರ ಬೇಡಲಾಱೆನಯ್ಯಾ.
ನಿಮ್ಮುವ ಪೂಜಿಸಿ ಭವಬಂಧನ ಬಿಡದೇಕಯ್ಯಾ?
ಹಿಂದಣ ಜನ್ಮದ ಚಿಹ್ನ ಬಿಡದನ್ನಕ್ಕ ನಿಮ್ಮುವ ಪೂಜಿಸಿ ಏವೆನಯ್ಯಾ?
ಎನ್ನ ಮನದ ಅವಗುಣವ ಕಳೆದು,
ನಿಮ್ಮ ಶರಣರಿಗೆ ಶರಣೆಂಬುದ ಕರುಣಿಸು, ಕೂಡಲಸಂಗಮದೇವಾ.

೪೨೦

ಮುತ್ತು ಉದಕವಲಾಗದು, ಉದಕ ಮುತ್ತಿನಲಾಗದು :
ತತ್ತ್ವ ಘಟಿಸಿದ ಸುಮುಹೂರ್ತದಲ್ಲಲ್ಲದೆ,
ಚಿತ್ತವೇದ್ಯವಾಗದು ಸದ್ಗುರುವಿನ ಕರುಣಕ್ಕಲ್ಲದೆ.
ಕರ್ತೃ ಕೂಡಲಸಂಗಮದೇವರ ಒಲಪಿನ ಪಯದ
ಚಿತ್ತವಿಡಿದಂಗಲ್ಲದೆ ಶಿವತತ್ತ್ವ ಸಾಹಿತ್ಯವಾಗದು.

೪೨೧

ಲೇಸ ಕಂಡು ಮನ ಬಯಸಿ ಬಯಸಿ
ಆಸೆ ಮಾಡಿದೊಡಿಲ್ಲ ಕಂಡಯ್ಯಾ.
ತಾಳಮರಕ್ಕೆ ಕೈಯ ನೀಡಿ
ಮೇಲೆ ನೋಡಿ ಗೋಣು ನೊಂದುದಯ್ಯಾ.
ಕೂಡಲಸಂಗಮದೇವಾ, ಕೇಳಯ್ಯಾ,
ನೀವೀವ ಕಾಲಕ್ಕಲ್ಲದಿಲ್ಲ ಕಂಡಯ್ಯಾ.

೪೨೨

ಅಱತುದಯ್ಯಾ ಅಂಗಗುಣ, ಒಱೆತುದಯ್ಯಾ ಭಕ್ತಿರಸ,
ಆವರಿಸಿತ್ತಯ್ಯಾ ಲಿಂಗವಂಗವನು :
ಏನೆಂಗಱಿಯೆನಯ್ಯಾ ಲೋಕಲೌಕಿಕವ.
ಲಿಂಗಭ್ರಾಂತನಾದೆನಯ್ಯಾ ಕೂಡಲಸಂಗಮದೇವಾ,
ನಿಮ್ಮ ಚರಣವೆನ್ನನೆಡೆಗೊಂಡಿತ್ತಾಗಿ.

೪೨೩

ಹಾವ, ಕಿಚ್ಚ, ಮುಟ್ಟಿಹ ಶಿಶುವೆಂದು
ಹೆತ್ತ ತಾಯಿ ಮಗನ ಬೆಂಬತ್ತಿ ಬಪ್ಪಂತೆ—
ಎನ್ನೊಡನೊಡನೆ ಕೂಡಲಸಂಗಮದೇವ
ಕಾಯ್ದುಕೊಂಡಿಪ್ಪನಯ್ಯಾ.

೪೨೪

ಚಂದ್ರೋದಯಕ್ಕೆ ಅಂಬುಧಿ ಹೆಚ್ಚುವುದಯ್ಯಾ,
ಚಂದ್ರ ಕುಂದೆ ಕುಂದುವುದಯ್ಯಾ.
ಚಂದ್ರಂಗೆ ರಾಹುವಡ್ಡಬಂದಲ್ಲಿಯಂಬುಧಿ ಬೊಬ್ಬಿಟ್ಟಿತ್ತೆ ?
ಅಂಬುಧಿಯ ಮುನಿಯಾಪೋಷಣವ ಕೊಂಬಲ್ಲಿ ಚಂದ್ರಮನಡ್ಡ ಬಂದನೆ ?
ಆರಿಗಾರೂ ಇಲ್ಲಾ : ಕೆಟ್ಟವಂಗೆ ಕೆಳೆಯಿಲ್ಲಾ !
ಜಗದ ನಂಟ ನೀನೆ, ಅಯ್ಯಾ, ಕೂಡಲಸಂಗಮದೇವಾ.

೧೮

ನಿಜದ ನಿಲವು

೪೨೫

ನೆಲನೊಂದೆ ಹೊಲೆಗೇರಿ-ಶಿವಾಲಯಕ್ಕೆ; ಜಲವೊಂದೆ ಶೌಚಾಚಮನಕ್ಕೆ;
ಕುಲವೊಂದೆ ತನ್ನ ತಾನಱಿದವಂಗೆ; ಫಲವೊಂದೆ ಷಡುದರುಶನ ಮುಕ್ತಿಗೆ;
ನಿಲವೊಂದೆ, ಕೂಡಲಸಂಗಮದೇವಾ, ನಿಮ್ಮನಱಿದವಂಗೆ.

೪೨೬

ಸತ್ಯವಿದೆ, ಸಮಾಧಾನವಿದೆ; ಮನಕ್ಕೆ ಬಾರದೇನಯ್ಯಾ ?
ಸರ್ವಸನುಮತವೆಂಬ ಸುಖವಿದೆ; ಮನಕ್ಕೆ ಸೋಂಕದೇನಯ್ಯಾ ?
ಆನೀನೆಂಬುದೊಂದು ಘನವಿದೆ; ಕೂಡಲಸಂಗಮದೇವಾ, ಭ್ರಮೆಯೊ ?

೪೨೭

ಸಂಜೆಯ ಮಂಜಿನ ಕಪ್ಪು
ಅಂಜಿದಡೆ ಶಂಕೆ ತದ್ರೂಪವಾಗಿ ನಿಂದಿತ್ತು.
ತನ್ನ ಭಾವದ ನಟನೆ ನಡೆವನ್ನಕ್ಕರ ನಡೆಯಿತ್ತು.
ಅದು ನಿಂದಲ್ಲಿಯೆ ನಿಂದಿತ್ತು.
ಅದಱಂತುವನಱಿದಡೆ ಹಿಂದೆ ಹುಸಿ,
ಮುಂದೆ ಕೂಡಲಸಂಗಮದೇವರ ನಿಲವು ತಾನೆ.

೪೨೮

ಶ್ವಾನಜ್ಞಾನ ಗಜಜ್ಞಾನ ಕುಕ್ಕುಟಜ್ಞಾನವೆಂಬ
ಜ್ಞಾನತ್ರಯಂಗಳೇನಾದವು ?
ಅಂತು ತ್ರಿಕಾಲಜ್ಞಾನಂಗಳಿಂದೇನಹುದು ?
ಕೂಡಲಸಂಗಮದೇವಾ, ನಿಮ್ಮನಱಿಯದ ಜ್ಞಾನವೆಲ್ಲಾ ಅಜ್ಞಾನ.

೪೨೯

ಗ್ರಹ ಬಂದು ಆವರಿಸಲೊಡನೆ ತನ್ನ ಮಱಹಿಸುವುದು ;
ಮತ್ತೊಂದಕ್ಕಿಂಬುಗೊಡಲೀಯದಯ್ಯಾ.
ಕೂಡಲಸಂಗಮದೇವನಱಿವು ಅನುಪಮವಾಗಲೊಡನೆ
ಬೆವಹಾರದೊಳಗಿರಲೀಯದಯ್ಯಾ !

೪೩೦

ಕುಱಿವಿಂಡು ಕಬ್ಬಿನ ಉಲಿವ ತೋಂಟವ ಹೊಕ್ಕು
ತೆಱನನಱಿಯದೆ ತನಿರಸದ, ಹೊಱಗಣೆಲೆಯನೆ ಮೇದುವು !
ನಿಮ್ಮನಱಿವ ಮದಕರಿಯಲ್ಲದೆ ಕುಱಿ ಬಲ್ಲುದೆ,
ಕೂಡಲಸಂಗಮದೇವಾ ?

೪೩೧

ಓದಿದರೇನು, ಕೇಳಿದರೇನು, ಶಿವಪಥವನಱಿಯದನ್ನಕ್ಕ ?
ಓದಿತ್ತು ಕಾಣಿರೋ ಶುಕನು ಶಿವಪಥವನಱಿಯದನ್ನಕ್ಕ !
ಓದಿದ ಫಲವು ಮಾದಾರ ಚೆನ್ನಯ್ಯಂಗಾಯಿತ್ತು,
ಕೂಡಲಸಂಗಮದೇವಾ.

೪೩೨

ಐದು ಮಾನವ ಕುಟ್ಟಿ ಒಂದು ಮಾನವ ಮಾಡು, ಕಂಡಾ ಮದವಳಿಗೆ :
ಇದು ನಮ್ಮ ಬಾಳುವೆ, ಮದವಳಿಗೆ; ಇದು ನಮ್ಮ ವಿಸ್ತಾರ, ಮದವಳಿಗೆ !
ಮದವಳಿದು ನಿಜವುಳಿದ ಬಳಿಕ, ಅದು ಸತ್ಯ, ಕಾಣಾ,
ಕೂಡಲಸಂಗಮದೇವಾ.

೪೩೩

ಏನನಾದರೆಯೂ ಸಾಧಿಸಬಹುದು,
ಮತ್ತೇನನಾದರೆಯೂ ಸಾಧಿಸಬಹುದಯ್ಯಾ:
ತಾನಾರೆಂಬುದ ಸಾಧಿಸಬಾರದು
ಕೂಡಲಸಂಗಮದೇವರ ಕರುಣವುಳ್ಳವಂಗಲ್ಲದೆ !

೪೩೪

ಭಕ್ತಿಯೆಂಬ ಪೃಥ್ವಿಯ ಮೇಲೆ
ಗುರುವೆಂಬ ಬೀಜವಂಕುರಿಸಿ, ಲಿಂಗವೆಂಬ ಎಲೆಯಾಯಿತ್ತು.
ಲಿಂಗವೆಂಬ ಎಲೆಯ ಮೇಲೆ ವಿಚಾರವೆಂಬ ಹೂವಾಯಿತ್ತು,
ಆಚಾರದೆಂಬ ಕಾಯಾಯಿತ್ತು, ನಿಷ್ಪತ್ತಿಯೆಂಬ ಹಣ್ಣಾಯಿತ್ತು.
ನಿಷ್ಪತ್ತಿಯೆಂಬ ಹಣ್ಣು ತೊಟ್ಟುಬಿಟ್ಟು ಕಳಚಿ ಬೀಳುವಲ್ಲಿ
ಕೂಡಲಸಂಗಮದೇವ ತಮಗೆ ಬೇಕೆಂದು ಎತ್ತಿಕೊಂಡ.

೪೩೫

ದೇವಲೋಕ ಮರ್ತ್ಯಲೋಕವೆಂಬ ಸೀಮೆಯುಳ್ಳನ್ನಕ್ಕ
ಕೇವಲ ಶರಣನಾಗಲಱಿಯೆ.
ಸತ್ತು ಬೆರಸಿಹೆನೆಂದರೆ ಕಬ್ಬಿನ ತುದಿಯ ಮೆಲಿದಂತೆ !
ಕೂಡಲಸಂಗಮದೇವಾ.

೪೩೬

ಲಜ್ಜೆಗೆಟ್ಟೆನು, ನಾಣುಗೆಟ್ಟೆನು; ಕುಲಗೆಟ್ಟೆನು, ಛಲಗೆಟ್ಟೆನು :
ಸಂಗಾ, ನಿನ್ನ ಪೂಜಿಸಿ ಭವಗೆಟ್ಟೆನು ನಾನಯ್ಯಾ !
ಕೂಡಲಸಂಗಮದೇವಯ್ಯಾ,
ನಿಮ್ಮ ಮುಟ್ಟಿ ಹುಟ್ಟುಗೆಟ್ಟೆನು ನಾನು !

೪೩೭

ಮನಕ್ಕೆ ಮನೋಹರವಲ್ಲದ ಗಂಡರು ಮನಕ್ಕೆ ಬಾರರು ಕೇಳವ್ವಾ, ಕೆಳದಿ.
ಪನ್ನಗಭೂಷಣರಲ್ಲದ ಗಂಡರು ಇನ್ನೆನಗಾಗದ ಮೊಱೆ, ನೋಡವ್ವಾ !
ಕನ್ನೆಯಂದಿನ ಕೂಟ, ಚಿಕ್ಕಂದಿನ ಬಾಳುವೆ.
ನಿಮ್ಮಾಣೆಯಯ್ಯಾ, ಕೂಡಲಸಂಗಮದೇವಾ !

೪೩೮

ಕೊಡುವಾತಂ ಸಂಗ, ಕೊಂಬಾತಂ ಸಂಗ, ಕಾಣಿರೆಲವೊ !
ನರಮಾನವರು ಕೊಡುವರೆಂಬುವನ ಬಾಯಲಿ
ಬಾಲಹುಳುಗಳು ಸುರಿಯವೆ ?
ಮೂಱುಲೋಕಕ್ಕೆ ನಮ್ಮ ಕೂಡಲಸಂಗಯ್ಯ ಕೊಡುವ, ಕಾಣಿರೆಲವೊ !

೪೩೯

ಏನೆಂಬೆ, ಏನೆಂಬೆ ಒಂದೆರಡಾದುದ ?
ಏನೆಂಬೆ, ಏನೆಂಬೆ ಎರಡೊಂದಾದುದ ?
ಏನೆಂಬೆ, ಏನೆಂಬೆ ಅವಿರಳಘನವ ?
ಮಹಾದಾನಿ ಕೂಡಲಸಂಗಮದೇವಯ್ಯ ತಾನೆ ಬಲ್ಲ.

೪೪೦

ಪುಣ್ಯಪಾಪವೆಂಬುಭಯಕರ್ಮವನಾರು ಬಲ್ಲರಯ್ಯಾ?
ಇವನಾರುಂಬರು ?
ಕಾಯ ತಾನುಂಬರೆ, ಕಾಯ ತಾ ಮಣ್ಣು.
ಜೀವ ತಾನುಂಬರೆ, ಜೀವ ತಾ ಬಯಲು.
ಈ ಉಭಯನಿರ್ಣಯವ, ಕೂಡಲಸಂಗಮದೇವಾ, ನಿಮ್ಮ ಶರಣ ಬಲ್ಲ.

೪೪೧

ಕಾಯದೊಳಗೆ ಕಾಯವಾಗಿರ್ದೆಯಲ್ಲ ಹಂಸಾ :
ಸಂಸಾರಮಾಯಾಪಾಶವ ಬಿಡಲೊಲ್ಲದೆ
ಡಿಂಬವ ನೆಚ್ಚಿ ಕೆಟ್ಟೆಯಲ್ಲಾ ಹಂಸಾ,
ಜೀವಶೂನ್ಯವಾಗಿ, ಕೂಡಲಸಂಗನ ಶರಣರು
ಲಿಂಗವಾಗಿ ಹೋದುದನಱಿಯಾ ?

೪೪೨

ಗುರುಕಾರುಣ್ಯವೆ ಸದಾಚಾರ, ಗುರುಕಾರುಣ್ಯವೆ ಶಿವಾಚಾರ,
ಗುರುಕಾರುಣ್ಯವೆ ಪ್ರಸಾದರುಚಿ !
ಮುಂದೆ ಗುರು ಹಿಂದೆ ಲಿಂಗ, ಕೂಡಲಸಂಗಮದೇವಾ.

೪೪೩

ಗುರು ತೋಱಿದ ಲಿಂಗವು ಮನಸ್ಥಲವಾಗಿರಲು
ಪವನಭೇದದಿಂದ ಅಱಿದಹೆನೆಂದರೆ, ಅದೆ ದ್ರೋಹ !
ಇಡಾ ಪಿಂಗಳಾ ಸುಷುಮ್ನಾನಾಳವಿಡಿದು ಅಱಿದಹೆನೆಂದರೆ
ಕೂಡಲಸಂಗಮದೇವ ಮೂಗ ಕೊಯ್ಯದೆ ಮಾಣ್ಬನೆ ?

೪೪೪

ಕಲ್ಲೊಳಗೆ ಹೊನ್ನುಂಟು, ಮರದೊಳಗೆ ಅಗ್ನಿಯುಂಟು,
ಹಾಲೊಳಗೆ ತುಪ್ಪವುಂಟು : ಅಂತರಾಮಿಯಲ್ಲಿ ಶಿವನಿಹನು.
ಇದೇನು ಕಾರಣ ಕತ್ತಲೆ, ಕಾಣಬಾರದು ?
ತೋಱಬಲ್ಲ ಗುರು ಮಳಿಯನು, ಕೂಡಲಸಂಗಮದೇವಾ.

೪೪೫

ಮುತ್ತು ನೀರಲಿ ಹುಟ್ಟಿ, ಮತ್ತೆ ನೀರಪ್ಪುದೆ ?
ಗುರುಕಾರುಣ್ಯವ ಹಡೆದ ಭಕ್ತನು ಹಿಂದಣ ಪೂರ್ವಾಶ್ರಯುವ ಬೆರಸಿದರೆ,
ಗುರುದ್ರೋಹ, ಲಿಂಗದ್ರೋಹ, ಜಂಗಮದ್ರೋಹ,
ಆಚಾರದ್ರೋಹ, ಪ್ರಸಾದದ್ರೋಹ !
ಇಂತೀ ಪಂಚಮಹಾಪಾತಕಂಗಳು ಭಕ್ತಂಗಲ್ಲದೆ ಭವಿಗೆಲ್ಲಿಯದೊ ?
ಗುರುವಿದು, ಲಿಂಗವಿದು, ಜಂಗಮವಿದು,
ಆಚಾರವಿದು, ಪ್ರಸಾದವಿದೆಂದಱಿಯದಿದ್ದರೆ,
ಕುಂಭಿಪಾತಕ ನಾಯಕನರಕ, ಕೂಡಲಸಂಗಮದೇವಾ !

೪೪೬

ಸಮರತಿ ಸಮಕಳೆ ಸಮಸುಖ ಸ್ವಾನುಭಾವ ಹಿರಿದು,
ಕಿಱಿದಾದುದನಾರೂ ಅಱಿಯರು !
ಪಾಷಾಣಪರೀಕ್ಷೆವಂತನಂತೆ—
ಗುರುವಿಲ್ಲದವರಂತಿರಲಿ—
ಕೂಡಲಸಂಗಮದೇವಯ್ಯಾ, ಗುರುವುಳ್ಳವರ ನಿಜವಿಂತುಟು !

೪೪೭

ಪರುಷ ಮುಟ್ಟಿದ ಬಳಿಕ ಕಬ್ಬುನವಾಗದು, ನೋಡಾ :
ಲಿಂಗ ಮುಟ್ಟಿದ ಬಳಿಕ ಕುಚಿತ್ತಾಚಾರವಾಗದು,
ಕೂಡಲಸಂಗನ ಶರಣರು ಅನ್ಯವನಱಿಯರಾಗಿ

೪೪೮

ವನದ ಕೋಗಿಲೆ ಮನೆಗೆ ಬಂದರೆ, ತನ್ನ ವನವ ನೆನೆವುದ ಮಾಣ್ಬುದೆ?
ಮಲೆಯ ಗಜವು ಮನೆಗೆ ಬಂದರೆ, ತನ್ನ ಮಲೆಯ ನೆನೆವುದ ಮಾಣ್ಬುದೆ?
ಕೂಡಲಸಂಗನ ಶರಣರು ಮಱೆದು ಮರ್ತ್ಯಕ್ಕೆ ಬಂದರೆ,
ತಮ್ಮ ಮಧ್ಯಾಂತರಂಗದ ಲಿಂಗವ ನೆನೆವುದ ಮಾಣ್ಬರೆ?

೪೪೯

ಕುಲವಳಿದು, ಛಲವಳಿದು, ಮದವಳಿದು, ಮತ್ಸರವಳಿದು,
ಆತ್ಮತೇಜವಳಿದು, ಸರ್ವ ಅಹಂಕಾರವಳಿದು,
ಶ್ರೀಮನ್ನಿಜ ಉಳಿದು, ಲಿಂಗಜಂಗಮವೆಂಬ ಶಬ್ದವಿಡಿದು,
ಸಾಧ್ಯವಾಯಿತ್ತು ನೋಡಾ.
ತಾನಳಿದು, ತಾನುಳಿದು ಸಹಜಪದವಿಯಲ್ಲಿ
ಕೂಡಲಸಂಗನಲ್ಲಿ ತಾನು ತಾನಾದ.

೪೫೦

ಆದಿಯನಱುಹಿದ, ಅನಾದಿಯ ತೋಱಿದ;
ಇಹವ ಕೆಡಿಸಿದ, ಪರವ ನಿಲಿಸಿದ;
ಘನವ ತೋಱಿದ; ಮನವ ಸರಸವಿಟ್ಟು ಅನುವ ತೋಱಿದ!
ಆಯತ್ತವ ಮಾಡಿ, ತನುವ ಮಱಿಸಿ, ಮಹಾತನುವನಱುಹಿದ!
ಹಿಂದಣ ಪೂರ್ವಾಶ್ರಯವ ಹಿಂದುಮಾಡಿ ತೋಱಿ
ಮುಂದಣ ಗತಿಯ ಸಂದೇಹವ ಬಿಡಿಸಿದ!
ಕೂಡಲಸಂಗಮದೇವರಲ್ಲಿ
ಪ್ರಭುವಿನ ಶ್ರೀಪಾದಕ್ಕೆ ನಮೋ ನಮಃ ಎನುತಿರ್ದೆನು!

೧೯

ಸಮತೆ-ಸಮರಸ

೪೫೧

ಕಾಣದ ಠಾವಿನಲಿ ಜಱಿದರೆಂದರೆ, ಕೇಳಿ ಪರಿಣಾಮಿಸಬೇಕು.
ಅದೇನು ಕಾರಣ? ಕೊಳ್ಳದೆ ಕೊಡದೆ ಅವರಿಗೆ ಸಂತೋಷವಹುದಾಗಿ!
ಎನ್ನ ಮನದ ತದ್ದ್ವೇಷವಳಿದು
ನಿಮ್ಮ ಶರಣರಿಗೆ ಶರಣೆಂಬುದ ಕರುಣಿಸು, ಕೂಡಲಸಂಗಮದೇವಾ.

೪೫೨

ತನಗೆ ಮುನಿದವರಿಗೆ ತಾ ಮುನಿಯಲೇಕಯ್ಯಾ?
ತನಗಾದ ಆಗೇನು? ಅವರಿಗಾದ ಚೇಗೇನು?
ತನುವಿನ ಕೋಪ ತನ್ನ ಹಿರಿಯತನದ ಕೇಡು!
ಮನದ ಕೋಪ ತನ್ನಱಿಹಿನ ಕೇಡು!
ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ
ನೆರೆಮನೆಯ ಸುಡದು, ಕೂಡಲಸಂಗಮದೇವಾ!

೪೫೩

ಕಾಯವೆಂಬ ಘಟಕ್ಕೆ ಚೈತನ್ಯವೆ ಸಯಿದಾನ,
ಸಮತೆಯೆಂಬ ಜಲ, ಕರಣಾದಿಗಳೆ ಶ್ರವಣ;
ಜ್ಞಾನವೆಂಬಗ್ನಿಯನಿಕ್ಕಿ,
ಮತಿಯೆಂಬ ಸಟ್ಟುಗದಲ್ಲಿ ಘಟ್ಟಿಸಿ ಪಾಕಕ್ಕೆ ತಂದು,
ಭಾವದಲ್ಲಿ ಕುಳ್ಳಿರಿಸಿ, ಪರಿಣಾಮದೋಗರವ ನೀಡಿದರೆ
ಕೂಡಲಸಂಗಮದೇವಂಗೆ ಆರೋಗಣೆಯಾಯಿತ್ತು.

೪೫೪

ಘನಗಂಭೀರ ವಾರಿಧಿಯೊಳಗೆ ತೋಱುವ ತೆರೆಗಳು
ಆ ವಾರಿಧಿಯ ಬಿಟ್ಟು ತೋಱಬಲ್ಲುವೆ?
ತೋಱಿದರೆ ಆ ವಾರಿಧಿ ತನ್ನ ತಾ ಜಱಿದುಕೊಂಬುದೆ?
ಜಗಳದೊಳಗೆ ಕೂಡಿ ಪರಿಪೂರ್ಣವಾದ ಬಳಿಕ
ಇದಿರ ನೋಡಿ ಜಱಿದು ನುಡಿವ ಠಾವಾವುದು ಹೇಳಯ್ಯಾ?
ಕೂಡಲಸಂಗಮದೇವಯ್ಯಾ, ನಿಮ್ಮ ನೀವು ಪರಿಣಾಮಿಸಿಕೊಂಬುದಲ್ಲದೆ
ಭಿನ್ನವ ಮಾಡಲುಂಟೆ?

೪೫೫

ಅಱಿಯಲಿಲ್ಲ, ಮಱೆಯಲಿಲ್ಲ;
ನಿಜವು ನಿಂದಿತ್ತಾಗಿ, ನಿರ್ನಾಮವಾಯಿತ್ತಾಗಿ, ನಿಷ್ಪತ್ತಿಯಾಯಿತ್ತು.
ಅಗಮ್ಯದಲ್ಲಿ ಗಮನ ಕೆಟ್ಟಿತ್ತು; ನಿಂದಲ್ಲಿ ನಿರಾಳವಾಯಿತ್ತು.
ಕೂಡಲಸಂಗಮದೇವರಲ್ಲಿ ಶಬ್ದ ಮುಗ್ಧವಾಯಿತ್ತು.

೪೫೬

ಒಲ್ಲೆಂಬುದು ವೈರಾಗ್ಯ: ಒಲಿವೆನೆಂಬುದು ಕಾಯಗುಣ.
ಆವ ಪದಾರ್ಥವಾದರೇನು?
ತಾನಿದ್ದೆಡೆಗೆ ಬಂದುದ ಲಿಂಗಾರ್ಪಿತವ ಮಾಡಿ ಭೋಗಿಸುವುದೆ ಆಚಾರ.
ಕೂಡಲಸಂಗಮದೇವನನೊಲಿಸಬಂದ ಪ್ರಸಾದಕಾಯವ ಕೆಡಿಸಲಾಗದು.

೪೫೭

ಸಕ್ಕರೆಯ ಕೊಡನ ತುಂಬಿ ಹೊಱಗೆ ಸವಿದರೆ ರುಚಿಯುಂಟೆ?
ತಕ್ಕೈಸಿ ಭುಜ ತುಂಬಿ ಲಿಂಗಸ್ಪರ್ಶನವ ಮಾಡದೆ
ಅಕ್ಕಟಾ! ಸಂಸಾರ ವೃಥಾ ಹೋಯಿತ್ತಲ್ಲಾ!
ಅದೇತಱ ಭಕ್ತಿ? ಅದೇತಱ ಯುಕ್ತಿ?
ಕೂಡಿಕೋ, ಕೂಡಲಸಂಗಮದೇವಾ.

೪೫೮

ಲಿಂಗವ ಪೂಜಿಸಿ ಫಲವೇನಯ್ಯಾ,
ಸಮರತಿ, ಸಮಕಳೆ, ಸಮಸುಖವನಱಿಯದನ್ನಕ್ಕ?
ಲಿಂಗವ ಪೂಜಿಸಿ ಫಲವೇನಯ್ಯಾ,
ಕೂಡಲಸಂಗಮದೇವರ ಪೂಜಿಸಿ
ನದಿಯೊಳಗೆ ನದಿ ಬೆರಸಿದಂತಾಗದನ್ನಕ್ಕ?

೪೫೯

ಪೂಜೆಯುಳ್ಳನ್ನಕ್ಕ ಲಿಂಗವ ಹಾಡಿದೆ,
ಮಾಟವುಳ್ಳನ್ನಕ್ಕ ಜಂಗಮವ ಹಾಡಿದೆ,
ಜಿಹ್ವೆಯುಳ್ಳನ್ನಕ್ಕ ಪ್ರಸಾದವ ಹಾಡಿದೆ.
ಈ ತ್ರಿವಿಧ ನಾಸ್ತಿಯಾದ ಬಳಿಕ
ಎನ್ನ ನಾ ಹಾಡಿಕೊಂಡೆ, ಕಾಣಾ, ಕೂಡಲಸಂಗಮದೇವಾ.

೪೬೦

ವಾರವೆಂದಱಿಯೆ, ದಿನವೆಂದಱಿಯೆ, ಏನೆಂದಱಿಯೆನಯ್ಯಾ !
ಇರುಳೆಂದಱಿಯೆ, ಹಗಲೆಂದಱಿಯೆ, ಏನೆಂದಱಿಯೆನಯ್ಯಾ !
ನಿಮ್ಮುವ ಪೂಜಿಸಿ ಎನ್ನುವ ಮಱೆದೆ, ಕೂಡಲಸಂಗಮದೇವಾ.

೪೬೧

ನೀನೊಲಿದರೆ ಒಲಿ; ಒಲ್ಲದಿದ್ದರೆ ಸಮವೇದಿಸಿಕೊಳ್ಳಯ್ಯಾ;
ಲಿಂಗದ ಬೆಳಗನೊಳಕೊಂಡು ಸಮವೇದಿಸಿಕೊಳ್ಳಯ್ಯಾ.
ಕೂಡಲಸಂಗಮದೇವರಲ್ಲಿ ತದ್ಗತನಾದೆನಯ್ಯಾ,

೪೬೨

ಅಂಗವೇ ಲಿಂಗ, ಲಿಂಗವೇ ಅಂಗವೆಂದಱಿದ ಬಳಿಕ
ಅಲ್ಲಿಯೇ ಅದೇ ಪ್ರಾಣಲಿಂಗ.
ಲಿಂಗವೇ ಪ್ರಾಣವೆಂದಱಿದ ಬಳಿಕ
ಅಲ್ಲಿಯೂ ಅದೇ ಉಂಟೆಂದು ತೋಱಲಿಲ್ಲ :
ಇಲ್ಲವೆಂದಱಿಸಲಿಲ್ಲ.
ಕೂಡಲಸಂಗಮದೇವಾ, ಲಿಂಗ ನಿರಂತರವಲ್ಲಿಯೇ.

೪೬೩

ಮಣ್ಣು ಮಡಕೆ ಮಣ್ಣಾಗದು ಕ್ರೀಯಳಿದು :
ಬೆಣ್ಣೆ ಕರಗಿ ತುಪ್ಪವಾಗಿ,
ಮರಳಿ ತುಪ್ಪ ಬೆಣ್ಣೆಯಾಗದು ಕ್ರೀಯಳಿದು :
ಹೊನ್ನು ಕಬ್ಬುನವಾಗದು ಕ್ರೀಯಳಿದು :
ಮುತ್ತು ನೀರಲ್ಲಿ ಹುಟ್ಟಿ ಮತ್ತೆ ನೀರಾಗದು ಕ್ರೀಯಳಿದು :
ಕೂಡಲಸಂಗನ ಶರಣನಾಗಿ ಮರಳಿ ಮಾನವನಾಗನು ಕ್ರೀಯಳಿದು.

೪೬೪

ಭವವಿಲ್ಲದ ಭಕ್ತನ ಪರಿಯ ನೋಡಾ :
ಮನಃಪ್ರಾಣಮುಕ್ತ, ಭವವಿರಹಿತ,
ಒಡಲಿಲ್ಲದ ಜಂಗಮದ ಪರಿಯ ನೋಡಾ !
ಸಿಡಿಲುಮಿಂಚಿನ ಬೆಳಗನೊಂದೆಡೆಯಲ್ಲಿ ಹಿಡಿಯಲುಂಟೆ ?
ಉಭಯವೊಂದಾದವರ ಕಂಡಡೆ ನೀನೆಂಬೆ, ಕೂಡಲಸಂಗಮದೇವಾ.

೪೬೫

'ಮಾಟ-ಕೂಟ ಫಲಪ್ರಾಪ್ತಿ' ಎಂಬ ಮಾತ ಕೇಳಲಾಗದು ಶಿವ ಶಿವಾ !
ನಿಮ್ಮ ಭಕ್ತರಿಗೆ 'ಮಾಡಿದೆನೆ'ನ್ನದಿರೆಂದು
ಶ್ರೀಗುರುಲಿಂಗವು ಕೃಪೆಯ ಮಾಡಿದ ಕಾರಣ,
ಅಲ್ಲಿ ಮಾಡುವರೂ ಮಾಡಿಸಿಕೊಂಬವರೂ ನೀವೇ, ಕೂಡಲಸಂಗಮದೇವಾ.

೪೬೬

ಮಾಡಿ ಮಾಡಿಸಿಕೊಂಬವೆರಡಱ ನಿಲುಕಡೆ ಒಂದೇ.
ಗುರು ಒಂದೇ, ಲಿಂಗವೊಂದೇ, ಜಂಗಮವೊಂದೇ, ಪ್ರಸಾದವೊಂದೇ.
ಒಂದಾದಲ್ಲಿ ಎರಡಾಗಿ ಮಾಡುವ ಭಕ್ತ ನೀನೇ, ಕೂಡಲಸಂಗಮದೇವಾ.

೪೬೭

ಎನ್ನ ತನುಮನವೆರಡನೂ
ಗುರುಕರುಣದಿಂದ ಲಿಂಗದಲ್ಲಿ ಏಕವ ಮಾಡಿದೆನಾಗಿ
ಎನ್ನಂತರಂಗ ಬಹಿರಂಗವೆರಡೂ ನಿಮ್ಮವು ನೋಡಾ !
ನಿಮ್ಮಂತರಂಗದೊಳಗೆ ನಿಮ್ಮನೆ ಇಂಬಿಟ್ಟುಕೊಂಬೆ,
ನಿಮ್ಮ ಬಹಿರಂಗದೊಳಗೆ ನಿಮ್ಮನೆ ನಿಜವಾಗಿ ಪೂಜಿಸುವೆ,
ನಿಮ್ಮ ಅಱಿವಿಂದ ನಿಮ್ಮನೆ ಅಱಿವೆ, ಕಾಣಾ, ಕೂಡಲಸಂಗಮದೇವಾ.

೨೦

ಅ ನು ಭಾ ವ

೪೬೮

ಅನುಭಾವ, ಅನುಭಾವವೆಂದೆಂಬಿರಿ :
ಅನುಭಾವವೆಂಬುದು ನೆಲದ ಮಱೆಯ ನಿಧಾನ, ಕಾಣಿರೋ,
ಅನುಭಾವವೆಂಬುದು ಅಂತರಂಗದ ರತ್ನ ಕಾಣಿರೋ,
ಅನುಭಾವವೆಂಬುದು ಶಿಶು ಕಂಡ ಕನಸು ಕಾಣಿರೋ.
ಅನುಭಾವವೆಂಬುದು ರಚ್ಚೆಯ ಮಾತೆ ?
ಅನುಭಾವವೆಂಬುದು ಸಂತೆಯ ಸುದ್ದಿಯೆ ?
ಅನುಭಾವವೆಂಬುದು ಬೀದಿಯ ಪಸಾರವೆ ?
ಏನೆಂಬೆ, ಹೇಳಾ, ಮಹಾಘನವನು ?
ಆನೆ ಮಾನದೊಳಡಗುವುದೆ ದರ್ಪಣದೊಳಗಲ್ಲದೆ ?
ಕಂಡಕಂಡಲ್ಲಿ ಗೋಷ್ಠಿಯಾಗಿ,
ನಿಂದಲ್ಲಿಯೇ ಅನುಭಾವ,
ಬಂದಬಂದಲ್ಲಿ ಪ್ರಸಂಗವ ಮಾಡುವ
ಹಂದಿಕುನ್ನಿಗಳನೇನೆಂಬೆನಯ್ಯಾ, ಕೂಡಲಸಂಗಮದೇವಾ.

೪೬೯

ಸ್ವಯಲಿಂಗದನುಭಾವ ತನಗೆ ದೊರೆಕೊಂಡ ಬಳಿಕ
ದೇವಲೋಕವೆಂಬುದೇನೋ, ಮರ್ತ್ಯಲೋಕವೆಂಬುದೇನೋ ?
ಆವುದಱಲ್ಲಿಯೂ ಭೇದವೇನಯ್ಯಾ ?
ಕೂಡಲಸಂಗಮದೇವಾ, ಬಳಿಕ ಆಲಸ್ಯವುಂಟೆ ?

೪೭೦

ನಿಮ್ಮ ಶ್ರೀಪಾದವ ಮುಟ್ಟಿ ಎನ್ನ ಕರ್ಮ ಹಱಿಯಿತ್ತು.
ನಿಮ್ಮ ಪ್ರಸಾದದಿಂದ ನಾನು ಭವಗೆಟ್ಟೆ, ನೋಡಯ್ಯಾ !
ಮನ ಪರುಷ, ದೃಷ್ಟಿ ಪರುಷ, ಭಾವ ಪರುಷ : ಲಿಂಗಗಣಂಗಳು.
ಕೂಡಲಸಂಗಮದೇವಾ, ನಿಮ್ಮ ಶರಣರನುಭಾವದಿಂದ
ನಾನು ಸುಖಿಯಾದೆನು !

೪೭೧

ನಿಮ್ಮ ನೋಟವನಂತಸುಖ, ಕೂಟ ಪರಮಸುಖ !
ಅವುಟುಕೋಟಿ ರೋಮಂಗಳೂ ಕಂಗಳಾಗಿ ನೋಡುತ್ತಿದ್ದೆನು !
ಕೂಡಲಸಂಗಮದೇವಯ್ಯಾ, ನಿಮ್ಮ ನೋಡಿ ನೋಡಿ
ಮನದಲ್ಲಿ ರತಿ ಹುಟ್ಟಿ ನಿಮಿರ್ದುವೆನ್ನ ಕಳೆಗಳು !

೪೭೨

ತೆಱಹಿಲ್ಲದ ನಡೆ, ತೆಱಹಿಲ್ಲದ ನುಡಿ, ತೆಱಹಿಲ್ಲದ ಸಂಭಾಷಣೆಯ ಸುಖವು.
ತೆಱಹಿಲ್ಲದೆ ಕಂಡು ನಂಬಿದ ಸ್ವಾನುಭಾವ ಸುಖವು.
ತೆಱಹಿಲ್ಲದ ಮಹಿಮೆ, ತೆಱಹಿಲ್ಲದ ವಿಚಾರ,
ಕೂಡಲಸಂಗಮದೇವಾ, ನಿಮ್ಮ ಶರಣಂಗೆ.

೪೭೩

ಉಱಿ ತಾಗಿದ ಮೃಗವು ಒಂದಡಿಯನಿಡುವುದೆ, ಅಯ್ಯಾ ?
ತನುವ ತಾಗಿದ ಸುಖವು ಅಗಲುವುದೆ ?
ಕೂಡಲಸಂಗನ ಶರಣರ ಅನುಭಾವವಱಿದವರ
ಮರಳಿ ಮರ್ತ್ಯರೆನ್ನಬಹುದೆ ?

೪೭೪

ಅಱಿವಿನ ಆಪ್ಯಾಯನಕ್ಕೆ ಅನುಭಾವವೇ ತೃಪ್ತಿ.
ಅಱಿವು ನೆಱಿ ಕೂಡಿ ಆಕಾರವೇ ಪ್ರಾಣವಾಗಿ ವಿಶ್ರಮಿಸಿದ ಬಳಿಕ
ಶ್ರೀಗುರು ಕೃಪೆಯ ಮಾಡಿದ ಪ್ರಾಣಲಿಂಗದ ಘನವೆಂತೆಂದೊಡೆ :
ಮತ್ಸ್ಯ ನುಂಗಿದ ಮಾಣಿಕ್ಯದಂತೆ,
ಮುತ್ತು ನುಂಗಿದ ನೀರಿನಂತೆ,
ಕಣ್ಣಾಲಿ ನುಂಗಿದ ನೋಟದಂತೆ.
ಬಯಲನೊಳಕೊಂಡ ಬ್ರಹ್ಮಾಂಡದೊಳಗಿಪ್ಪ ಸ್ವಯಾನುಭಾವಿಗಳ
ಅನುಭಾವವ ತೋಱಿ ಬದುಕಿಸಾ, ಕೂಡಲಸಂಗಮದೇವಾ.

೪೭೫

ಅನುಭಾವವಿಲ್ಲದ ಭಕ್ತಿ ಆನುವಿಂಗೆ ಬಾರದು.
ಅನುಭಾವವಿಲ್ಲದ ಲಿಂಗ ಸಮರಸಸುಖವನೀಯದು.
ಅನುಭಾವವಿಲ್ಲದ ಪ್ರಸಾದ ಪರಿಣಾಮ ಕೊಡದು.
ಅನುಭಾವವಿಲ್ಲದೆ ಅಱಿಯಬಾರದು.
'ತನ್ನಲ್ಲಿ ತಾ ಸನ್ನಿಹಿತವುಳ್ಳಡೆ ಶಿವಶರಣರ ಸಂಗವೇತಕ್ಕೆ' ಎನಲುಂಟೆ?
ಕೂಡಲಸಂಗಮದೇವಯ್ಯಾ,
ನಿಮ್ಮ ಅನುಭಾವ ಮಾತಿನ ಮಥನವೆನಬಹುದೆ?

೪೭೬

ಕಿವಿಯ ಸೂತಕ ಹೋಯಿತ್ತು ಸದ್ಗುರು ವಚನದಿಂದೆ.
ಕಣ್ಗಳ ಸೂತಕ ಹೋಯಿತ್ತು ಸದ್‌ಭಕ್ತರ ಕಂಡೆನಾಗಿ.
ಕಾಯದ ಸೂತಕ ಹೋಯಿತ್ತು ನಿಮ್ಮ ಚರಣವ ಮುಟ್ಟಿದೆನಾಗಿ.
ಬಾಯ ಸೂತಕ ಹೋಯಿತ್ತು ನಿಮ್ಮೊಕ್ಕುದ ಕೊಂಡೆನಾಗಿ.
ನಾನಾ ಸೂತಕ ಹೋಯಿತ್ತು ನಿಮ್ಮ ಶರಣರನುಭಾವಿಯಾಗಿ.
ಕೂಡಲಸಂಗಮದೇವಾ, ಕೇಳಯ್ಯಾ,
ಎನ್ನ ಮನದ ಸೂತಕ ಹೋಯಿತ್ತು ನೀವಿಲ್ಲದಿಲ್ಲೆಂದಱಿದೆನಾಗಿ.

೪೭೭

ಹುತ್ತಕ್ಕೆ ಏಸು ಬಾಯಾದರೇನು? ಸರ್ಪನಿಪ್ಪುದೊಂದೇ ಸ್ಥಾನ.
ಭಾವ ಭಾವಿಸಿ ಭ್ರಮೆಯಳಿದು ನೋಡಾ!
ಆ ಭಾವ ಭಾವಿಸಲು ನಿರ್ಭಾವ ಕೂಡಲಸಂಗಮದೇವಾ!

೪೭೮

ಲಿಂಗವಿಕಾರಿಗೆ ಅಂಗವಿಕಾರವೆಂಬುದಿಲ್ಲ,
ಜಂಗಮವಿಕಾರಿಗೆ ಧನವಿಕಾರವೆಂಬುದಿಲ್ಲ,
ಪ್ರಸಾದವಿಕಾರಿಗೆ ಮನವಿಕಾರವೆಂಬುದಿಲ್ಲ,
ಇಂತೀ ತ್ರಿಗುಣವನಱಿಯದಾತನು
ಅಚ್ಚಲಿಂಗೈಕ್ಯನು, ಕೂಡಲಸಂಗಮದೇವಾ.

೪೭೯

ಬಚ್ಚಲ ನೀರು ತಿಳಿದರೇನು? ಸಲ್ಲದ ಹೊನ್ನು ಮತ್ತೆಲ್ಲಿದ್ದರೇನು?
ಆಕಾಶದ ಮಾವಿನ ಫಲವೆಂದರೇನು? ಕೊಯ್ಯಲಿಲ್ಲ, ಮೆಲ್ಲಲಿಲ್ಲ!
ಕೂಡಲಸಂಗನ ಶರಣರ ಅನುಭಾವವಿಲ್ಲದವರು
ಎಲ್ಲಿದ್ದರೇನು? ಎಂತಾದರೇನು?

೪೮೦

ಜ್ಞಾನದ ಬಲದಿಂದ ಅಜ್ಞಾನದ ಕೇಡ ನೋಡಯ್ಯಾ;
ಜ್ಯೋತಿಯ ಬಲದಿಂದ ತಮಂಧದ ಕೇಡ ನೋಡಯ್ಯಾ;
ಸತ್ಯದ ಬಲದಿಂದ ಅಸತ್ಯದ ಕೇಡ ನೋಡಯ್ಯಾ;
ಪರುಷದ ಬಲದಿಂದ ಅವಲೋಹದ ಕೇಡ ನೋಡಯ್ಯಾ;
ಕೂಡಲಸಂಗನ ಶರಣರ ಅನುಭಾವದಿಂದ
ಎನ್ನ ಮನದ ಕೇಡ ನೋಡಯ್ಯಾ!

೪೮೧

ಮರ ಮರ ಮಥನದಿಂದ ಅಗ್ನಿ ಹುಟ್ಟಿ
ಆ ಮರನೆಲ್ಲವ ಸುಡದಿಪ್ಪುದೆ?
ಮಹಾನುಭಾವರ ಸಂಗದಿಂದ ಜ್ಞಾನಾಗ್ನಿ ಹುಟ್ಟಿ
ಎನ್ನ ತನುಗುಣವನೆಲ್ಲವ ಸುಡದಿಪ್ಪುದೆ?
ಇದುಕಾರಣ, ಮಹಾನುಭಾವರ ತೋಱಿಸು,
ಕೂಡಲಸಂಗಮದೇವಾ.

೪೮೨

ಬಯಲ ರೂಪ ಮಾಡಬಲ್ಲಾತನೆ ಶರಣನು;
ಆ ರೂಪ ಬಯಲ ಮಾಡಬಲ್ಲಾತನೆ ಲಿಂಗಾನುಭಾವಿ.
ಬಯಲ ರೂಪ ಮಾಡಲಱಿಯದಿದ್ದರೆ ಎಂತು ಶರಣನೆಂಬೆ?
ಆ ರೂಪ ಬಯಲ ಮಾಡಲಱಿಯದಿದ್ದರೆ ಎಂತು ಲಿಂಗಾನುಭಾವಿಯೆಂಬೆ?
ಈ ಉಭಯವೊಂದಾದರೆ ನಿಮ್ಮಲ್ಲಿ ತೆಱಹುಂಟೆ,
ಕೂಡಲಸಂಗಮದೇವಾ?

೪೮೩

ಮಿಥ್ಯೆಯನಳಿದುಳಿದ ಸತ್ಯಪ್ರಸಾದಿ;
ಅಂಜನವಿಲ್ಲದ ನಿರಂಜನಪ್ರಸಾದಿ;
ದುಃಖವನಳಿದ ಘನಾನಂದಪ್ರಸಾದಿ;
ಅನಿತ್ಯವಿಲ್ಲದ ನಿತ್ಯಪ್ರಸಾದಿ;
ಖಂಡಿತವಿಲ್ಲದ ಅಖಂಡಿತಪ್ರಸಾದಿ;
ಕೂಡಲಸಂಗಮದೇವರಲ್ಲಿ ತಾನೇ ಪ್ರಸಾದಿ.

೪೮೪

ಆದ್ಯರ ವಚನ ಆದ್ಯರಿಗಾಯಿತ್ತು :
ವೇದ್ಯರಿಗಲ್ಲದೆ ಸಾಧ್ಯವಾಗದು.
ಕೂಡಲಸಂಗಮದೇವಾ, ನಿಮ್ಮ ಅನುಭಾವದಿಂದ
ಎನ್ನ ಭವಂ ನಾಸ್ತಿಯಾಯಿತ್ತು.

೪೮೫

ಎಲ್ಲರ ಗಂಡರ ಪರಿಯಂತಲ್ಲ ನೋಡವ್ವಾ :
ನಮ್ಮ ನಲ್ಲ ಸುಳಿಯಲಿಲ್ಲ;
ಸುಳಿದು ಸಿಂಗಾರವ ಮಾಡಲಿಲ್ಲ !
ಕೂಡಲಸಂಗಮದೇವನು ತನ್ನೊಳಗೆ ಬೈಚಿಟ್ಟನಾಗಿ.

೪೮೬

ಅಱಿವನ್ನಕ್ಕರ ಅರ್ಚಿಸಿದೆ,
ಅಱಿವನ್ನಕ್ಕರ ಪೂಜಿಸಿದೆ,
ಅಱಿವನ್ನಕ್ಕರ ಹಾಡಿದೆ, ಹೊಗಳಿದೆ !
ಅಱಿವುಗೆಟ್ಟು, ಮಱಹು ನಷ್ಟವಾಗಿ,
ಭಾವ ನಿರ್ಭಾವವಾಗಿ,
ನಿಜ ಬಳಸಿಕೊಂಡಿತ್ತಾಗಿ,
ಕೂಡಲಸಂಗಯ್ಯನಲ್ಲಿ ಸರ್ವನಿವಾಸಿಯಾದೆ.

೪೮೭

ಆಚಾರವನಾಚಾರವಾಯಿತ್ತು ;
ಸೀಮೆ ನಿಸ್ಸೀಮೆಯಾಯಿತ್ತು.
ಪ್ರಾಣಸಂಚಲ ತಪ್ಪಿ ಲಿಂಗಸಂಚಲವಾಯಿತ್ತು.
ಎಲ್ಲಿ ಶಬ್ದವಲ್ಲಿ ಲಿಂಗ ಸ್ವಾಯತವಾಯಿತ್ತು ;
ಎಲ್ಲಿ ಸುಗಂಧವಲ್ಲಿ ಲಿಂಗ ಸ್ವಾಯತವಾಯಿತ್ತು.
ಕೂಡಲಸಂಗಮದೇವರ ಕರುಣೆ
ಕಡೆಗೋಡಿವರಿಯಿತ್ತಯ್ಯಾ ಎನ್ನ ಮೇಲೆ.

೪೮೮

ಮನವು ಮಹದೊಳಗೆ ಲೀಯವಾಗಿ ಪುಟವಿಡಿದು ಸುಳಿದಾಡುವ
ಮಹಾಮಹಿಮಂಗೆ ಅಹುದಾಗದೆಂಬ ಭ್ರಾಂತಿಯೇಕೋ ?
ತಹುದು, ಬಾರದೊಡೆ ಶಿರವನರಿದು ತಹುದು.
ಕೂಡಲಸಂಗಮದೇವರು ಬಲ್ಲಂತೆ ಆಗಲಿ !

೪೮೯

ಘನಗಂಭೀರ ಮಹಾಘನದೊಳಗಿನ್ ಘನಕ್ಕೆ ಘನವಾಗಿದ್ದೆನಯ್ಯಾ.
ಕೂಡಲಸಂಗಮದೇವಯ್ಯನೆಂಬ
ಮಹಾಬೆಳಗಿನ ಬೆಳಗಿನೊಳಗಿದ್ದೇನೆಂಬ
ಶಬ್ದ ಮುಗ್ಧವಾದುದೇನೆಂಬೆನಯ್ಯಾ ?

೪೯೦

ದಶದಿಕ್ಕು ಧರೆಗಗನವೆಂಬುದ ನಾನಱಿಯೆನಯ್ಯಾ.
“ ಲಿಂಗಮಧ್ಯೇ ಜಗತ್ ಸರ್ವಂ ”
ಎಂಬುದ ನಾನಱಿಯೆನಯ್ಯಾ.
ಲಿಂಗ ಸೋಂಕಿದ ಸುಖದೊಳಗೆ,
ಕೂಡಲಸಂಗಮದೇವಯ್ಯಾ,
ಅಂಬುಧಿಯೊಳಗೆ ಬಿದ್ದ ಆಲಿಕಲ್ಲಂತೆ
ಭಿನ್ನಭಾವವಱಿಯದೆ ‘ ಶಿವ ಶಿವಾ ’ ಎನ್ನುತಿರ್ದೆನು ನಾನು.

೪೯೧

ಕಾಣಬಾರದ ವಸ್ತು ಕೈಸೇರಿತ್ತಯ್ಯಾ;
ಆನಂದದಿಂದ ಆಡುವೆ ಹಾಡುವೆ !
ಎನ್ನ ಕಣ್ಣತುಂಬ ನೋಡುವೆ,
ಕೂಡಲಸಂಗಯ್ಯಾ ನಿನಗೆ !

೪೯೨

ಅಂತರಂಗ ಬಹಿರಂಗ ಆತ್ಮಸಂಗ ಒಂದೇ ಅಯ್ಯಾ !
ನಾದಬಿಂದು ಕಳಾತೀತ ಆದಿಯಾಧಾರ ನೀನೇ ಅಯ್ಯಾ !
ಆರೂಢದ ಕೂಟದ ಸುಖವ ಕೂಡಲಸಂಗಯ್ಯ
ತಾನೇ ಬಲ್ಲ !

೪೯೩

ಅಯ್ಯಾ, ನಿಮ್ಮ ಅನುಭಾವದಿಂದ ಎನ್ನ ತನು ಹಾಳಾಯಿತ್ತಯ್ಯಾ !
ಅಯ್ಯಾ, ನಿಮ್ಮ ಅನುಭಾವದಿಂದ ಎನ್ನ ಮನ ಹಾಳಾಯಿತ್ತಯ್ಯಾ !
ಅಯ್ಯಾ, ನಿಮ್ಮ ಅನುಭಾವದಿಂದ ಎನ್ನ ಕರ್ಮಛೇದನವಾಯಿತ್ತು !
ನಿಮ್ಮವರು ಹೇಳಿ ಅಡಿಗಡಿಗೆ ಭಕ್ತಿಯೆಂಬ ಒಡವೆಯ
ದಿಟಮಾಡಿ ತೋಱಿದರು, ಕಾಣಾ, ಕೂಡಲಸಂಗಮದೇವಾ.

೪೯೪

ಅಱಿವಿನ ತೃಪ್ತಿಗೆ ಅನುಭಾವವೇ ಆಶ್ರಯ.
ಲಿಂಗಾನುಭಾವದಿಂದ ನಿಮ್ಮ ಕಂಡೆನ್ನ ಮಱೆದೆ,
ಕೂಡಲಸಂಗಮದೇವಾ.

೪೯೫

ಕಂಡ ಕನಸು, ನಿಧಾನವ ಕಂಡೆನಯ್ಯಾ :
ಬಿಡಲಾಱದ ನಿಧಾನವ ಕಂಡೆನಯ್ಯಾ :
ಕೂಡಸಂಗಮದೇವನೆಂಬ ನಿಧಾನವ ಕಂಡು ಬಿಡಲಾಱೆನಯ್ಯಾ.

೪೯೬

ಕಣ್ಗಳು ತುಂಬಿದ ಬಳಿಕ ನೋಡಲಿಲ್ಲ,
ಕಿವಿಗಳು ತುಂಬಿದ ಬಳಿಕ ಕೇಳಲಿಲ್ಲ,
ಕೈಗಳು ತುಂಬಿದ ಬಳಿಕ ಪೂಜಿಸಲಿಲ್ಲ,
ಮನ ತುಂಬಿದ ಬಳಿಕ ನೆನೆಯಲಿಲ್ಲ
ಮಹಂತ ಕೂಡಲಸಂಗಮದೇವನ !

೪೯೭

ಅನ್ಯವಿಚಾರ ಮಱೆದು ನಿಮ್ಮ ವಿಚಾರ ಎಡೆಗೊಂಡಿತ್ತಾಗಿ
ಪ್ರಾಣದ ನೆಲೆಗೆಟ್ಟಿತ್ತಯ್ಯಾ,
ದಶವಾಯುಗಳ ಸಂಚು ತಪ್ಪಿತ್ತಯ್ಯಾ,
ಕರಣಂಗಳ ಲಿಂಗದ ಕಿರಣಂಗಳು ನುಂಗಿದುವಯ್ಯಾ;
ಒಳಗೆ ಕರತಳಾಮಳಕಗಂಡೆನಯ್ಯಾ;
ಹೊಱಗೇನೆಂದಱಿಯದೆ, ನೀನೇ ಗತಿಯಾಗಿರ್ದೆ
ಕೂಡಲಸಂಗಮದೇವಾ.

೪೯೮

ಕಣ್ಗಳ ನೋಟ, ಹೃದಯದ ಜ್ಞಾನ :
ಮನದಲ್ಲಿ ಮಾತನಾಡುತಿರ್ದೆನಯ್ಯಾ!
ಜೇನ ಮಳೆಗಳು ಕರೆದುವು;
ಅಮೃತದ ಕಳೆಗಳು ಸುರಿದುವು !
ಕೂಡಲಸಂಗಮದೇವನೆಂಬ ಸಾಗರದೊಳೋಲಾಡುತಿರ್ದೆನಯ್ಯಾ !

೪೯೯

ಆಲಿಕಲ್ಲ ಹರಳಿನಂತೆ, ಅರಗಿನ ಪುತ್ತಳಿಯಂತೆ
ತನು ಕರಗಿ ನೆರೆವ ಸುಖವ ನಾನೇನೆಂಬೆ?
ಕಡೆಗೋಡಿವರಿದುವೆನಗಯ್ಯಾ ನಯನದ ಸುಖಜಲಂಗಳು !
ನಮ್ಮ ಕೂಡಲಸಂಗಮದೇವರ ಮುಟ್ಟಿ
ನೆರೆವ ಸುಖವ ನಾನಾರಿಗೇನೆಂಬೆ ?

ಸಮಸ್ತ ಕತ್ತಲೆಯ ಮುಸಕ ಕಳೆದಿಪ್ಪ ಇರವ ನೋಡಾ !
ಬೆಳಗಿಂಗೆ ಬೆಳಗು ಸಿಂಹಾಸನವಾಗಿ,
ಬೆಳಗು ಬೆಳಗ ಕೂಡಿದ ಕೂಟವ
ಕೂಡಲಸಂಗಯ್ಯ ತಾನೇ ಬಲ್ಲ !

ಶ್ರೀ ಬಸವಣ್ಣನವರ ವಚನ ಸಂಗ್ರಹ

ವಚನಗಳ ಅಕಾರಾದಿ

ಅ

ಆ

ಇ

ಈ

ಉ

ಊ

ಎ

ಏ

ಐ

ಒ

ಓ

ಕ

ಗ

ಘ

ಚ

ಛ

ಜ

ತ

ದ

ಧ

ನ

ಭ

ಮ

ರ

ಲ

ವ

ಶ

ಸ

ಹ

ಜ್ಞ